ಸೆಪ್ಟೆಂಬರ್ 21, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2003
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಜೈಲು ಪೊಲೀಸೇ ಡ್ರಗ್ಸ್ ಸಪ್ಲೈಯರ್!



## ಕನ್ವಿಕ್ಷನ್ ಖೈದಿ ಜೈಲಿಂದ ಪರಾರಿ!



ಪರಪ್ಪನ ಅಗ್ರಹಾರದ ಕರ್ಮಕಾಂಡ!



## ಇನ್‌ಸ್ಟಾಗ್ರಾಂ ಲವ್; ಬಳಸಿಕೊಂಡು ಡೌವ್!

## ಲೈಬ್ರರಿ ಕ್ಲರ್ಕ್ ಆದ ಪ್ರಜ್ವಲ್!



## ಡೌರಿ ಕೇಸ್ ಎಸ್ಕ್ವಾಣ ಠುಸ್!



## ಗಂಡನ ಮುಗಿಸಿ 'ಕತೆ' ಕಟ್ಟಿದಳು!



## ಸಂಬಳ ಕೇಳಿದ ಸ್ನೇಹಿತನನ್ನು ಬಡಿಗೆಯಿಂದ ಬಡಿದು ಕೊಂದ!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಇಂಗ್ಲೀಷ್ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)



## ಲಯನ್ ಎಂ. ಮಲ್ಲಿಕಾರ್ಜುನಯ್ಯ

ಸಂಸ್ಥಾಪಕ ಸಂಪಾದಕರು

ಜನನ : 29-03-1954 ಮರಣ : 22-11-2005

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

1) ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು
2) ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
3) ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
4) ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
5) ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
6) ಬಸವ ಬಳಗ - ಸಂಸ್ಥಾಪಕರು, ಅಧ್ಯಕ್ಷರು
7) ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
8) ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಅಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯುರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'**
(ಅಭಿಮಾನಿ ಪ್ರಕಾಶನ-
ಈ ಸಂಜೆ ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'**

# ದಕ್ಷ ಪೊಲೀಸ್ ಇನ್ಸ್‌ಪೆಕ್ಟರ್ ಮಹಜನ್ ವಿರುದ್ಧ ಅಪಪ್ರಚಾರ ಯಾಕೆ?

ಕಳೆದೊಂದು ವಾರದಿಂದ ದಿನಗಳಿಂದ ಸಾಮಾಜಿಕ ಜಾಲತಾಣದಲ್ಲಿ ನೀವು ಗಮನಿಸಿರಬಹುದು. ಸೂರ್ಯನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸಂಜೀವ್‌ಕುಮಾರ್ (ಮಹಾಜನ್) ಮನೆಗಳ್ಳರನ್ನು ಬಂಧಿಸಿ 2 ಕೆಜಿ ಚಿನ್ನ ಜಪ್ತಿ ಮಾಡಿ, ಅದರಲ್ಲಿ ಕಾಲು ಕೆಜಿಯನ್ನು ಮಾಲೀಕರಿಗೆ ಒಪ್ಪಿಸಿ ಉಳಿದ ಎಲ್ಲಾ ಚಿನ್ನವನ್ನು ಲಪಟಾಯಿಸಿದ್ದಾರೆ! ಕದ್ದ ಚಿನ್ನದಲ್ಲಿ ತಮ್ಮ ಹೆಂಡತಿಗೆ ವಡವೆ ಮಾಡಿಸಿ ಹಾಕಿದ್ದಾರೆ!!

ಹೀಗೆ...ಎರಡ್ಮೂರು ಪೋಸ್ಟ್ ವೈರಲ್ ಆಗಿದ್ದವು. ಇದು ನಿಜಾನಾ... ಅಂತ ಎಸ್ಪಿ, ಡಿವೈಎಸ್ಪಿ ಅವರಲ್ಲಿ ವಿಚಾರಿಸಿದಾಗ, ಅವರು ಇನ್ಸ್‌ಪೆಕ್ಟರ್ ಮಹಾಜನ್ ಅವರ ದಕ್ಷತೆಯ ಬಗ್ಗೆ ಮಾತಾಡಿದರೆ ವಿನಃ ಒಂದೇ ಒಂದು ನೆಗೆಟಿವ್ ಮಾತಾಡಲಿಲ್ಲ! ಅಂದಮೇಲೆ, ಇದು ದಕ್ಷ ಪೊಲೀಸ್ ಅಧಿಕಾರಿ ಒಬ್ಬರ 'ತೇಜೋವಧೆ' ಮಾಡಿರೋ ಪ್ರಕರಣ!

ಯಾಕೀಗೆ? ಇದರಿಂದ ಅವರಿಗೇನು ಲಾಭ? ನಿಸ್ಸಂಶಯವಾಗಿ ಮಹಾಜನ್ ಹೆಸರು ಕೆಡಿಸೋ ಹುನ್ನಾರ! ಹಾಗಂತ ಸೂರ್ಯನಗರ ನಿವಾಸಿಗಳು ಹೇಳುತ್ತಾರೆ!

ಇಂಥಹದ್ದೊಂದು ಅಪಪ್ರಚಾರಕ್ಕೆ ಕಾರಣವಾದ ಮನೆ ಕಳ್ಳತನ ಪ್ರಕರಣದ ಬೆನ್ನು ಹತ್ತಿದಾಗ, ಕಳೆದ ಮೇ 3, 2025 ರಂದು ಆನೇಕಲ್ ತಾಲೂಕಿನ ಅಡಿ ಸೊನ್ನಹಟ್ಟಿ ಗ್ರಾಮದ ಚೇತನ್ ಎಂಬುವರ ಮನೆಯಲ್ಲಿ 249 ಗ್ರಾಂ ಚಿನ್ನದ ವಡವೆ ಕಳ್ಳತನವಾಗಿದ್ದು, ಈ ಬಗ್ಗೆ ಸೂರ್ಯನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು (182/25). ಆ ಪ್ರಕಾರ, ಇನ್ಸ್‌ಪೆಕ್ಟರ್ ಮಹಾಜನ್ ತನಿಖೆ ಕೈಗೊಂಡು ತಮಿಳುನಾಡಿನಲ್ಲಿ ಕಳ್ಳರನ್ನು ಪತ್ತೆಹಚ್ಚಿ ಡಿಂಡಿಗಲ್‌ನಿಂದ ಇಲ್ಲಿಗೆ ಕರೆತಂದು 247 ಗ್ರಾಂ ಚಿನ್ನವನ್ನು ಜಪ್ತಿ ಮಾಡಿ ಮಾಲೀಕರಿಗೆ ಒಪ್ಪಿಸಿದ್ದಾರೆ. ಇಂಥ ಸಂದರ್ಭದಲ್ಲಿ ಯಾರೋ ಸಮಾಜ ಸೇವಕರು(?) ಇನ್ಸ್‌ಪೆಕ್ಟರ್ ಮಹಾಜನ್ ಇನ್ನೂ ಜಾಸ್ತಿ ಚಿನ್ನ ಜಪ್ತಿ ಮಾಡಿದ್ದಾರೆ, ನುಂಗಿದ್ದಾರೆ ಅಂತೆಲ್ಲ ಪುಕಾರು ಹಬ್ಬಿಸಿ ವೈರಲ್ ಮಾಡಿದ್ದಾರೆ! ದೂರುದಾರ ಚೇತನ್ ಅವರೇ ಪೊಲೀಸ್ ಬಗ್ಗೆ ಒಂದು ಕೆಟ್ಟ ಮಾತಾಡಿಲ್ಲ, ಅವರನ್ನು ಆ ವಕೀಲರು ನೋಡೇ ಇಲ್ಲ! ಆದರೆ ಫೋನ್‌ನಲ್ಲಿ ಮಾತಾಡಿ, ಇನ್ಸ್‌ಪೆಕ್ಟರ್ ವಿರುದ್ಧ ಪ್ರೆಸ್ ಮೀಟ್ ಮಾಡಬೇಕು, ಧರಣಿ ಕೂರಿಸಬೇಕು 30 ಸಾವಿರ ಕೊಡಿ ಅಂತ ಕೇಳಿದ್ದಾರೆ!



ಕಳುವು ಮಾಲನ್ನು ಮಾಲೀಕರಿಗೆ ಒಪ್ಪಿಸುತ್ತಿರುವ ಇನ್ಸ್‌ಪೆಕ್ಟರ್ ಮಹಾಜನ್

**ಸಮಾಜ ಸೇವೆ ಮಾಡುವ ವಿಧಾನ ಇದೇನಾ?!**

ಈ ಬಗ್ಗೆ ಈಗಾಗಲೇ ಐ.ಜಿ. ಅವರ ಬಳಿ ದೂರು ಹೋಗಿದೆ. ಅವರು ತನಿಖೆ ನಡೆಸುತ್ತಿದ್ದಾರೆ. ಸತ್ಯ ಹೊರಬರುತ್ತದೆ. ಅದು ಬೇರೆ ವಿಚಾರ. ಆದರೆ, ಒಬ್ಬ ನಿಷ್ಠಾವಂತ ಪೊಲೀಸ್ ಅಧಿಕಾರಿಯನ್ನ ಅನ್ಯಾಯವಾಗಿ ಅವಮಾನಿಸಿದ್ದು ಸರಿಯೇ?

ನೆನಪಿಡಿ, ಬೆಂಗಳೂರು ಗ್ರಾಮಾಂತರ ಎಸ್ಪಿ ಸಿ.ಕೆ. ಬಾಬಾ, ಐ.ಜಿ. ರಮೇಶ್ ಬಾನೂತ್. ಆನೇಕಲ್ ಡಿವೈಎಸ್ಪಿ ಮೋಹನ್‌ಕುಮಾರ್ ಇವರೆಲ್ಲ ದಕ್ಷ ಪೊಲೀಸ್ ಅಧಿಕಾರಿಗಳೇ. ಇವರ ಕೈಕೆಳಗೆ ಕೆಲಸ ಮಾಡ್ತಿರೋ ಸಂಜೀವ್ ಕುಮಾರ್ ಮಹಾಜನ್ ಕೂಡ ದಕ್ಷರೇ. ಅವರನ್ನು ಹತ್ತಾರು ವರ್ಷದಿಂದ ನೋಡ್ತಿದ್ದೇವೆ. ಡ್ಯೂಟಿ ವಿಚಾರದಲ್ಲಿ ಒಮ್ಮೆಯೂ ಎಡವಿದವರಲ್ಲ... ಇಂಥ ಅಧಿಕಾರಿ ವಿರುದ್ಧ ಅಪಪ್ರಚಾರ ಯಾಕೆ? ಬಡ್ತಿ, ವರ್ಗಾವಣೆಗೆ ಅಡ್ಡಿಪಡಿಸೋ ಉದ್ದೇಶವೇ? ದೂರುದಾರ ಚೇತನ್ ಅವರೇ ಆ ಸಮಾಜ ಸೇವಕರಿಗೆ ಹೇಳುತ್ತಾರೆ, ನಮ್ಮ ಹೆಸರಲ್ಲಿ ನೀವೇಕೆ ಹೋರಾಟ ಮಾಡಬೇಕು? ಮಹಜರ್ ವೇಳೆ ನಾವೇ ಪೊಲೀಸರ ಜೊತೆ ಇದ್ದೆವು...ಎಲ್ಲಾ ಸರಿಯಾಗಿಯೇ ನಡೆದಿದೆ... ನಮ್ಮನ್ನೇಕೆ ದುಡ್ಡು ಕೇಳ್ತೀರಿ? ಎಂಬುದಾಗಿ! ಇಷ್ಟರಲ್ಲೇ ಅರ್ಥ ಆಗುತ್ತೆ... ಮಹಾಜನ್ ಯಾರದ್ದೋ ಸ್ವಾರ್ಥ ಲಾಲಸೆಗೆ ಟಾರ್ಗೆಟ್ ಆಗಿದ್ದಾರೆ!! ಈ ಬಗ್ಗೆ ಡಿ.ಜಿ. ಸಲೀಮ್ ಸರ್ ತನಿಖೆಗೆ ಆದೇಶಿಸಬೇಕಿದೆ! ಹಾಗೆಯೇ ಮಾಧ್ಯಮಗಳ ಹೆಸರಲ್ಲಿ ಟಾರ್ಗೆಟ್ ಮಾಡುವ ವಸೂಲಿ ವೀರರ ಬಗ್ಗೆ ತನಿಖೆಯಾಗಬೇಕಿದೆ!



ಸಂಪಾದಕ
**ಎಂ. ರಾಹುಲ್**


**ನನ್ನ ಟೀಂ**

ಹೆಚ್.ಕೆ. ಮಹದೇವ್
ಸಿದ್ದು ಮನ್ನಾಪೂರ
ಮೋಹನ್ ಬೋಳಂಗಡಿ
ಕೋ.ನಾ. ಪ್ರಭಾಕರ್
ವೀರಶೆಟ್ಟಿ ಕುಂಬಾರ
ಬಿ.ಎಂ. ಲವಕುಮಾರ್
ಶಾಂತರಾಜು ಬಿ. ಕಲ್ಲಹಳ್ಳಿ
ಬಿ.ವಿ. ಕುಲಕರ್ಣಿ
ಡಿ. ಸಿದ್ದರಾಜು
ರಾಜೀವ್ ಕೆ. ಬೈರಿ
ಸಂತೋಷ್‌ಕುಮಾರ್
ವೀರನಗೌಡ
ಮಂಜುನಾಥ ಕರೋಳಿ

ಅಕ್ಷರ ಜೋಡಣೆ :
ಈ. ರಾಜೇಶ್
ಪ್ರಸರಣಾಧಿಕಾರಿ :
ಜಿ. ವೀರನಗೌಡ

# ಕೋಮು'ವ್ಯಾದಿ' ಕರಾವಳಿಯಿಂದ ಮಂಡ್ಯಕ್ಕೆ ಶಿಫ್ಟ್ ಆಗಿದೆಯಾ?!

ಈ ಹಿಂದೆ ಕರಾವಳಿ ಜಿಲ್ಲೆಗಳಲ್ಲಿ ಮತೀಯ ಸಂಘರ್ಷ ಹೆಚ್ಚಿತ್ತು. ಆದರೆ, ಸರ್ಕಾರ ಅಲ್ಲಿ ಹೆಚ್ಚುವರಿ ಕಾನೂನು ಕ್ರಮಗಳನ್ನು ಕೈಗೊಂಡಿದ್ದರಿಂದ ಅಲ್ಲಿ ಸಂಘರ್ಷಗಳು ಕಮ್ಮಿಯಾದವು. ಕರಾವಳಿ ನಂತರ ಶಿವಮೊಗ್ಗದಲ್ಲಿ ಸಂಘರ್ಷ ಹೆಚ್ಚಾಯಿತು.ಈಗ ಅಲ್ಲಿಯೂ ಕಮ್ಮಿಯಾಗಿದ್ದು,ಪರಿಸ್ಥಿತಿ ಪೊಲೀಸ್ ಹಿಡಿತದಲ್ಲಿರುವಂತೆ ಕಂಡುಬರುತ್ತಿದೆ. ಕಳೆದ ವರ್ಷ ಇದೇ ಗೌರಿ ಗಣೇಶ ಹಬ್ಬದ ವೇಳೆ ಮಂಡ್ಯ ಜಿಲ್ಲೆಯ ನಾಗಮಂಗಲ, ಕೆರೆಗೂಡು ಕಡೆ ಕೋಮು ಸಂಘರ್ಷ ತಲೆ ಎತ್ತಿದ್ದು, ಜಿಲ್ಲಾ ಪೊಲೀಸ್ ಬುದ್ಧಿವಂತಿಕೆಯಿಂದ ಪರಿಸ್ಥಿತಿ ತಣ್ಣಗಾಗಿತ್ತು. ಆದರೆ ಈವಾಗ ಕರೆಕ್ಟ್ ಆಗಿ ಒಂದು ವರ್ಷಕ್ಕೆ ಮಂಡ್ಯ ಜಿಲ್ಲೆಯ ಮದ್ದೂರು ಪಟ್ಟಣದಲ್ಲಿ ಮತ್ತೆ ಶುರುವಾಗಿದೆ, ಕೋಮು ವ್ಯಾದಿ ಗಲಭೆ!





ಮಂಡ್ಯ ಜಿಲ್ಲೆಯ ಮದ್ದೂರು ಪಟ್ಟಣದ 'ರಾಮ್ ರಹೀಂ ನಗರ' ದಲ್ಲಿ ಕಳೆದ ಭಾನುವಾರ ಗಣೇಶನ ಮೆರವಣಿಗೆ ವೇಳೆ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆ ನಡೆದಿತ್ತು. ಕಲ್ಲು ತೂರಾಟ ಹಾಗೂ ಹಲ್ಲೆಯ ಘಟನೆಗಳು ನಡೆದಿದ್ದವು. ಈ ಹಿನ್ನೆಲೆಯಲ್ಲಿ ಪೊಲೀಸರು ಲಾಠಿ ಚಾರ್ಜ್ ಮಾಡಿ ಪರಿಸ್ಥಿತಿಯನ್ನು ನಿಯಂತ್ರಿಸಿದ್ದರು. ಇದೀಗ ಈ ಘಟನೆ ರಾಜಕೀಯ ತಿರುವನ್ನು ಪಡೆದುಕೊಳ್ಳುತ್ತಿರುವುದು ವಿಪರ್ಯಾಸ. ಆಡಳಿತ ಕಾಂಗ್ರೆಸ್ ಸರ್ಕಾರದ ವಿರುದ್ಧ ವಿಪಕ್ಷಗಳು ಮುಗಿಬಿದ್ದಿವೆ.....

ಗಣೇಶ ಮೆರವಣಿಗೆ ವೇಳೆಮುಸಲ್ಮಾನ್ ಕಿಡಿಗೇಡಿಗಳೆ ಕಲ್ಲು ಒಗೆದು ಗಲಭೆ ಸೃಷ್ಟಿಸಿದ್ದಾರೆ ಅನ್ನೋದು ವಿಪಕ್ಷಗಳ ವಾದ. ಇಲ್ಲಾ, ಆರೆಸೆಸ್ಸಿಗರೇ ಮಸೀದಿ ಬಳಿ ಕಿರಿಕ್ ತೆಗೆದು ಗಲಭೆ ಸೃಷ್ಟಿಸಿ ಅದನ್ನು ಮುಸಲ್ಮಾನರ ತಲೆಗೆ ಕಟ್ಟುತ್ತಿದ್ದಾರೆ ಅನ್ನೋದು ಕಾಂಗ್ರೆಸ್ ವಾದ. ಇವರಿಬ್ಬರಿಗಿಂತಲೂ ಮುಖ್ಯವಾಗಿ ನಮಗೆ ಬೇಕಿರುವುದು ಪೊಲೀಸ್ ಹೇಳಿಕೆ. ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಳದಂಡಿ ಸಮರ್ಥ ಪೊಲೀಸ್ ಅಧಿಕಾರಿ ಎಂಬುದು ಅವರು ಈ ಹಿಂದೆ ಬೆಂಗಳೂರು ಗ್ರಾಮಾಂತರ ಎಸ್ಪಿ ಆಗಿದ್ದಾಗಲೇ ಪ್ರೂವ್ ಆಗಿದೆ. ಈಗ ಮಂಡ್ಯ ಜಿಲ್ಲೆಯಲ್ಲಿ ಕೋಮು ಸಂಘರ್ಷ ಸೃಷ್ಟಿಸುತ್ತಿರುವ ಗಳಭೆಕೋರರನ್ನು ಕೂಡ ಅವರೇ ಪತ್ತೆ ಹಚ್ಚಬೇಕು ಮತ್ತು ಪತ್ತೆಹಚ್ಚುತ್ತಾರೆ ಕೂಡ. ಕಳೆದ ಎರಡು ವರ್ಷಗಳಲ್ಲಿ ಅಂದರೆ 2023- 24 ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು 41 ಕೋಮು ಗಲಭೆಗಳು ವರದಿಯಾಗಿದ್ದು, ಕೋಮುವಾದ ತಡೆ ಕಾನೂನಿನಡಿಯಲ್ಲಿ ಹಲವು ಪ್ರಕರಣ ದಾಖಲಾಗಿವೆ. ರಾಜ್ಯ ಸರ್ಕಾರ ಮಂಡ್ಯ ಮದ್ದೂರು ಘಟನೆಯ ಬಗ್ಗೆ ಎಚ್ಚೆತ್ತುಕೊಂಡು ಈಗಾಗಲೇ ತನಿಖೆಗೆ ಆದೇಶಿಸಿದೆ.



2023-2024 ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತೀಯ ಸಂಘರ್ಷ ಸಾಮಾನ್ಯವಾಗಿದ್ದು, ಗೃಹ ಇಲಾಖೆ ಕೋಮು ವಾದಿಗಳನ್ನು ಸದೆ ಬಡಿದು ಅಲ್ಲಿನ ಪರಿಸ್ಥಿತಿ ಸುಧಾರಿಸಿದ ಬಗ್ಗೆ ಮೊದಲೇ ಹೇಳಿದ್ದೇವೆ. ಆದರೆ ಇತ್ತೀಚಿನ ದಿನಗಳಲ್ಲಿ ಕರಾವಳಿಯಲ್ಲಿ ಮತೀಯ ಗಳಭೆಗಳ ಬದಲಾಗಿ, 'ಮತೀಯ ಹತ್ಯೆಗಳು' ನಡೆದಿದ್ದವು! ಈ ವಿಚಾರದಲ್ಲಿಯೂ ರಾಜ್ಯ ಸರ್ಕಾರ ಕೆಲವೊಂದು ಕಠಿಣ ತೀರ್ಮಾನಗಳನ್ನು ಕೈಗೊಂಡಿತ್ತು... ಸದ್ಯದ ಮಟ್ಟಿಗೆ ಕರಾವಳಿಯಲ್ಲಿ ಮತೀಯ ಸಂಘರ್ಷಕ್ಕೆ ಬ್ರೇಕ್ ಬಿದ್ದಂತಿದೆ.

ದುರಂತವೇನೆಂದರೆ, ಕರಾವಳಿಯ 'ವ್ಯಾದಿ' ಸಕ್ಕರೆ ನಾಡು ಅಕ್ಕರೆ ಬೀಡು ಮಂಡ್ಯಕ್ಕೆ ಶಿಫ್ಟ್ ಆಗಿ ಹೋಯಿತಾ?! ಈ ಅನುಮಾನ ಬರಲಿಕ್ಕೆ ಕಾರಣ,ಕಳೆದ ವರ್ಷ ನಾಗಮಂಗಲ ಕೆರೆಗೂಡು ಕಡೆ ಕೋಮು ಗಲಭೆ ನಡೆದಂತೆ ಈ ವರ್ಷವೂ ಮಂಡ್ಯದಲ್ಲಿ (ಮದ್ದೂರು) ಮತೀಯ ಸಂಘರ್ಷ ನಡೆದಿದೆ! ಅದೂ ಗಣೇಶ ಹಬ್ಬದಲ್ಲೇ!!

ಈ ಬೆಳವಣಿಗೆಯ ಬೆನ್ನಲ್ಲೇ ಹುಟ್ಟಿಕೊಂಡಿದೆ, ಹೊಸ ಪ್ರಶ್ನೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಬಗ್ಗೆ ಚರ್ಚೆಗಳು ಶುರುವಾಗಿದೆ. ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಕೆ ಮಾಡಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತೀಯ ಸಂಘರ್ಷಗಳು ದೊಡ್ಡ ಸಂಖ್ಯೆಯಲ್ಲಿ ನಡೆದಿವೆ. ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ, ಮುಸಲ್ಮಾನ್ ಕಿಡಿಗೇಡಿ ಅಶ್ರಫ್ ಹಾಗೂ ರೆಹಮನ್ ಮೂವರ ಬರ್ಬರ ಹತ್ಯೆ ಪ್ರಕರಣದ ಬಳಿಕ ರಾಜ್ಯ ಸರ್ಕಾರ ಕೆಲವೊಂದು ಕಠಿಣ ಕ್ರಮಗಳನ್ನು ಕೈಗೊಂಡ ಪರಿಣಾಮ ಅಲ್ಲೀಗ ತಕ್ಕ ಮಟ್ಟಿಗೆ ಶಾಂತಿ ಸ್ಥಾಪನೆ ಆಗಿದೆ. ಕರಾವಳಿ ಭಾಗದಲ್ಲಿ 'ಆ್ಯಂಟಿ ಕಮ್ಯುನಲ್ ವಿಂಗ್' ಸ್ಥಾಪನೆ ಆಗಿದ್ದು,ಅದು ಖಡಕ್ ಆಗಿ ಕೆಲಸ ಮಾಡ್ತಿದೆ. ವಿಪರ್ಯಾಸವೋ ಏನೋ ಎಂಬಂತೆ, ಇದೀಗ ಕರಾವಳಿ ಬದಲಾಗಿ ಮಂಡ್ಯ ಜಿಲ್ಲೆಯಲ್ಲಿ ಮತೀಯ ಸಂಘರ್ಷಗಳು ಶುರುವಾಗಿದ್ದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ.

ಕೋಮುವಾದ ತಡೆ ಕಾನೂನಿನಡಿಯಲ್ಲಿ ರಾಜ್ಯಾದ್ಯಂತ ಪೊಲೀಸರು ಕ್ರಮ ಕೈಗೊಂಡಿದ್ದಾರೆ. 2020ರಲ್ಲಿ 51, 202ರಲ್ಲಿ 72, 2022ರಲ್ಲಿ 99, 2023ರಲ್ಲಿ 118 ಹಾಗೂ 2024ರಲ್ಲಿ 143 ಪ್ರಕರಣಗಳು ದಾಖಲಾಗಿದೆ. ಈ ಮೂಲಕ ಮತೀಯ ಸಂಘರ್ಷ ನಿಯಂತ್ರಣಕ್ಕೆ ಪೊಲೀಸ್ ಇಲಾಖೆ ಪ್ರಯತ್ನ ನಡೆಸಿದೆ.ಅಂದಹಾಗೆ, ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಮತೀಯ ಗಲಭೆ ಪ್ರಕರಣ ದಾಖಲಾಗಿದೆ ಎಂದರೆ, ಬೆಂಗಳೂರು ನಗರ - 33, ಮೈಸೂರು- 02, ಹುಬ್ಬಳ್ಳಿ- ಧಾರವಾಡ- 19, ಮಂಗಳೂರು- 36, ಬೆಳಗಾವಿ -25, ಕಲಬುರಗಿ ನಗರ - 25, ತುಮಕೂರು- 33, ಮಂಡ್ಯ - 26, ಕೊಡಗು- 27, ಬೆಳಗಾವಿ ಜಿಲ್ಲೆ- 57, ದಕ್ಷಿಣ ಕನ್ನಡ -10, ಬಾಗಲಕೋಟೆ- 29, ದಾವಣಗೆರೆ- 22.

ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ಮೊನ್ನೆ ನಡೆದ ಘಟನೆಯ ಬಗ್ಗೆ ಎಚ್ಚೆತ್ತುಕೊಂಡು ಕಾನೂನು ಕ್ರಮ ಜರುಗಿಸಲು ಮುಂದಾಗಿರುವ ಸಂಸದ ಹೆಚ್.ಡಿ. ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮದ್ದೂರಿನಲ್ಲಿ ಮೊಕ್ಕಾಂ ಹೂಡಿದ್ದಾರೆ. ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಳದಂಡಿ ಈ ಘಟನೆಯ ಬಗ್ಗೆ ಪೂರ್ಣ ಪ್ರಮಾಣದ ವರದಿ ತಯಾರಿಸಿ ಸಿಎಂ ಸಿದ್ದರಾಮಯ್ಯ ನವರ ಕೈಗೂ ತಲುಪಿಸಿದ್ದಾರೆನ್ನಲಾಗಿದೆ.

ತಪ್ಪಿ ತಸ್ಥರು ಯಾರೇ ಆಗಿರಲಿ, ಅವರ ಮೇಲೆ ಕಾನೂನು ಕ್ರಮ ಜರಿಗಿಸಬೇಕಿದೆ. ಇಲ್ಲದಿದ್ದರೆ ಮುಂದೆ ಕೂಡ ಇದೇ ಘಟನೆಗಳು ಪುನರಾವರ್ತನೆ ಆಗುತ್ತಾ ಸಮಾಜದ ಸ್ವಾಸ್ತಯ ಕೆಡುತ್ತದೆ. ಹಾಗಾಗದಿರಲಿ ಎಂಬುದೇ 'ಪೊಲೀಸ್ ನ್ಯೂಸ್' ಹರಕೆ ಮತ್ತು ಹಾರೈಕೆ....

-ಸಂ.

# ಎಸ್. ನಾರಾಯಣ್ ವಿರುದ್ಧ ವರದಕ್ಷಿಣೆ ದೂರು ಹೆಟ್ಟಿದಳು, ಸೊಸೆ ಪವಿತ್ರ!!


**ಹಿರಿಯ ನಟ ನಿರ್ಮಾಪಕ ಹಾಗೂ ನಿರ್ದೇಶಕರಾದ ಎಸ್. ನಾರಾಯಣ್ ಮತ್ತು ಕುಟುಂಬದ ವಿರುದ್ಧ ಅವರ ಸೊಸೆ ಪವಿತ್ರಾ ವರದಕ್ಷಿಣೆ ಪೀಡನೆ ದೂರು ದಾಖಲಿಸಿದ್ದಾರೆ. ತಮ್ಮ ಪತಿ ಪವನ್, ಅತ್ತೆ ಭಾಗ್ಯವತಿ ಹಾಗೂ ಮಾವ ಎಸ್. ನಾರಾಯಣ್ ತಮಗೆ ಕೊಡಬಾರದ ಹಿಂಸೆ ಕೊಟ್ಟು ಮನೆಯಾಚೆ ಹಾಕಿದ್ದಾರೆ! ಮದುವೆ ಸಮಯದಲ್ಲಿ ಉಂಗುರ ಹಾಗೂ ನಗದು ಪಡೆದಿದ್ದಲ್ಲದೆ, ತಮ್ಮಿಂದ ಫಿಲ್ಮ್ ಇನ್‌ಸ್ಟಿಟ್ಯೂಟ್ ಸ್ಥಾಪಿಸಲು ಹಣ ಪಡೆದು, ಅದರಲ್ಲಾದ ನಷ್ಟವನ್ನು ಭರಿಸಲು ಮತ್ತೆ 10 ಲಕ್ಷ ರೂ. ಪಡೆದು ಪಡೆದಿದ್ದಾರೆ! ಆದರೂ ವಿವಿಧ ನೆಪ ಹೇಳ್ತಾ ಮತ್ತೆ ಮತ್ತೆ ಹಣಕ್ಕಾಗಿ ಪೀಡಿಸಿದ್ದು, ತಾನು ತವರಿಂದ ಹಣ ತರಲು ಒಪ್ಪದ ಕಾರಣ ತನ್ನನ್ನು ನಿಂಧಿಸಿ ಮನೆಯಿಂದ ಹೊರ ಹಾಕಿದ್ದಾರೆ ಎಂದು ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.**

ಕನ್ನಡ ಚಲನಚಿತ್ರರಂಗದ ಹಿರಿಯ ನಟ, ನಿರ್ದೇಶಕ ಮತ್ತು ನಿರ್ಮಾಪಕ ರಾದ ಎಸ್.ನಾರಾಯಣ್ ಹಾಗೂ ಕುಟುಂಬದ ವಿರುದ್ಧ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳ ದೂರು ದಾಖಲಾಗಿದೆ! ಎಸ್ನಾಣಿ ಅವರ ಕಿರಿಯ ಮಗನ ಪತ್ನಿ ಪವಿತ್ರ ತಮ್ಮ ಅತ್ತೆ ಮಾವ ಹಾಗೂ ಗಂಡನ ವಿರುದ್ಧ ವರದಕ್ಷಿಣೆ ಕಿರುಕುಳದ ದೂರು ನೀಡಿದ್ದು ಆ ದೂರಿನ ಆಧಾರದಲ್ಲಿ ಬೆಂಗಳೂರಿನ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

**ದೂರಿನ ಸಾರಾಂಶ**

2021ರಲ್ಲಿ ಎಸ್. ನಾರಾಯಣ್ ಹಾಗೂ ಭಾಗ್ಯವತಿ ಅವರ ಪುತ್ರ ಪವನ್ ಅವರನ್ನು ನಾನು ಮದುವೆಯಾಗಿದ್ದೆ. 2022ರಲ್ಲಿ ನಾನು ಹಾಗೂ ಪವನ್ ಮಾವನ ಮನೆ ಬಿಟ್ಟು ಬೇರೆ ಕಡೆ ಸಂಸಾರ ಹೂಡಿದೆವು.ಮೊದಲಿಗೆ ಎಲ್ಲಾ ಚೆನ್ನಾಗಿಯೇ ಇತ್ತು. ನಮಗೆ ಒಂದು ಗಂಡು ಮಗುವೂ ಆಯಿತು.

ಪವನ್ ಅವರು ಹೆಚ್ಚು ಓದಿಲ್ಲ, ಅವರು ಪದವೀಧರ ಅಲ್ಲದ್ದರಿಂದ ನಾನೇ ದುಡಿದು ಸಂಸಾರ ನಡೆಸುತ್ತಿದ್ದೆ. ನನ್ನ ಮಗು ಹುಟ್ಟಿದಾಗಿನಿಂದಲೂ ☞10





ಸೆಂಟ್ರಲ್ ಜೈಲ್ ಶುಚಿಯಾಗುವುದೇ?

# ಕನ್ವಿಕ್ಷನ್ ಖೈದಿ ಜೈಲ್ ಬ್ರೇಕ್! ಅಗ್ರಹಾರದ ಅಧಿಕಾರಿಗಳು ಶೇಕ್!!

**ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲಿನಲ್ಲಿದ್ದ ಸಜಾ ಖೈದಿಯೊಬ್ಬ ಕ್ಯಾನ್ಸರ್‌ನಿಂದ ಬಳಲುತ್ತಿದ್ದು ಹೆಚ್ಚಿನ ಚಿಕಿತ್ಸೆಗಾಗಿ ಜೈಲು ಪೊಲೀಸರು ಅವನನ್ನು ಹೊಸೂರು ರಸ್ತೆ ಕಿದ್ವಾಯಿ ಆಸ್ಪತ್ರೆಗೆ ಕರೆತಂದಿದ್ದರು. ಈ ವೇಳೆ ಎಲ್ಲೋ ನಿಂತಿದ್ದ ಅವರಿಗೆ ಚಳ್ಳೆಹಣ್ಣು ತಿನ್ನಿಸಿ, ನರ್ಸ್‌ಗಳಿಗೂ ಟಾಂಗ್ ಕೊಟ್ಟು ಆಸ್ಪತ್ರೆಯಿಂದ ಎಸ್ಕೇಪ್ ಆಗಿಬಿಟ್ಟಿದ್ದಾನೆ!!**



ಖೈದಿ ಚೇತನ್ ಕಲ್ಯಾಣಿ

**ಹೆಚ್.ಕೆ. ಮಹದೇವ್**

ಚೇತನ್ ಕಲ್ಯಾಣಿ ಎಂಬ ಬಿಜಾಪುರ ಮೂಲದ ಸಜಾ ಖೈದಿ ಕೊಲೆ ಕೇಸ್ ಒಂದರಲ್ಲಿ ಜೀವಾವಧಿ ಶಿಕ್ಷೆಯಾಗಿ ಅರೇಳು ವರ್ಷಗಳಿಂದ ಬಿಜಾಪುರ ಜೈಲಿನಲಿದ್ದ. ಕ್ಯಾನ್ಸರ್ ಪೀಡಿತನಾಗಿದ್ದ ಆತನಿಗೆ ಬೆಂಗಳೂರಿನ ಪರಪ್ಪನ ಅಗ್ರಹಾರವೇ ಸರಿ ಅಂದುಕೊಂಡು ಇಲ್ಲಿಗೆ ಶಿಫ್ಟ್ ಮಾಡಲಾಗಿತ್ತು. ಇಲ್ಲಿರೋ ಜೈಲ್ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆದುಕೊಂಡು ಇದ್ದ. ಮೊನ್ನೆ ಈತನಿಗೆ ಹೆಚ್ಚಿನ ಚಿಕಿತ್ಸೆಯ ಅಗತ್ಯವಿದೆ ಅಂತೇಳಿ ವೈದ್ಯರು ತಿಳಿಸಿದ್ದು, ಅದರಂತೆ ಜೈಲು ಪೊಲೀಸರು ಹೊಸೂರು ರಸ್ತೆಯಲ್ಲಿರುವ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಗೆ ಕರೆತಂದಿದ್ದರು. ಅವನನ್ನು ಬೆಡ್ ಒಂದರಲ್ಲಿ ಮಲಗಿಸಿ ಅಡ್ಮಿಶನ್ ಫಾರಂ ಭರ್ತಿ ಮಾಡಿಕೊಂಡು ಮೈ ಮರೆತಿದ್ದಾಗ, ಐನಾತಿ ಆಸಾಮಿ ಕಲ್ಯಾಣಿ, ಪೊಲೀಸರ ನಿರ್ಲಕ್ಷ ತನವನ್ನೇ ಟ್ರಂಪ್ ಕಾರ್ಡ್ ಮಾಡಿಕೊಂಡು ಅಲ್ಲಿಂದ ಗ್ರೇಟ್ ಎಸ್ಕೇಪ್ ಆಗಿಬಿಟ್ಟಿದ್ದಾನೆ! ಆಗ ಅಮಾಯಕ ನರ್ಸ್ ಒಬ್ಬಳು ಅವನ ಹಿಂದೆ ಓಡಿ ಬಂದು ಕೂಗಾಡ್ತಾ ಅಲ್ಲಿದ್ದ ಸಿಬ್ಬಂದಿಯನ್ನು ಸೇರಿಸುವಷ್ಟರಲ್ಲಿ ಆತ ಆಸ್ಪತ್ರೆ ಬಿಟ್ಟು ಬೀದಿಗೆ ಬಿದ್ದು ಓಡಿಯಾಗಿತ್ತು!! ಈ ದೃಶ್ಯ ಆಸ್ಪತ್ರೆಯಲಿದ್ದ ಸಿಸಿಟಿವಿ ಕ್ಯಾಮೆರಾ ಕಣ್ಣಿನಲ್ಲಿ ರೆಕಾರ್ಡ್ ಆಗಿದೆ. ಈ ಘಟನೆಗೆ ಜೈಲು ಪೊಲೀಸರ ಬೇಜವಾಬ್ದಾರಿಯೇ ಕಾರಣ. ಈತ ಆಸ್ಪತ್ರೆಯಿಂದ ತಪ್ಪಿಸಿಕೊಂಡು ಓಡಿ ಹೋಗುವಾಗ ಈತನ ಕಾವಲಿಗೆ ಬಂದಿದ್ದ ಪರಪ್ಪನ ಅಗ್ರಹಾರದ ಜೈಲು ಪೊಲೀಸರು ಅಡ್ಮಿಶನ್ ನೆಪದಲ್ಲಿ ನಾಪತ್ತೆಯಾಗಿದ್ದರ ಹಿಂದೆ ಅನುಮಾನಗಳಿವೆ!

ಇಬ್ಬರು ಅಸಹಾಯಕ ನರ್ಸ್‌ಗಳು ಈ ಕೊಲೆಗಾರ ಖೈದಿಯ ಹಿಂದೆಯೇ ಓಡಿ ಹೋಗಿ ತಡೆಯಲು ಪ್ರಯತ್ನ ನಡೆಸಿರುವುದು, ಆತ ಬಹಳ ವೇಗವಾಗಿ ಅವರನ್ನು ತಳ್ಳಿ ಚಾಣಾಕ್ಷತೆಯಿಂದ ಎಸ್ಕೇಪ್ ಆಗಿ ಆಸ್ಪತ್ರೆಯ ಮುಂದಿನ ರಸ್ತೆಯಲ್ಲಿ ವೇಗವಾಗಿ ಓಡಿ ತಪ್ಪಿಸಿಕೊಂಡು ಹೋಗಿರುವುದು ಕೂಡ ಆಸ್ಪತ್ರೆಯ ಹೊರಗಿನ ಸಿಸಿಟಿವಿಯಲ್ಲಿ ರೆಕಾರ್ಡ್ ಆಗಿದೆ.

ಲಂಚಗುಳಿತನ ಹಾಗೂ ಅವ್ಯವಸ್ಥೆಯ ಆಗರವಾಗಿರುವ ಪರಪ್ಪನ ಅಗ್ರಹಾರ ಕೇಂದ್ರ, ಕಾರಾಗೃಹವೀಗ ಸರಿಯಾದ ಮೇಟಿಯಿಲ್ಲದ, ಬೇಲಿ ಕಾಂಪೌಂಡ್ ಯಾವುದೂ ಇಲ್ಲದ ಪಾಳು ಬಯಲಿನಂತಾಗಿದೆ. ಅಲ್ಲೀಗ ದುಡ್ಡು ಕೊಟ್ಟವರಿಗೆ ಮಣೆ ಹಾಕುವ ಆಟ ಶುರುವಾಗಿರುವುದರಿಂದ ಎಲ್ಲವೂ ಅಕ್ರಮ, ಕಾನೂನುಬಾಹಿರ... ಶಿಸ್ತು ಎಂಬುದು ಅಲ್ಲೀಗ ನಾಮಾವಶೇಷವಾಗಿದೆ. ಇತ್ತೀಚಿಗಷ್ಟೇ ಕರ್ನಾಟಕ ರಾಜ್ಯ ಕಾರಾಗೃಹಗಳ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿರುವ ಶಿಸ್ತಿನ ಸಿಪಾಯಿ ದಕ್ಷ ಐಪಿಎಸ್ ಅಧಿಕಾರಿಗಳಾದ ಬಿ. ದಯಾನಂದ ಸಾಹೇಬ್ರು ಪರಪ್ಪನ ಅಗ್ರಹಾರ ಜೈಲಿನೊಳಗೊಂದು ಶಿಸ್ತಿನ ಖಡಕ್ ಪೊಲೀಸ್ ವ್ಯವಸ್ಥೆ ರೂಪಿಸುತ್ತಾರೆಂದು ಸಜ್ಜನ ಅಧಿಕಾರಿಗಳು ಕಾಯುತ್ತಿದ್ದಾರೆ. ಆ ಕೆಲಸ ಬೇಗ ಆಗಲಿ ಎಂದು ಆಶಿಸೋಣವೇ....



ತಪ್ಪಿಸಿಕೊಂಡು ಹೋಗುವ ದೃಶ್ಯಗಳು



ಮಹಾ ಅಧೀಕ್ಷಕ ಶ್ರೀ ಬಿ. ದಯಾನಂದ



ಹಿಂದಿನ ಮಹಾ ಅಧೀಕ್ಷಕಿ ಶ್ರೀಮತಿ ಮಾಲಿನಿ

### ಡ್ರಗ್ಸ್ ಸಪ್ಲೈ ಮಾಡ್ತಿದ್ದ ಜೈಲ್ ವಾರ್ಡರ್ ಅರೆಸ್ಟ್!

ಪರಪ್ಪನ ಕೇಂದ್ರ ಕಾರಾಗೃಹದಲ್ಲಿ ಬೇಲಿಯೇ ಎದ್ದು ಹೊಲ ಮೇಯೋ ಕತೆ ಕಡೆಗೂ ಬಯಲಾಯ್ತು ಕಣ್ರೀ. ಕಲ್ಲಪ್ಪ ಅಬಾಚ್ಚಿ ಎಂಬ 2018 ಬ್ಯಾಚ್‌ನ ಜೈಲ್ ವಾರ್ಡರ್, ಜೈಲಿನ ಒಳಗೆ ಆಶೀಶ್ ಆಯಿಲ್ ಡ್ರಗ್ಸ್ ತಂದು ಸಪ್ಲೈ ಮಾಡುವಾಗ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿದ್ದು, ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ, ಈತನ ಅರೆಸ್ಟ್ ಆಗಿ, ಇದೀಗ ತಾನು ಡ್ಯೂಟಿ ಮಾಡುತ್ತಿದ್ದ ಜೈಲಿನಲ್ಲಿಯೇ ಕಂಬಿ ಎಣಿಸುತ್ತಿದ್ದಾನೆ! ಆರೋಪಿ ಕಲ್ಲಪ್ಪ ಅಬಾಚಿ ಎಕ್ಸ್ ಆರ್ಮಿ ಸೋಲ್ಜರ್ ಎಂಬುದು ವಿಪರ್ಯಾಸ. ಈತ ಧಾರವಾಡ ಜೈಲಿನಿಂದ ಇತ್ತೀಚಿಗಷ್ಟೇ ಬೆಂಗಳೂರಿಗೆ ವರ್ಗಾವಣೆಯಾಗಿ ಬಂದಿದ್ದ.

2018 ರಲ್ಲಿ ಜೈಲ್ ವಾರ್ಡರ್ ಆಗಿ ನೇಮಕವಾಗಿದ್ದ ಈತ ಎಷ್ಟು ತಿಗಳಿನಿಂದ ಈ ಡ್ರಗ್ಸ್ ಸಪ್ಲೈ ದಂಧೆ ಯಲ್ಲಿ ತೊಡಗಿದ್ದನೆಂಬುದು ತನಿಖೆ ಯಿಂದ ಗೊತ್ತಾಗಬೇಕಿದೆ. ಈತನ ಡ್ರಗ್ಸ್ ದಂಧೆಯ ಹಿಂದೆ ಯಾರ್ಯಾರು ಇದ್ದಾರೆಂಬುದು ಪೊಲೀಸ್ ತನಿಖೆಯಿಂದಷ್ಟೆ ತಿಳಿದು ಬರಬೇಕಿದೆ. ಜೈಲಿನ ಕ್ಯಾಂಟೀನ್ ವಸ್ತುಗಳ ಮೂಲಕ, ವೇಸ್ಟ್ ಡಿಸ್ಪೋಸ್ ಮಾಡುವ ಟ್ರ್ಯಾಕ್ಟರ್ ಮೂಲಕ ಯತೇಚ್ಛವಾಗಿ ಆಶೀಶ್ ಆಯಿಲ್ ಎಂಬ ದುಬಾರಿ ಮತ್ತು ಮಾರಕ ಡ್ರಗ್ಸ್ ಸರಬರಾಜಗುತ್ತಿರುವ ಗುಮಾನಿ ಹಿಂದಿನಿಂದಲೂ ಹಲವರಿಗೆ ಇತ್ತಂತೆ! ಆದರೆ ಯಾರೂ ಬಾಯಿ ಬಿಟ್ಟಿರಲಿಲ್ಲ!

ಇದೀಗ ಈತ ರೆಡ್ ಹ್ಯಾಂಡ್ ಆಗಿ ಆಶಿಸ್ ಆಯಿಲ್ ಬಾಟಲ್ ಸಮೇತ ಸಿಗೇಬಿದ್ದಿದ್ದಾನೆ. ಈ ಘಟನೆಯಿಂದ ಪರಪ್ಪನ ಅಗ್ರಹಾರ ಬಂದೀಖಾನೆಯಲ್ಲಿ ಈ ಆಶಿಸ್ ಆಯಿಲ್ ದಂಧೆ ಸದ್ದಿಲ್ಲದೇ ಸರಾಗವಾಗಿ ನಡೆಯುತ್ತಿರುವುದು ದೃಡಪಟ್ಟಿದೆ! ಕಳೆದ ವರ್ಷ ಮತ್ತು ಇದೇ ವರ್ಷ ಬೆಂಗಳೂರಿನ ಸಿಸಿಬಿ ಪೊಲೀಸ್ ರೈಡ್ ನಲ್ಲೂ ಗಾಂಜಾ ಮತ್ತು ಆಶೀಶ್ ಆಯಿಲ್ ಸೇದುವ ಚಿಮಿಣಿಗಳು ಸಿಗರೇಟ್‌ಗಳು ದೊರಕಿದ್ದವು. ಪ್ರತಿನಿತ್ಯ ಜೈಲಿಗೆ ಇದೇ

☞ 12

## ವಿಷ ಸಿಗಲಿಲ್ಲ ಆದ್ರೆ ಬೆಡ್‌ಶೀಟ್ ದಿಂಬು ಸಿಕ್ತು!

ರೇಣುಕಾಸ್ವಾಮಿ ಕೊಲೆ ಕೇಸ್ ಆರೋಪಿ ದರ್ಶನ್ ಇಂದು ನಡೆದ ಕೋರ್ಟ್ ಕಲಾಪದ ವೇಳೆ, ದಯಮಾಡಿ ನನಗೆ ವಿಷ ಕೊಡಿ ಎಂದು ನಟ ದರ್ಶನ್ ನ್ಯಾಯಾಧೀಶರ ಮುಂದೆ ಮನವಿ ಮಾಡಿಕೊಂಡು ಕಣ್ಣೀರಿಟ್ಟ ಘಟನೆ ನಡೆದಿದೆ. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ರದ್ದಾಗಿ ಜೈಲುವಾಸ ಅನುಭವಿಸುತ್ತಿರುವ ನಟ ದರ್ಶನ್ ಸೇರಿ ಇನ್ನಿತರ ಆರೋಪಿಗಳನ್ನು ರಾಜ್ಯದ ಇತರೆ ಕಾರಾಗೃಹಗಳಿಗೆ ವರ್ಗಾವಣೆ ಮಾಡುವಂತೆ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಅರ್ಜಿ ಹಾಗೂ ಹೆಚ್ಚುವರಿ ಹಾಸಿಗೆ ಹಾಗೂ ದಿಂಬು ನೀಡುವಂತೆ ದರ್ಶನ್ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿ ವಿಚಾರಣೆ ಇಂದು ನಗರದ 64ನೇ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ನಡೆಯಿತು.

ವಿಚಾರಣೆ ಸಂದರ್ಭದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಪರಪ್ಪನ ಅಗ್ರಹಾರದಿಂದ ಹಾಜರಾದ ದರ್ಶನ್, ನನಗೆ ದಯಮಾಡಿ ವಿಷ ನೀಡಿ. ಬಿಸಿಲು ನೋಡಿ ಬಹಳ ದಿನವಾಗಿದೆ. ಬಟ್ಟೆಗಳು ವಾಸನೆ ಬರುತ್ತಿವೆ. ಫಂಗಸ್‌ನಿಂದಾಗಿ ಇಲ್ಲಿ ಬದುಕಲು ಆಗುತ್ತಿಲ್ಲ, ದಯಮಾಡಿ ನನಗೆ ವಿಷ ನೀಡುವಂತೆ ಆದೇಶಿಸಿ ಎಂದು ಮನವಿ ಮಾಡಿದರು.

ಈ ಮನವಿಗೆ ಜಡ್ಜ್ ಹಾಗೆಲ್ಲ ಆದೇಶ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು. ವಿಷ ಕೊಡಿ ಎಂದು ದರ್ಶನ್ ಮೂರು ಬಾರಿ ಬೇಡಿಕೊಂಡರೆ ಫಂಗಸ್ ಆಗಿದೆ ಎಂದು ಹಲವು ಬಾರಿ ಅಳಲು ತೋಡಿಕೊಂಡರು. ದೈವ ಭಕ್ತರಾಗಿರುವ ದರ್ಶನ್ ಇಂದು ಹಣೆಗೆ ಕುಂಕುಮ ಹಚ್ಚಿಕೊಂಡು ವಿಚಾರಣೆಗೆ ಹಾಜರಾಗಿದ್ದು ವಿಶೇಷವಾಗಿತ್ತು. ಪ್ರಾಸಿಕ್ಯೂಷನ್ ಮತ್ತು ಹೆಚ್ಚುವರಿ ಹಾಸಿಗೆ ಹಾಗೂ ದಿಂಬು ನೀಡುವಂತೆ ದರ್ಶನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ಪೂರ್ಣಗೊಳಿಸಿರುವ ಕೋರ್ಟ್ ಇಂದು ಮಧ್ಯಾಹ್ನ 3 ಗಂಟೆಗೆ ತೀರ್ಪು ಪ್ರಕಟಿಸುವುದಾಗಿ ಹೇಳಿತ್ತು. ಮೂರು ಗಂಟೆಯ ಬಳಿಕ ಮುಂದುವರಿದ ಕಲಾಪದಲ್ಲಿ ದರ್ಶನ್ ಗೆ ಲಾಟರಿ ಹೊಡೆದಿದೆ!

ನಟ ದರ್ಶನ್ ಅಂಡ್ ಗ್ಯಾಂಗ್ ಜಾಮೀನು ಗಿಟ್ಟಸೋ ಮುನ್ನ ಯಾವ್ಯಾವ ಜೈಲುಗಳಲ್ಲಿದ್ರೋ ಈಗ ಅದೇ ಜೈಲಿಗೆ ಕಳುಹಿಸಬೇಕು ಎಂದು ಪೊಲೀಸ್ ಇಲಾಖೆ ಸಲ್ಲಿಸಿದ್ದ ಅರ್ಜಿಯನ್ನು 64ನೇ ಸಿಸಿಎಚ್ ಕೋರ್ಟ್ ವಜಾ ಮಾಡಿದೆ!

ಇಲ್ಲಿಗೆ, ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಬಳ್ಳಾರಿ ಜೈಲಿಗೆ ಶಿಫ್ಟ್ ಆಗುವ ಅಪಾಯದಿಂದ ಡಿ ಬಾಸ್ ಪಾರಾಗಿದ್ದಾರೆ! ಮಾತ್ರವಲ್ಲ, ನಾಳೆ ಬರಲಿರೋ ಬೇಸಿಗೆಯಲ್ಲಿ ಬಳ್ಳಾರಿಯ ಸುಡು ಬಿಸಿಲಿನಲ್ಲಿ ಸುಟ್ಟು ಕರಿಯನಾಗುವುದರಿಂದಲೂ ದರ್ಶನ್ ಬಚಾವ್ ಆಗಿದ್ದಾರೆ! ಇನ್ನುಳಿದಂತೆ, ದರ್ಶನ್ ಪರ ವಕೀಲರು ದರ್ಶನ್‌ಗೆ ಕನಿಷ್ಠ ಮೂಲಸೌಕರ್ಯಗಳನ್ನು ನೀಡಬೇಕೆಂದು ಕೋರಿದ್ದ ಅರ್ಜಿಯನ್ನು ಕೋರ್ಟ್ ಮಾನ್ಯ ಮಾಡಿದೆ.



ಜೈಲು ಮ್ಯಾನುಯಲ್ ಪ್ರಕಾರ ಏನೆಲ್ಲಾ ಸೌಲಭ್ಯ ಕೊಡಬಹುದೊ ಅದನ್ನು ಕೊಡಿ ಎಂದು ಕೋರ್ಟ್ ಆದೇಶ ನೀಡಿದೆ. ಆದರೆ ಮತ್ತೆ ಏನಾದ್ರು ಜೈಲಿನಲ್ಲಿ ರಾಜಾತಿಥ್ಯ ಕಂಡು ಬಂದ್ರೆ, ಬೇರೆ ಜೈಲಿಗೆ ಶಿಫ್ಟ್ ಮಾಡುವ ಅಧಿಕಾರ ಜೈಲಿನ ಐಜಿ ಯವರಿಗಿದೆ ಎಂಬುದನ್ನು ಒತ್ತಿ ಹೇಳಿದೆ. ಜೈಲಿನ ಮ್ಯಾನ್ಯುಯಲ್ ಪ್ರಕಾರ ವಾಕಿಂಗ್ ಮಾಡಲು ಅವಕಾಶ ಕೊಡಬಹುದು. ಒಳ್ಳೆಯ ಹೊದಿಕೆ ಮತ್ತು ತಲೆ ದಿಂಬು ಕೊಡಬಹುದು... ಕಳೆದ ಸಲ ಕೋರ್ಟ್‌ನಲ್ಲಿ ದರ್ಶನ್ ಬೆಡ್‌ಶೀಟ್, ತಲೆ ದಿಂಬನ್ನಾದರೂ ಕೊಡಿ ಎಂದು ಕೋರಿಕೊಂಡಿದ್ದು, ಇದಕ್ಕೆ ಮಾನ್ಯ ನ್ಯಾಯಾಲಯ ತಥಾಸ್ತು ಎಂದಿದೆ! ಇಷ್ಟರ ಮಟ್ಟಿಗೆ ಮೊಗ್ಯಾಂಭೋ ಖುಷ್ ಹುವಾ.....!! ☯

# ಅಸ್ಸಾಂ ಮಹಿಳೆ ಜೊತೆ ಇನ್‌ಸ್ಟಾಗ್ರಾಂ ಪ್ರೇಮ ಬಳಸಿಕೊಂಡು ಬೀಸಾಡಿದ ಜಮೀರ್ ಅರೆಸ್ಟ್!

**ಇನ್‌ಸ್ಟಾಗ್ರಾಂ ಮೂಲಕ ಪರಿಚಯವಾದ ಅಸ್ಸಾಂ ಮಹಿಳೆಯನ್ನು ಬಂಗಾರಪೇಟೆ ಯುವಕನೊಬ್ಬ ಪ್ರೀತಿ ಬಲೆಗೆ ಬೀಳಿಸಿಕೊಂಡು ಮದುವೆಯಾಗುವುದಾಗಿ ಆಸೆ ತೋರಿಸಿ ದೈಹಿಕ ಸಂಪರ್ಕ ಪಡೆಯುವಾಗ ವೈಯಕ್ತಿಕ ವಿಡಿಯೋವನ್ನು ತೆಗೆದು ಕೇಳಿದಷ್ಟು ಹಣ ಕೊಡದಿದ್ದರೆ ಬಹಿರಂಗಪಡಿಸುವುದಾಗಿ ಬ್ಲಾಕ್‌ಮೇಲ್ ಮಾಡಿ ಲಕ್ಷಾಂತರ ರೂ.ಗಳನ್ನು ಪಡೆದುಕೊಂಡಿದ್ದ ಯುವಕನನ್ನು ಮದುವೆಯಾಗುವಂತೆ ಕೇಳಿದಕ್ಕೆ ಮಹಿಳೆಯನ್ನು ಕೂಡಿ ಹಾಕಿ ಹಿಂಸೆ ನೀಡುತ್ತಿದ್ದವನಿಂದ ತಪ್ಪಿಸಿಕೊಂಡು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ ಹಿನ್ನೆಲೆಯಲ್ಲಿ ಯುವಕನನ್ನು ಬಂಧಿಸಿ ತನಿಖೆ ಕೈಗೊಂಡಿದ್ದಾರೆ.**

**ಕೋಲಾರ**

✍ ಕೋಲಾರ ಮಂಜು




ಸಂತ್ರಸ್ತೆ ಅಸ್ಸಾಂನ ಸೋನಿಯಾ ಶರ್ಮ

ಅಸ್ಸಾಂ ರಾಜ್ಯದ ಗೋವಾಹಟಿಯಲ್ಲಿ ವಾಸವಾಗಿರುವ ಸೋನಿಯಾ ಶರ್ಮ (32) ಎಂಬ ಮಹಿಳೆಯು ನಗರದ ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿರುತ್ತಾಳೆ. ಕಳೆದ 12 ವರ್ಷದ ಹಿಂದೆ ಶಿಕ್ಷಕರೊಬ್ಬರನ್ನು ಮದುವೆಯಾಗಿದ್ದು ಇವರಿಗೆ ಒಬ್ಬ ಮಗಳಿರುತ್ತಾಳೆ. ಗಂಡ, ಮಗುವಿನೊಂದಿಗೆ ಸುಖವಾಗಿ ಜೀವನ ಸಾಗಿಸುತ್ತಿರುವ ಸಂದರ್ಭದಲ್ಲಿ ಸೋನಿಯಾ ಶರ್ಮಗೆ ಕಳೆದ ಒಂದು ವರ್ಷದ ಹಿಂದೆ ಇನ್‌ಸ್ಟಾಗ್ರಾಂ ಹಾಗೂ ಪಬ್ಜಿ ಆನ್‌ಲೈನ್ ಗೇಮ್ ಮೂಲಕ ಬಂಗಾರಪೇಟೆ ಪಟ್ಟಣದ ನ್ಯೂ ಟೌನ್ ಬಡಾವಣೆಯ ವಾಸಿ ಜಮೀರ್ ಪಾಷ (26) ಎಂಬ ಯುವಕನೊಬ್ಬ ಪರಿಚಯವಾಗಿ ಫೋನ್‌ನಲ್ಲಿ ಮಾತನಾಡುತ್ತಾ, ಪರಸ್ಪರ ಚಾಟಿಂಗ್ ಮಾಡುತ್ತಾ ಇಬ್ಬರ ನಡುವೆ ಸ್ನೇಹ ಬೆಳೆಯುತ್ತಾ ಹೋಗುತ್ತದೆ. ಜೊತೆಗೆ ಹಣ ಬೇಕೆಂದಾಗಲೆಲ್ಲ 500, 1000 ರೂ.ಗಳನ್ನು ಸೋನಿಯಾ ಶರ್ಮ ಫೋನ್‌ಪೇ ಮಾಡುತ್ತಿರುತ್ತಾಳೆ. ಹಣ ಇದ್ದಾಗ ಜಮೀರ್‌ಪಾಷ ಫೋನ್‌ಪೇ ಮೂಲಕ ಹಣ ವಾಪಸು ಕಳುಹಿಸುತ್ತಿರುತ್ತಾನೆ. ತಿಂಗಳುಗಳು ಕಳೆಯುತ್ತಿದ್ದಂತೆ ಇನ್‌ಸ್ಟಾಗ್ರಾಂನಲ್ಲಿ ಪರಸ್ಪರ ಪ್ರೀತಿಸಲು ಪ್ರಾರಂಭಿಸುತ್ತಾರೆ. ಇಬ್ಬರ ನಡುವಿನ ಪ್ರೀತಿ, ಪ್ರೇಮ ಮೊಬೈಲ್ ಫೋನ್‌ಗೆ ಸೀಮಿತವಾಗಿದ್ದು ಒಂದು ದಿನ ಜಮೀರ್‌ಪಾಷ ನಿನ್ನನ್ನು ನೋಡಿ, ಹತ್ತಿರದಿಂದ ಮಾತನಾಡಿಸಬೇಕು ಅದಕ್ಕೆ ನೀವ್ಮು ಊರಿಗೆ ಬರಲೇ ಎಂದು ಕೇಳುತ್ತಾನೆ. ಆಗ ಸೋನಿಯಾ ಶರ್ಮ ನೀನು ಬರುವುದು ಬೇಡ ನಾನೇ ನೇರವಾಗಿ ಗೋವಾಹಟಿಯಿಂದ ರೈಲಿನಲ್ಲಿ ಬಂಗಾರಪೇಟೆಗೆ ಬರುವುದಾಗಿ ಹೇಳಿದಳು. ಅದರಂತೆ ಸೋನಿಯಾ ಶರ್ಮ ಬಂಗಾರಪೇಟೆಯ ಜಮೀರ್‌ಪಾಷನ ಪ್ರೀತಿಯನ್ನು ನಂಬಿಕೊಂಡು ಅಸ್ಸಾಂನಿಂದ ಆಗಾಗ್ಗೆ ಬಂಗಾರಪೇಟೆಗೆ ಬಂದು ಒಂದೆರಡು ದಿನ ಜಮೀರ್‌ಪಾಷನ ಜೊತೆ ಸುತ್ತಾಡಿಕೊಂಡಿದ್ದು ಬಳಿಕ ವಾಪಸು ತನ್ನ ರಾಜ್ಯಕ್ಕೆ ಹೋಗುತ್ತಿದ್ದಳು. ಇಬ್ಬರ ನಡುವಿನ ಪ್ರೀತಿಯು ಮದುವೆಯಾಗುವ ಹಂತಕ್ಕೆ ತಲುಪುತ್ತದೆ. ನಾನು ನಿನ್ನನ್ನು ತುಂಬಾನೇ ಪ್ರೀತಿ ಮಾಡುತ್ತಿದ್ದೇನೆ, ನೀನು ಒಪ್ಪಿದರೆ ಮದುವೆಯಾಗುವುದಾಗಿ ಹೇಳುತ್ತಾನೆ. ಅದಕ್ಕೆ ಸೋನಿಯಾ ಶರ್ಮ ನನಗೆ ಮದುವೆಯಾಗಿ ಗಂಡ ಮತ್ತು 11 ವರ್ಷದ ಮಗಳಿದ್ದಾಳೆಂದು ಹೇಳುತ್ತಾಳೆ. ಗಂಡ ಮತ್ತು ಮಗಳನ್ನು ಬಿಟ್ಟು ನನ್ನ ಬಳಿಗೆ ಬಂದುಬಿಡು ಚೆನ್ನಾಗಿ ನೋಡಿಕೊಳ್ಳುತ್ತೇನೆಂದನು. ಸಮಯ ಬಂದಾಗ ನನ್ನ ನಿರ್ಧಾರವನ್ನು ತಿಳಿಸುತ್ತೇನೆಂದು ಹೇಳಿದ ಸೋನಿಯಾ ಶರ್ಮ ಪ್ರಿಯಕರನನ್ನು ನೋಡಬೇಕೆಂದಾಗಲೆಲ್ಲಾ ಬಂಗಾರಪೇಟೆಗೆ ಬಂದು ಹೋಗುತ್ತಿದ್ದಳು.



ಡಿವೈಎಸ್ಪಿ ಪಾಂಡುರಂಗ



ಪಿಐ ದಯಾನಂದ್

### ಮದುವೆಯಾಗುವುದಾಗಿ ಹೇಳಿ ಮೋಸ

ಸೋನಿಯಾ ಶರ್ಮ ಶಾಲೆಯಲ್ಲಿರಲಿ, ಮನೆಯಲ್ಲಿರಲಿ ರಾತ್ರಿ, ಹಗಲೆನ್ನದೆ ಮದುವೆಯಾಗುವುದಾಗಿ ಮೆಸೇಜ್‌ಗಳನ್ನು ಮಾಡುತ್ತಾ ಜಮೀರ್‌ಪಾಷ ಟಾರ್ಚರ್ ಕೊಡಲು ಪ್ರಾರಂಭಿಸಿದನು. ಇವನು ನೀಡುತ್ತಿದ್ದ ಹಿಂಸೆಯನ್ನು ತಾಳಲಾರದೆ ಸೋನಿಯಾ ಶರ್ಮ 48 ವರ್ಷದ ಗಂಡನನ್ನು ಬಿಟ್ಟು 26 ವರ್ಷದ ಯುವಕ ಜಮೀರ್ ಪಾಷನನ್ನು ಮದುವೆಯಾದರೆ ಇನ್ನು ಕೆಲವು ವರ್ಷಗಳ ಕಾಲ ಸುಖಜೀವನ ಸಾಗಿಸಬಹುದೆಂದು ಯೋಚಿಸಿ ಜಮೀರ್‌ಪಾಷನಿಗೆ ಫೋನ್ ಮಾಡಿ ನಾನು ನಿನ್ನ ಬಳಿ ನನ್ನ ಮುಂದಿನ ಜೀವನದ ಬಗ್ಗೆ ಮಾತನಾಡಲು ಬರುತ್ತಿದ್ದೇನೆಂದು ಹೇಳಿದಳು. ಅದರಂತೆ ಒಂದು ವಾರದ ನಂತರ ಸೋನಿಯಾ ಶರ್ಮ ಬಂಗಾರಪೇಟೆಗೆ ಬಂದಿದ್ದು, ಹೋಟೆಲ್, ಪಾರ್ಕ್‌ನಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲ ಅದಕ್ಕೆ ಲಾಡ್ಜ್‌ವೊಂದರಲ್ಲಿ ರೂಂ ಮಾಡಿದ್ದೇನೆಂದು ಹೇಳಿ ಲಾಡ್ಜ್‌ಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಸೋನಿಯಾ ಶರ್ಮ ನಾನು ಈ ಸದ್ಯಕ್ಕೆ ಕೆಲಸ ಮತ್ತು ಕುಟುಂಬವನ್ನು ಬಿಟ್ಟು ಬರಲು ಸಾಧ್ಯವಿಲ್ಲ. ಹಾಗೆಯೇ ನಿನ್ನನ್ನು ಬಿಟ್ಟಿರಲಾರೆನು. ಸದಾ ನಿನ್ನ ಧ್ಯಾನದಲ್ಲಿಯೇ ಇದ್ದೇನೆ. ಆದಷ್ಟು ಬೇಗನೆ ನಿನ್ನ ಬಳಿ ಬಂದು ಸೇರುತ್ತೇನೆಂದಳು. ಅದಕ್ಕೆ ಜಮೀರ್‌ಪಾಷ ನಾವಿಬ್ಬರು ಮದುವೆಯಾಗುವವರು ತಾನೇ ನಿನ್ನ ಜೊತೆ ದೈಹಿಕ ಸಂಪರ್ಕ ಬೆಳೆಸಬೇಕೆಂಬ ಆಸೆಯಾಗುತ್ತಿದೆ. ದೇಹ ಸುಖ ನೀಡುತ್ತೀಯ ಎಂದು ಹೇಳಿ ತನ್ನ ತೋಳ್ತೆಕ್ಕೆಯಲ್ಲಿ ಬಂಧಿಯಾಗಿಸಿಕೊಂಡು ಆಕೆಯೊಂದಿಗೆ ದೈಹಿಕ ಸಂಪರ್ಕ ಬೆಳೆಸಿ ತನ್ನ ತೀಟೆ ತೀರಿಸಿಕೊಂಡಿದಲ್ಲದೆ ಗುಟ್ಟಾಗಿ ಆಕೆಯೊಂದಿಗಿನ ವೈಯಕಿಕ ವಿಡಿಯೋಗಳನ್ನು ಮಾಡಿಟ್ಟುಕೊಂಡಿದ್ದನು. ಈ ವಿಷಯ ಸೋನಿಯಾ ಶರ್ಮಳಿಗೆ ಗೊತ್ತಿರಲಿಲ್ಲ. ಜಮೀರ್‌ಪಾಷನ ಪ್ರೀತಿ ನಿರ್ಮಲವಾದುದೆಂದು ನಂಬಿ ಅವನ ಜೊತೆ ತುಂಬ ಆತ್ಮೀಯವಾಗಿದ್ದಳು. ಸೋನಿಯಾ ಶರ್ಮಳ ಮುಗ್ಧ ಮನಸ್ಸನ್ನು ತನ್ನ ಸ್ವಂತಕ್ಕೆ ಉಪಯೋಗಿಸಿಕೊಳ್ಳಲು ಜಮೀರ್ ಪಾಷ ತನ್ನ ಕುಟುಂಬದ ಕಷ್ಟಗಳನ್ನು ಹೇಳಿಕೊಂಡು ಆಕೆಯಿಂದ ಸಾವಿರಾರು ರೂ.ಗಳನ್ನು ತೆಗೆದುಕೊಂಡು ವಾಪಸ್ ಕೊಡುತ್ತಾ ಏ ನಂಬಿಕೆ ಉಳಿಸಿಕೊಂಡಿದ್ದವನು ಸೋನಿಯಾ ಶರ್ಮಳನ್ನು ನಂಬಿಸಿ ಒಂದು ವರ್ಷದಲ್ಲಿ ಸುಮಾರು 16 ಲಕ್ಷದವರೆಗೂ ಹಣ ತೆಗೆದುಕೊಂಡು ಯಾವುದೋ ಕಾರಣ ಹೇಳಿಕೊಂಡು ವಾಪಸ್ ಕೊಡದೆ ದಿನಗಳು ಉರುಳುತ್ತಿದ್ದವು. ಸೋನಿಯಾ ಶರ್ಮ ಬಂಗಾರಪೇಟೆಗೆ ಬಂದಾಗಲೆಲ್ಲ ಯಾವುದಾದರೊಂದು ಲಾಡ್ಜ್‌ನಲ್ಲಿ ರೂಂ ಮಾಡುತ್ತಿದ್ದವನು ತನ್ನ ವರಸೆಯನ್ನು ಬದಲಾಯಿಸಿ ಲಾಡ್ಜ್‌ನಲ್ಲಿ ರೂಂ ಮಾಡದೆ ನಾವಿಬ್ಬರು ಲಾಡ್ಜ್‌ನಲ್ಲಿದ್ದರೆ ನಮ್ಮವರು ಯಾರಾದರೂ ನೋಡಿ ತಪ್ಪಾಗಿ ತಿಳಿದುಕೊಳ್ಳುತ್ತಾರೆ. ಅದಕ್ಕೆ ನಮ್ಮ ಮನೆಗೆ ಹೋಗೋಣವೆಂದು ಹೇಳಿ ನ್ಯೂ ಟೌನ್ ಬಡಾವಣೆಯಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋಗಿ ತಾಯಿಗೆ ಪರಿಚಯಿಸಿ ಇವರು ನನಗೆ ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾಗಿರುವ ಮಹಿಳೆ. ಬಂಗಾರಪೇಟೆಯಲ್ಲಿರುವ ಸಂಬಂಧಿಕರನ್ನು ನೋಡಲು ಬಂದಿದ್ದಾರೆಂದು ಹೇಳಿ ನಂಬಿಸಿದನು. ಸೋನಿಯಾ ಶರ್ಮ ಜಮೀರ್‌ಪಾಷನ ಪ್ರೇಮಬಲೆಗೆ ಬಿದ್ದು ಮದುವೆಯಾಗುತ್ತಾನೆಂಬ ನಂಬಿಕೆಯಿಂದ ಕೊಟ್ಟಿರುವ ಹಣವನ್ನು ವಾಪಸು ಕೇಳದೆ ಅವನು ಬಯಸಿದಾಗಲೆಲ್ಲ ಅವನ ಜೊತೆ ದೈಹಿಕ ಸಂಪರ್ಕದಲ್ಲಿ ತೊಡಗುತ್ತಿದ್ದಳು. ತಿಂಗಳುಗಳು ಕಳೆದಂತೆ ಜಮೀರ್‌ಪಾಷ ಅವಳ ದೇಹ ಸುಖಕ್ಕಾಗಿ ಹಾತೊರೆಯುತ್ತಿದ್ದನೇ ವಿನಃ ಮದುವೆ ಬಗ್ಗೆ ಮಾ.ತನಾಡುತ್ತಿರಲಿಲ್ಲ. ಕಳೆದ ಮೂರು ತಿಂಗಳ ಹಿಂದೆ ಬಂಗಾರಪೇಟೆಗೆ ಬಂದಿದ್ದ ಸೋನಿಯಾ ಶರ್ಮ ಮದುವೆ ಬಗ್ಗೆ ಜಮೀರ್‌ಪಾಷನ ಬಳಿ ಪ್ರಸ್ತಾಪ ಮಾಡಿದ್ದಾಗ ಸದ್ಯಕ್ಕೆ ಮದುವೆ ಮಾತು ಬೇಡ, ನೀನು ಮದುವೆಯಾಗಿ ಒಂದು ಮಗುವಿನ ತಾಯಿ, ನಾನು ಇನ್ನು ಮದುವೆಯಾಗದೆ ಇರುವ ಬ್ರಹ್ಮಚಾರಿ. ನಮ್ಮಿಬ್ಬರ ನಡುವೆ ಪ್ರೀತಿ ಜೊತೆಗೆ ಲಿವಿಂಗ್ ಟುಗೆದರ್ ಇದ್ದು, ಅದನ್ನೆ ಮುಂದುವರೆಸಿಕೊಂಡು ಹೋಗೋಣವೆಂದು ಹೇಳಿದನು. ಜಮೀರ್‌ಪಾಷನ ಮಾತಿನಿಂದ ಸಿಟ್ಟು ಮಾಡಿಕೊಂಡ ಸೋನಿಯಾ ಶರ್ಮ ಅವನಿಗೆ ಏನು ಹೇಳದೇ ಊರಿಗೆ ಹೊರಟುಬಿಟ್ಟಳು. ಮತ್ತೆ ಜಮೀರ್‌ಪಾಷ ಎರಡು ದಿನಗಳಾದ ಮೇಲೆ ಸೋನಿಯಾ ಶರ್ಮಗೆ ಫೋನ್ ಮಾಡಿ ಬೇಸರ ಮಾಡಿಕೊಳ್ಳಬೇಡ ಒಳ್ಳೆ ದಿನ ಬರುತ್ತದೆ ಬನ್ನಿ ಎಂದನು.



ಎಸ್ಪಿ ಶಿವಾಂಶು ರಜಪೂತ್



ಆರೋಪಿ ಜಮೀರ್‌ಪಾಷ

### ಜಮೀರ್‌ಪಾಷನ ವಿರುದ್ಧ ದೂರು

ಸೋನಿಯಾ ಶರ್ಮ ಸೆಪ್ಟೆಂಬರ್ 10ರಂದು ರಾತ್ರಿ 8.30 ಗಂಟೆಗೆ ಬಂಗಾರಪೇಟೆ ಪೊಲೀಸ್ ಠಾಣೆಗೆ ಹಾಜರಾಗಿ ಪಟ್ಟಣದ ನ್ಯೂ ಟೌನ್ ಬಡಾವಣೆಯಲ್ಲಿ ವಾಸವಾಗಿರುವ ಜಮೀರ್‌ಪಾಷ ಮತ್ತು ನಾನು ಸುಮಾರು ಒಂದು ವರ್ಷ ಹಿಂದೆ ಇನ್‌ಸ್ಟಾಗ್ರಾಂ ಮೂಲಕ ಪರಿಚಯವಾಗಿ ಸ್ನೇಹಿತರಾಗಿದ್ದವರು ಪರಸ್ಪರ ಪ್ರೀತಿಸಲು ಪ್ರಾರಂಭಿಸಿದ್ದೆವು. ನಂತರ ಬಂಗಾರಪೇಟೆಗೆ ಬಂದು ಜಮೀರ್‌ಪಾಷನೊಂದಿಗೆ ಒಂದು-ಎರಡು ದಿನ ಇದ್ದು ಊರಿಗೆ ಹೋಗುತ್ತಿದ್ದೇನೆ. ಮದುವೆಯಾಗುವುದಾಗಿ ಹೇಳಿ ನನ್ನ ಜೊತೆ ಬಲವಂತದಿಂದ ದೈಹಿಕ ಸಂಪರ್ಕವನ್ನು ಬೆಳೆಸಿಕೊಂಡಿದ್ದು, ನನಗೆ ಗೊತ್ತಿಲ್ಲದ ರೀತಿಯಲ್ಲಿ ನನ್ನ ವೈಯಕ್ತಿಕ ಫೋಟೋ ಮತ್ತು ವಿಡಿಯೋವನ್ನು ತೆಗೆದುಕೊಂಡು ಹಣಕ್ಕಾಗಿ ಬ್ಲಾಕ್‌ಮೇಲ್ ಮಾಡಿ ಲಕ್ಷಾಂತರ ರೂ.ಗಳನ್ನು ಪಡೆದುಕೊಂಡಿದ್ದು, ಮದುವೆ ಮಾಡಿಕೊಳ್ಳುವಂತೆ ಕೇಳಿದಕ್ಕೆ ನಿನ್ನ ಗಂಡ ಮತ್ತು ಮಗುವನ್ನು ಬಿಟ್ಟು ಬರುವಂತೆ ಹೇಳಿದನು.



ದೂರು ನೀಡಲು ಬಂದಿರುವ ಸೋನಿಯಾ ಶರ್ಮ

☞ 10




# ನೇಪಾಳದಲ್ಲಿ ಯುವ ದಂಗೆ.... ಭಾರತಕ್ಕೂ ಬಿಸಿ ತಟ್ಟಿದೆಯೋ ಯಂಗೆ?!

**ಹಿಮಾಲಯದ ತಪ್ಪಲಿನಲ್ಲಿ 'ಕೂಲ್ ಕೂಲ್' ಆಗಿದ್ದ ಈ ಪುಟ್ಟ ದೇಶದಲ್ಲಿ ರೋಷಾಗ್ನಿ ಧಗಧಗಿಸಲು ಕಾರಣ ಏನು? ಇದೇನು ಆಕಸ್ಮಿಕ ಘಟನೆಯೇ? ಕೇವಲ 'ಸೋಶಿಯಲ್ ಮೀಡಿಯಾ' ಬ್ಯಾನ್ ಕಾರಣವೇ? ಯುವಜನರು ಈ ಪ್ರಮಾಣದಲ್ಲಿ ಬೀದಿಗಿಳಿದು, ಮಂತ್ರಿಗಳನ್ನು ಹಿಡಿದು ಬಡಿದು ಉಗ್ರ ಪ್ರತಿಭಟನೆ ನಡೆಸುವಷ್ಟು ಸೋಶಿಯಲ್ ಮೀಡಿಯಾದ ಮೇಲೆ ಅವಲಂಬಿತರಾಗಿದ್ದಾರೆಯೇ? ಅಥವಾ ಬೇರೆ ಯಾವುದೋ ದುಷ್ಟ ಶಕ್ತಿ ಅವರ ಹಿಂದಿದೆಯೇ?!ಎಂಬೆಲ್ಲ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ!!**

✍ ಮಹದೇವ್ ಕೆಂಪಯ್ಯ

ಭಾರತದ ನೆರೆಯ ನೇಪಾಳ ಅಕ್ಷರಶಃ ಹೊತ್ತಿ ಉರಿಯುತ್ತಿದೆ. ನೇಪಾಳದ ಯುವ ಪ್ರತಿಭಟನಾಕಾರರು ಸರ್ಕಾರವನ್ನೇ ಉರುಳಿಸಿದ್ದಾರೆ. ಅಲ್ಲಿನ ಹಿಂಸಾಚಾರಕ್ಕೆ 22 ಜನರು ಪ್ರಾಣ ಕಳೆದುಕೊಂಡಿದ್ದು,ಮಂತ್ರಿಗಳನ್ನು ಬೀದಿ ಬೀದಿಗಳಲ್ಲಿ ಅಟ್ಯಾಡಿಸಿಕೊಂಡು ಬಡಿಯಲಾಗಿದೆ!

ಜನ್ ಝೆಡ್ ಯುವಕರ ಹೋರಾಟದ ಕಿಚ್ಚಿಗೆ ನೇಪಾಳ ಪ್ರಧಾನಿ ಕೆ.ಪಿ. ಶರ್ಮಾ ಓಲಿ ತನ್ನ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಸಾಮಾಜಿಕ ಜಾಲತಾಣ ನಿಷೇಧದಿಂದ ಆರಂಭವಾದ ಪ್ರತಿಭಟನೆ, ಭ್ರಷ್ಟಾಚಾರ, ನಿರುದ್ಯೋಗ ವಿರುದ್ಧ ಹೋರಾಟವಾಗಿ ಬೆಳೆದು ನೇಪಾಳ ಸರ್ಕಾರವನ್ನೇ ಉರುಳಿಸಿದೆ. ಭಾರತಕ್ಕೆ ಗಡಿ ಭದ್ರತೆ, ಆರ್ಥಿಕತೆ, ಚೀನಾದ ಪ್ರಭಾವದ ಆತಂಕ ಹೆಚ್ಚಿಸಿದೆ. ತನ್ನ ಬಾಗಿಲ ಬಳಿಯೇ ನಡೆಯುತ್ತಿರುವ ಇಂತಹ ಕೋಲಾಹಲ ಭಾರತದ ಪಾಲಿಗೂ ಗಂಭೀರ ಎಚ್ಚರಿಕೆಯ ಗಂಟೆಯಾಗಿದೆ!



ಜೆನ್ ಝಡ್ ಲೀಡರ್ ಬಾಲೆನ್ ಶಾ

**ನೇಪಾಳ ಹೊತ್ತಿ ಉರಿಯಲು ಕಾರಣವೇನು?**

ನೇಪಾಳದ ಯುವ ಜನರು ಒಂದು ಸರಳ ವಿಚಾರ ದಿಂದ ಆಕ್ರೋಶಗೊಂಡರು. ಅದೇನೆಂದರೆ, ನೇಪಾಳದ ಸರ್ಕಾರ ಆಡಳಿತದೊಡನೆ ನೋಂದಣಿ ನಡೆಸಿರದ ಕಾರಣ ನೀಡಿ, ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ವಾಟ್ಸಾಪ್, ಮತ್ತು ಯೂಟ್ಯೂಬ್‌ಗಳಂತಹ ಪ್ರಮುಖ ಸಾಮಾಜಿಕ ಜಾಲ ತಾಣಗಳನ್ನು ದೇಶದಲ್ಲಿ ನಿಷೇಧಿಸಿತು. ಆದರೆ, ಇಂತಹ ಡಿಜಿಟಲ್ ಹತ್ತಿಕ್ಕುವಿಕೆಯೇ ನೇಪಾಳದ ಹತಾಶ ಯುವ ಜನರ ಆಕ್ರೋಶದ ಕಟ್ಟೆ ಒಡೆಯಲು ಕಾರಣವಾಯಿತು.

**ಭ್ರಷ್ಟಾಚಾರದ ತಾಂಡವ ನೃತ್ಯ!**

ನಿರುದ್ಯೋಗಗಳಿಂದ ರೋಸಿ ಹೋಗಿದ್ದ ಜನರೇಶನ್ ಜಿ (Gen Z) ಪ್ರತಿಭಟನಾಕಾರರು ಬದಲಾವಣೆಯನ್ನು ಆಗ್ರಹಿಸಿ ರಸ್ತೆಗಿಳಿದು ಪ್ರತಿಭಟನೆ ನಡೆಸಲು ಆರಂಭಿಸಿದರು. ಸಾಮಾಜಿಕ ಜಾಲತಾಣಗಳ ನಿಷೇಧದ ವಿರುದ್ಧದ ಪ್ರತಿಭಟನೆ ಎಂದು ಆರಂಭಗೊಂಡ ಚಳವಳಿ ಇದ್ದಕ್ಕಿದ್ದಂತೆ ಬೃಹತ್ತಾಗಿ ಸ್ಫೋಟಗೊಂಡಿತು. ಈ ಪ್ರತಿಭಟನೆ ಭ್ರಷ್ಟಾಚಾರ, ನಿರುದ್ಯೋಗ ಮತ್ತು ನೇಪಾಳಿಗರು 'ನೆಪೊ ಕಿಡ್ಸ್' ಎಂದು ಕರೆಯುವ (ಜನ ಸಾಮಾನ್ಯರು ಕಷ್ಟಕರ ಜೀವನ ನಡೆಸುತ್ತಿರುವ ಸಂದರ್ಭದಲ್ಲಿ ಐಷಾರಾಮಿಯಾಗಿ ಬಾಳುತ್ತಿರುವ ರಾಜಕಾರಣಿಗಳ ಮಕ್ಕಳು) ಜನರ ವಿರುದ್ಧದ ರಾಷ್ಟ್ರವ್ಯಾಪಿ ಕ್ರಾಂತಿಯಾಗಿ ರೂಪುಗೊಂಡಿತು.

ಕಳೆದ ಸೋಮವಾರದಂದು ಸಂಸತ್ತಿನತ್ತ ನುಗ್ಗಲು ಪ್ರಯತ್ನ ನಡೆಸಿದ ಪ್ರತಿಭಟನಾಕಾರರತ್ತ ಪೊಲೀಸರು ಗುಂಡು ಹಾರಿಸಿದ ಪರಿಣಾಮವಾಗಿ, ಓರ್ವ ವರ್ಷದ ವಿದ್ಯಾರ್ಥಿ ಸೇರಿದಂತೆ, 22 ಜನರು ಪ್ರಾಣ ಕಳೆದುಕೊಂಡರು. ಸರ್ಕಾರ ಪ್ರತಿಭಟನೆಯನ್ನು ಹತ್ತಿಕ್ಕಲು ಕೈಗೊಂಡ ಈ ಉಗ್ರ ಕ್ರಮ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿತು.

**ಮಂತ್ರಿಗಳನ್ನು ಅಟ್ಟಾಡಿಸಿ ಒದೆ!**

ಮಂಗಳವಾರದ ವೇಳೆಗೆ, ಆಕ್ರೋಶಗೊಂಡ ಪ್ರತಿಭಟನಾಕಾರರು ಸರ್ಕಾರಿ ಕಚೇರಿಗಳತ್ತ ನುಗ್ಗಲು ಆರಂಭಿಸಿ, ಸಂಸತ್ ಕಟ್ಟಡಕ್ಕೆ ಬೆಂಕಿ ಹಚ್ಚಿದರು. ಮಂತ್ರಿಗಳನ್ನು ಬೀದಿ ಬೀದಿಗಳಲ್ಲಿ ಅಟ್ಟಾಡಿಸಿ ಒದೆ ಕೊಟ್ಟರು. ಇತರೆ ರಾಜಕೀಯ ನಾಯಕರ ಮನೆಗಳ ಮೇಲೆ ದಾಳಿ ನಡೆಸಿದರು.

ಇದೊಂದು 'ಅಸಾಧಾರಣ ಸನ್ನಿವೇಶ' ಎಂದು ಕರೆದ ಪ್ರಧಾನ ಮಂತ್ರಿ ಓಲಿ ರಾಜೀನಾಮೆ ಸಲ್ಲಿಸಿ, ಎಲ್ಲೋ ಬಚ್ಚಿಟ್ಟುಕೊಂಡು ಪ್ರಾಣ ಉಳಿಸಿಕೊಂಡರು. ಇಷ್ಟಾದರೂ ಪ್ರತಿಭಟನಾಕಾರರ ಹಿಂಸಾಚಾರ ಕೊನೆಯಾಗಲಿಲ್ಲ.

ಕಠ್ಮಂಡುವಿನ ತ್ರಿಭುವನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದು, ರಾಜಕಾರಣಿಗಳನ್ನು ಸೇನಾ ಹೆಲಿಕಾಪ್ಟರ್‌ಗಳು ಸುರಕ್ಷಿತ ಸ್ಥಳಗಳಿಗೆ ರವಾನಿಸಿದವು. ಜಗತ್ತಿಗೆ ಶಾಂತಿಯನ್ನು ಬೋಧಿಸಿದ ಬುದ್ಧನನ್ನು ನೀಡಿದ ನಾಡಾದ ನೇಪಾಳ ಈಗ ಆಕ್ರೋಶದ ಬೆಂಕಿಗೆ ಸಿಲುಕಿ ಉರಿಯುತ್ತಿದೆ.

ಪ್ರತಿಭಟನಾಕಾರರಿಗೆ ಯಾವುದೇ ಸ್ಪಷ್ಟ ನಾಯಕತ್ವ

☞ 7

# ಹಣದ ಮುಂದೆ ಮಿಕ್ಕಿದ್ದೆಲ್ಲ ಗೌಣ!!

ಅದು ಸ್ಟೆಫಿ ಗ್ರಾಫ್ ಎನ್ನುವ ಮಹಿಳೆ ವಿಶ್ವ ಪ್ರಸಿದ್ಧ ಟೆನಿಸ್ ಆಟಗಾರ್ತಿ ಆಗಿದ್ದ ದಿನಗಳು. ಆಕೆ ತನ್ನ ಉತ್ತುಂಗದ ದಿನಗಳಲ್ಲಿ ಒಂದು ಪಂದ್ಯ ಆಡುತ್ತಿದ್ದ ಸಮಯದಲ್ಲಿ ನೋಡುಗರ ಗುಂಪಿನಿಂದ ಒಂದು ಎತ್ತರದ ಧ್ವನಿಯಲ್ಲಿ ಅಜ್ಞಾತ ವ್ಯಕ್ತಿಯೊಬ್ಬ- 'ಸ್ಟೆಫಿ ವಿಲ್ ಯು ಮ್ಯಾರಿ ಮಿ?' ಎಂದು ಪ್ರಶ್ನಿಸುತ್ತಾನೆ. ಆಗ ಆಕೆ ಅದಕ್ಕೆ ಉತ್ತರಿಸಲು ಕ್ಷಣವೂ ತಡವರಿಸುವುದಿಲ್ಲ, ಆಕೆ 'ಹೌ ಮಚ್ ಮನಿ ಡು ಯು ಹ್ಯಾವ್?' ಎಂದು ಮರು ಪ್ರಶ್ನಿಸುತ್ತಾಳೆ. ಈ ಘಟನೆ ಇಂದಿಗೆ ಇತಿಹಾಸ. ಗಮನಿಸಿ ನೋಡಿ, ಸ್ಟೆಫಿ ಗ್ರಾಫ್ ಅಂದಿಗೆ ಅತ್ಯಂತ ಯಶಸ್ವಿ ಮಹಿಳೆ. ಹೆಸರು, ಹಣ ಎಲ್ಲವೂ ಆಕೆಯ ಬಳಿ ಬೇಕಾದಷ್ಟಿತ್ತು. ಹೀಗಿದ್ದೂ ಆಕೆ ನಿನ್ನ ಬಳಿ ಎಷ್ಟು ಹಣವಿದೆ ಎಂದು ಕೇಳಿದ್ದರ ಹಿಂದಿನ ಅರ್ಥವೇನು? ಒಂದಷ್ಟು ಜನ ಅದನ್ನು ತಮಾಷೆಯ ಮಾತುಗಳು ಎಂದರು. ಆದರೆ ಜಗತ್ತಿನ ಕಟು ಸತ್ಯ ಸ್ಟೆಫಿಗೆ ಗೊತ್ತಿತ್ತು. ಆಕೆ ಪ್ರಾಕ್ಟಿಕಲ್ ಆಗಿ ಪ್ರಶ್ನಿಸಿದ್ದಳು.

ಇನ್ನೊಂದು ಇದೇ ರೀತಿಯ ಘಟನೆ. ಸೈಫ್ ಅಲಿ ಖಾನ್ ಮತ್ತು ಆತನ ಮಗಳು ಸಾರ ಅಲಿ ಖಾನ್ ಒಂದು ಇಂಟರ್ವೀವ್‌ನಲ್ಲಿ ಕುಳಿತು ಮಾತಾಡುತ್ತಿರುತ್ತಾರೆ. ಆಗ ಸಾರ ಒಬ್ಬ ವ್ಯಕ್ತಿಯ ಹೆಸರೇಳಿ, ನಾನು ಅವನನ್ನು ಮದುವೆಯಾಗಲು ಇಚ್ಛೆಪಡುತ್ತೇನೆ ಎನ್ನುತ್ತಾಳೆ. ಮುಂದುವರೆದು ಇನ್ನೊಂದು ಹೆಸರೇಳಿ, ಆತನನ್ನು ಡೇಟ್ ಮಾಡುವುದಕ್ಕೆ ಇಷ್ಟ ಪಡುತ್ತೇನೆ ಎನ್ನುತ್ತಾಳೆ.

ಇದನ್ನು ಕೇಳಿದ ಅಪ್ಪ ಸೈಫ್ ಒಹ್, ಆತನ ಬಳಿ ಅಷ್ಟೊಂದು ಹಣವಿದೆಯೇ? ಎಂದು ಪ್ರಶ್ನಿಸುತ್ತಾರೆ.

ಈ ಘಟನೆಯಲ್ಲೂ ಗಮನಿಸಬೇಕಾದ್ದು ಅದೇ ವಿಷಯ. ಇವರ ಬಳಿ ಕೂಡ ಹಣಕ್ಕೇನೂ ಕೊರತೆಯಿಲ್ಲ, ಹೀಗಿದ್ದೂ ಕೂಡ ಅವರು ಹಣವಂತರನ್ನು ಬಯಸುತ್ತಾರೆ. ಹೀಗೇಕೆ? ಅವರನ್ನು ಧನದಾಹಿಗಳು ಎನ್ನುವ ಮುನ್ನ.... ನಿಮ್ಮನ್ನು ನೀವು ಪ್ರಶ್ನಿಸಿಕೊಂಡು ನೋಡಿ. ನೀವು ಹಣವಿಲ್ಲದ ಒಬ್ಬ ವ್ಯಕ್ತಿಯೊಂದಿಗೆ ನಿಮ್ಮ ಮಗ ಅಥವಾ ಮಗಳ ಮದುವೆಯನ್ನು ಮಾಡುತ್ತೀರಾ?

ಎಲ್ಲರೂ ಅವರವರ ಯೋಗ್ಯತೆಗೆ ತಕ್ಕಂತೆ ಸಂಬಂಧವನ್ನು ಹುಡುಕುತ್ತಾರೆ. ನನ್ನ ಸಂಬಂಧಿಕರು ನಾನು ಸದಾ ಹಣದ ಬಗ್ಗೆ ಬರೆಯುತ್ತೇನೆ ಎಂದು ಕೋಪಿಸಿಕೊಳ್ಳುತ್ತಾರೆ. ಜಗತ್ತಿನಲ್ಲಿ ಬೇರೇನೂ ಇಲ್ಲವೇ ಎನ್ನುವ ಮಾತುಗಳು ಕೂಡ ಅವರದು. ಜಗತ್ತಿನಲ್ಲಿ ಬಹಳಷ್ಟು ವಿಷಯಗಳಿವೆ. ಆದರೆ ಎಲ್ಲವೂ ಹಣದೊಂದಿಗೆ ನಿಕಟ ನಂಟು ಹೊಂದಿವೆ ಎಂದರೆ ಅದು ಅವರಿಗೆ ಅರ್ಥವಾಗುವುದಿಲ್ಲ, ನನ್ನ ಬಳಿ ವಿತಂಡ ವಾದಕ್ಕೆ ಸಮಯವಿಲ್ಲ, ಮುಂದೆ ಓದ ಬನ್ನಿ....

ನೇಪಾಳ ಎನ್ನುವ ದೇಶ ಹತ್ತಿ ಉರಿಯುತ್ತಿದೆ. ಇದಕ್ಕೆ ನಾವು ನೂರಾರು ಕಾರಣಗಳನ್ನು ಕೊಡಬಹುದು. ಆ ದೇಶದಲ್ಲಿ ಭ್ರಷ್ಟಾಚಾರ, ಬಡತನ, ಹದಗೆಟ್ಟ ಆಡಳಿತ ಯಂತ್ರ, ಹೀಗೆ ಒಂದೇ ಎರಡೇ... ಕಾರಣಗಳಿಗೆ ಕೊನೆಯಿಲ್ಲ, ನೇಪಾಳದಲ್ಲಿ ಎದ್ದಿರೋ ದಂಗೆಯಲ್ಲಿ ಪ್ರಮುಖ ಪಾತ್ರ ವಹಿಸಿರುವುದು ಜೆನ್ ಝಿ. ಅಂದರೆ ಜನರೇಶನ್ ಝಿ. 1996 ರಿಂದ 2010ರ ಮಧ್ಯದಲ್ಲಿ ಜನಿಸಿದವರನ್ನು 'ಜೆನ್ ಝಿ'ಎಂದು ಕರೆಯಲಾಗುತ್ತದೆ.

ಇದ್ದಕ್ಕಿದ್ದ ಹಾಗೆ ಇವರು ದೇಶದ ಆಡಳಿತ ಯಂತ್ರದ ವಿರುದ್ಧ ದಂಗೆ ಏಳಲು ಹೇಗೆ ಸಾಧ್ಯ? ಅವರು ತಮ್ಮ ಮೊಬೈಲ್ ಲೋಕದಲ್ಲಿ ಮಗ್ನರು. ಅವರು ನೈಜ ಜಗತ್ತಿನ ನೈಜ ಸಮಸ್ಯೆಗಳಿಗೆ ಸ್ಪಂದಿಸಲು ಹೇಗೆ ಸಾಧ್ಯ? ಎನ್ನುವುದರ ಹಿಂದಿನ ರಹಸ್ಯ ಅಲ್ಲಿನ ಬೆಳವಣಿಗೆಗಳು ಅವರ ಲೋಕದೊಂದಿಗೆ ನಂಟು ಹೊಂದಿರುವುದಾಗಿದೆ.

ನೇಪಾಳ ನವೆಂಬರ್ 2023ರಲ್ಲಿ ಪಬ್ಲಿಕ್ ನೋಟೀಸ್ ಮೂಲಕ ಮತ್ತು ಮೆಟಾ ಮುಂತಾದ ಇಪ್ಪತ್ತೇಳು ಸೋಶಿಯಲ್ ಮೀಡಿಯಾ ಪ್ಲಾಟ್ಫಾರ್ಮ್‌ಗಳಿಗೆ ನೇರವಾಗಿ ಪತ್ರ ಬರೆದು ಎಲ್ಲಾ ಖಾತೆಗಳನ್ನು ನೋಂದಾವಣಿ ಮಾಡುವುದು ಅಂದರೆ ಅವುಗಳನ್ನು ವೆರಿಫೈ ಮಾಡುವಂತೆ ಕೇಳಿಕೊಂಡಿತು. ಸೋಶಿಯಲ್ ಮೀಡಿಯಾದಲ್ಲಿ ಮುಖವಿಲ್ಲದ ಫೇಕ್ ಅಕೌಂಟುಗಳಿಂದ ಆಗುವ ಅನಾಹುತವನ್ನು ತಪ್ಪಿಸಲು ಈ ಕ್ರಮವನ್ನು ಕೈಗೊಂಡಿತು. ಇವರ ಈ ಕ್ರಮವನ್ನು ಮೆಟಾ ಸಹಿತ ಯಾವ ಸೋಶಿಯಲ್ ಮೀಡಿಯಾ ಪ್ಲಾಟ್ಫಾರ್ಮ್‌ಗಳು ಕೂಡ ಗಣನೆಗೆ ತೆಗೆದುಕೊಳ್ಳಲಿಲ್ಲ.

ನೇಪಾಳದ ಸುಪ್ರೀಂ ಕೋರ್ಟ್ ಇದನ್ನು ಕಡ್ಡಾಯಗೊಳಿಸಿತು. ಇದನ್ನು ಕೂಡ ಸೋಶಿಯಲ್ ಮೀಡಿಯಾ ಕಂಪನಿಗಳು ಮತ್ತು ಜನ ಸಾಮಾನ್ಯರು ಪರಿಗಣಿಸಲಿಲ್ಲ. ಹೀಗಾಗಿ ನೇಪಾಳ ಸರಕಾರ ಆಗಸ್ಟ್ 28 ರಂದು ಫೇಸ್ಬುಕ್, ಮೆಸೆಂಜರ್, ಇನ್‌ಸ್ಟಾಗ್ರಾಮ್, ಲಿಂಕ್ಡಿನ್, ರೆಡ್ಡಿಟ್,

☞ 7

6 ☞

ಇದ್ದಂತಿರಲಿಲ್ಲ. ಆದರೆ, ಅವರ ಸಂದೇಶ ಮಾತ್ರ ಅತ್ಯಂತ ಸ್ಪಷ್ಟವಾಗಿತ್ತು. ಯುವ ಪ್ರತಿಭಟನಾಕಾರರಿಗೆ ದೇಶದಲ್ಲಿ ಭ್ರಷ್ಟಾಚಾರ ಕೊನೆಯಾಗಬೇಕು, ಯುವಕರಿಗೆ ಉದ್ಯೋಗ ಲಭಿಸಬೇಕು, ಮತ್ತು ದೇಶ ಬಡತನದಲ್ಲಿ ಸಿಲುಕಿ ಒದ್ದಾಡುತ್ತಿದ್ದಾಗ ಶ್ರೀಮಂತರಾದ, ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿರುವ ರಾಜಕಾರಣಿಗಳು ನ್ಯಾಯ ಎದುರಿಸಬೇಕು ಎನ್ನುವುದು ಅವರ ಉದ್ದೇಶವಾಗಿತ್ತು.

### ನೇಪಾಳದ ಪ್ರತಿಭಟನೆ ಭಾರತಕ್ಕೆ ಯಾಕೆ ಮುಖ್ಯ?

ನೇಪಾಳದ ಘಟನೆಯ ಬೆನ್ನಲ್ಲೇ ಭಾರತ ನೇಪಾಳದ ಜೊತೆಗಿನ ತನ್ನ 1,751 ಕಿಲೋಮೀಟರ್ ಗಡಿಯಾದ್ಯಂತ ಭದ್ರತೆಯನ್ನು ಬಲಪಡಿಸಿದೆ. ಗಡಿ ಭದ್ರತಾ ಪಡೆಗಳನ್ನು ಕಟ್ಟೆಚ್ಚರದಿಂದ ಇರುವಂತೆ ಸೂಚಿಸಲಾಗಿದೆ. ಈ ಗಡಿಯ ಅತ್ಯಂತ ಉದ್ದನೆಯ ಸಾಲು ಬಿಹಾರದ ಮೂಲಕ ಹಾದು ಹೋಗಿದ್ದು, 726 ಕಿಲೋಮೀಟರ್ ಉದ್ದವಿದೆ. ಇದು ಭಾರತದ ಭದ್ರತೆಯ ದೃಷ್ಟಿಯಿಂದ ಸೂಕ್ಷ್ಮ ಪ್ರದೇಶವಾಗಿ ಮಾರ್ಪಟ್ಟಿದೆ.

ಭಾರತ ಮತ್ತು ನೇಪಾಳದ ಗಡಿಯ ಎಲ್ಲ ಮಾರುಕಟ್ಟೆಗಳೂ ಈಗ ಮೌನವಾಗಿವೆ. ಇದರಿಂದ ಸ್ಥಳೀಯ ಪ್ರದೇಶಗಳಲ್ಲಿ ಆರ್ಥಿಕ ನಿಶ್ಚಲತೆ ಉಂಟಾಗಿದೆ. ಭಾರತ ನೇಪಾಳದ ಅತಿದೊಡ್ಡ ವ್ಯಾಪಾರ ಸಹಯೋಗಿಯಾಗಿದ್ದು, 2025ನೇ ಆರ್ಥಿಕ ವರ್ಷದಲ್ಲಿ 7.32 ಬಿಲಿಯನ್ ಡಾಲರ್ ಮೌಲ್ಯದ ಉತ್ಪನ್ನಗಳನ್ನು ನೇಪಾಳಕ್ಕೆ ರಫ್ತು ಮಾಡಿದೆ. ಆದರೆ, ನೇಪಾಳದಿಂದ ಕೇವಲ 1.2 ಬಿಲಿಯನ್ ಡಾಲರ್ ಮೌಲ್ಯದ ಉತ್ಪನ್ನಗಳನ್ನು ಆಮದು ಮಾಡಿಕೊಂಡಿದೆ. ವ್ಯಾಪಾರ ಮಾರ್ಗಗಳಲ್ಲಿ ಅಥವಾ ಗಡಿಯಾಚೆಗಿನ ಸಂಚಾರದಲ್ಲಿ ಏನಾದರೂ ತೊಂದರೆ ಕಾಣಿಸಿಕೊಂಡರೆ, ಅದು ಭಾರತದ ರಫ್ತುದಾರರಿಗೆ ಮತ್ತು ಭಾರತೀಯ ಸರಕುಗಳ ಮೇಲೆ ಅವಲಂಬಿತರಾಗಿರುವ ನೇಪಾಳಿಗರಿಗೆ ಸಮಸ್ಯೆ ಉಂಟುಮಾಡಲಿದೆ.

ಏರ್ ಇಂಡಿಯಾ, ಇಂಡಿಗೋ, ಸ್ಪೈಸ್ ಜೆಟ್ ಸೇರಿದಂತೆ, ಎಲ್ಲ ಭಾರತೀಯ ವಿಮಾನಯಾನ ಸಂಸ್ಥೆಗಳೂ ನೇಪಾಳಕ್ಕೆ ವಿಮಾನ ಹಾರಾಟವನ್ನು ರದ್ದುಗೊಳಿಸಿವೆ. ಸಾವಿರಾರು ಪ್ರಯಾಣಿಕರು ಈಗ ಪ್ರಯಾಣ ಬೆಳೆಸಲು ಸಾಧ್ಯವಿಲ್ಲದಂತಾಗಿದೆ. ಇದರಿಂದ, ಭಾರತ ಮತ್ತು ನೇಪಾಳ ಎರಡು ದೇಶಗಳಿಗೂ ಮುಖ್ಯವಾದ ಪ್ರವಾಸೋದ್ಯಮಕ್ಕೆ ಹೊಡೆತ ಬಿದ್ದಿದೆ. ನೇಪಾಳ ಏನಾದರೂ ರಾಜಕೀಯವಾಗಿ ಅಸ್ಥಿರಗೊಂಡರೆ, ಅದು ವಿದೇಶೀ ಶಕ್ತಿಗಳಿಗೆ, ಅದರಲ್ಲೂ ಚೀನಾಗೆ ಒಳ ನುಸುಳಲು ಅವಕಾಶ ಮಾಡಿಕೊಡುತ್ತದೆ. ಆ ಮೂಲಕ ಚೀನಾ ನೇಪಾಳದ ಮೇಲೆ ತನ್ನ ಪ್ರಭಾವ ಹೆಚ್ಚಿಸಬಹುದು. ಇದು ದಕ್ಷಿಣ ಏಷ್ಯಾದಲ್ಲಿ ಭಾರತ ಸಾಂಪ್ರ


ಉಚ್ಚಾಟಿತ ಪ್ರಧಾನಿ ಓಲಿ


ಶ್ರೀಮತಿ ಸುಶೀಲ ಕಾರ್ಕಿ

ದಾಯಿಕವಾಗಿ ಹೊಂದಿದ್ದ ಅಧಿಕಾರದ ಸಮತೋಲನವನ್ನು ಹಾಳುಗೆಡವಬಲ್ಲದು.

ಭಾರತದ ವಿದೇಶಾಂಗ ಸಚಿವಾಲಯ ಭಾರತೀಯ ಪ್ರಯಾಣಿಕರಿಗೆ ಸೂಚನೆ ನೀಡಿದೆ. ಭಾರತೀಯರಿಗೆ ನೇಪಾಳಕ್ಕೆ ಪ್ರಯಾಣಿಸುವುದು ಬೇಡ ಎಂದು ಸಲಹೆ ಮಾಡಿದ್ದು, ಈಗಾಗಲೇ ನೇಪಾಳದಲ್ಲಿ ಇರುವ ಭಾರತೀಯರಿಗೆ ಮನೆಗಳಿಂದ ಅಥವಾ ವಸತಿ ತಾಣಗಳಿಂದ ಹೊರ ಬರದಂತೆ ಎಚ್ಚರಿಕೆ ನೀಡಿದೆ. ಕಠ್ಮಂಡುವಿನ ಭಾರತೀಯ ದೂತಾವಾಸ ಕಚೇರಿ ನೆರವಿನ ಅವಶ್ಯಕತೆ ಇರುವ ಭಾರತೀಯರಿಗೆ ಸಹಾಯವಾಣಿ ಸಂಖ್ಯೆಗಳನ್ನು ಒದಗಿಸಿದೆ.

### ಗಡಿಯಲ್ಲಿ ಬಿಗಿ ಪಹರೆ

ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಎಲ್ಲ ಪೊಲೀಸ್ ಪಡೆಗಳನ್ನು ಗಡಿ ಜಿಲ್ಲೆಗಳಲ್ಲಿ ನಿಯೋಜಿಸಿ, 24 ಗಂಟೆ ಬಿಗಿ ಪಹರೆ ಏರ್ಪಡಿಸಿದ್ದಾರೆ. ಎಲ್ಲ ಮೀಸಲು ಪಡೆಗಳನ್ನೂ ಸೇವೆಗೆ ನಿಯೋಜಿಸಲಾಗಿದೆ. ಭಾರತದ ಸಂದೇಶ ಸ್ಪಷ್ಟವಾಗಿದ್ದು, ತಾನು ನೇಪಾಳದ ಘಟನೆಯ ಪರಿಣಾಮಗಳಿಗೆ ಒಳಪಡುವುದಿಲ್ಲ ಎಂದು ಸದ್ಯಕ್ಕೆ ತೋರಿಸಿದೆ.

ನೇಪಾಳದ ಬಿಕ್ಕಟ್ಟು ದಕ್ಷಿಣ ಏಷ್ಯಾದಲ್ಲಿ ಪರಿಸ್ಥಿತಿ ಎಷ್ಟು ವೇಗವಾಗಿ ಬದಲಾಗಬಹುದು ಎನ್ನುವುದಕ್ಕೆ ಜ್ವಲಂತ ಸಾಕ್ಷಿಯಾಗಿದೆ. 2008ರಲ್ಲಿ ಪ್ರಜಾಪ್ರಭುತ್ವ ರಾಷ್ಟ್ರವಾದ ನೇಪಾಳ, ಇಲ್ಲಿಯತನಕ 14 ಪ್ರಧಾನ ಮಂತ್ರಿಗಳನ್ನು ಕಂಡಿದೆ. ಆದರೆ, ಈಗಿನ ಹೋರಾಟ ಮತ್ತು ಪ್ರತಿಭಟನೆ ವಿಭಿನ್ನವಾಗಿದೆ. ನೇಪಾಳದಲ್ಲಿ ಯುವಕರ ನಿರುದ್ಯೋಗ ದರ 20% ದಾಟಿದ್ದು, ಪ್ರತಿದಿನವೂ 2,000ಕ್ಕೂ ಹೆಚ್ಚು ಯುವ ನೇಪಾಳಿಗರು ವಿದೇಶಗಳಲ್ಲಿ ಉದ್ಯೋಗ ಅರಸಿ ದೇಶ ಬಿಟ್ಟು ತೆರಳುತ್ತಿದ್ದಾರೆ. ಇದು ದೇಶದಲ್ಲಿ ಆಂತರಿಕ ಕೋಪ ಮಡುಗಟ್ಟುವಂತೆ ಮಾಡಿದೆ.

ಭಾರತಕ್ಕೆ ನೇಪಾಳದ ಅಸ್ಥಿರತೆ ನಿಜಕ್ಕೂ ಆತಂಕದ ವಿಚಾರವಾಗಿದ್ದು, ಇದಕ್ಕೆ ಒಂದಕ್ಕೊಂದು ಮಿಳಿತವಾದ ಆರ್ಥಿಕತೆ ಮತ್ತು ಮುಕ್ತ ಗಡಿ ಮುಖ್ಯ ಕಾರಣವಾಗಿವೆ. ನೇಪಾಳಕ್ಕೆ ಸೀನು ಬಂದರೆ, ಭಾರತಕ್ಕೆ ನೆಗಡಿಯಾಗುತ್ತದೆ! ಈಗಿನ ಪರಿಸ್ಥಿತಿಯಲ್ಲಂತೂ ನೇಪಾಳಕ್ಕೆ ಸುಡು ಜ್ವರವೇ ಬಂದಿದೆ!

ನೇಪಾಳದಲ್ಲಿ ಆರಂಭಗೊಂಡಿರುವ ಬಿಕ್ಕಟ್ಟು ಬೇರೆಡೆಗೆ ಹಬ್ಬದಂತೆ ಖಾತ್ರಿ ಪಡಿಸುವುದಾಗಿದ್ದು, ನೇಪಾಳದ ರಾಜಕೀಯ ಪಕ್ಷಗಳು ಒಂದು ಶಾಂತಿಯುತ ಪರಿಹಾರ ಕಂಡುಕೊಳ್ಳಬಹುದು ಎನ್ನುವುದು ಭಾರತದ ನಿರೀಕ್ಷೆಯಾಗಿದೆ. ಆದರೆ ನೇಪಾಳದ ಸಂಸತ್ ಕಟ್ಟಡ ಇನ್ನೂ ಹೊಗೆ ಉಗುಳುತ್ತಿದ್ದು, ಆಕ್ರೋಶಭರಿತ ಯುವ ಜನರು ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ, ಶಾಂತಿಯುತ ಪರಿಹಾರ ದೂರದ ಹಾದಿಯಂತೆ ತೋರುತ್ತಿದೆ.

ನೇಪಾಳದ ಜೆನ್ ಜೀ ಪ್ರತಿಭಟನೆ ಕೇವಲ ಸಾಮಾಜಿಕ ಜಾಲತಾಣಗಳ ನಿಷೇಧ ಅಥವಾ ಭ್ರಷ್ಟಾಚಾರಕ್ಕೆ ಸೀಮಿತವಾಗಿಲ್ಲ. ಇದು ತನ್ನ ನಾಯಕರಲ್ಲಿ ವಿಶ್ವಾಸ ಕಳೆದುಕೊಂಡಿರುವ ಒಂದು ತಲೆಮಾರಿನ ಕಥೆಯೂ ಹೌದು. ಒಂದು ವೇಳೆ ನೆರೆ ರಾಷ್ಟ್ರದ ಈ ಬಿಕ್ಕಟ್ಟನ್ನು ಭಾರತ ಸರಿಯಾಗಿ ನಿರ್ವಹಿಸಿದೆ ಹೋದರೆ, ಇದು ಭಾರತಕ್ಕೂ ತಲೆನೋವಾಗಿ ಪರಿಣಮಿಸಬಹುದು. ಮುಂದಿನ ದಿನಗಳು ಎರಡೂ ದೇಶಗಳ ಬಿಕ್ಕಟ್ಟು ನಿರ್ವಹಣಾ ಸಾಮರ್ಥ್ಯವನ್ನು ಪರೀಕ್ಷಿಸಲಿವೆ.



ನೀವೇ ಗಮನಿಸುತ್ತಿದ್ದೀರಿ... ಭಾರತದ ನೆರೆ ರಾಷ್ಟ್ರಗಳು ಒಂದೊಂದಾಗಿ ಹೊತ್ತಿ ಉರಿಯುತ್ತಿವೆ. ಮೊದಲು ಶ್ರೀಲಂಕಾ, ಆಮೇಲೆ ಬಾಂಗ್ಲಾದೇಶ. ಇದೀಗ ನೇಪಾಳ!

### ದುಷ್ಟ ಶಕ್ತಿಗಳ ಕೈವಾಡ?!

ಕೇವಲ ಸೋಶಿಯಲ್ ಮೀಡಿಯಾ ನಿಷೇಧ.... ಈ ದಂಗೆಗೆ, ಹಿಂಸಾಚಾರಕ್ಕೆ ಹಿಂಸಾಚಾರಕ್ಕೆ ಕಾರಣವಾಯಿತಾ?! ಅಥವಾ ಈ ದಂಗೆಯ ಹಿಂದೆ ಬೇರವುದೋ ದುಷ್ಟ ಶಕ್ತಿಗಳ ಕೈವಾಡ ಇದೆಯಾ?! ಇಡೀ ಜಗತ್ತು ಚೀನಾದತ್ತ ಬೊಟ್ಟು ಮಾಡುತ್ತಿದೆ! ಸದ್ಯ,ಅಲ್ಲಿನ 'ಓಲಿ' ಸರ್ಕಾರ ವಿಸರ್ಜನೆಯಾಗಿದೆ. ನಿವೃತ್ತ ನ್ಯಾಯಾದೀಶರ ನೇತೃತ್ವದಲ್ಲಿ ಹೊಸ ಮಧ್ಯಂತರ ಸರ್ಕಾರ ರಚನೆಯ ಹಾದಿಯಲ್ಲಿದೆ. ಮುಂದೇನೋ ಗೊತ್ತಿಲ್ಲ.

### ನಮ್ಮಲ್ಲೂ ಇದೆ ವೃದ್ಧರ ದರ್ಬಾರ್!

ಅಂದಹಾಗೆ, ನೇಪಾಳದ ರಾಜಕೀಯ ಅಸ್ಥಿರತೆಗೆ ಒಂದು ಇತಿಹಾಸವೇ ಇದ್ದು, ಅದು 2008ರಿಂದ 12ಕ್ಕೂ ಹೆಚ್ಚು ಸರ್ಕಾರಗಳನ್ನು ಕಂಡಿದೆ. 2008ರಲ್ಲಿ ನೇಪಾಳ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಘೋಷಣೆಗೊಂಡ ಬಳಿಕ ಆ ದೇಶದಲ್ಲಿ ತಲೆದೋರಿದ ಅತಿದೊಡ್ಡ ರಾಜಕೀಯ ಬಿಕ್ಕಟ್ಟಾಗಿ ರೂಪುಗೊಂಡಿತು. ಭಾರತಕ್ಕೂ ತನ್ನ ಹಿಮಾಲಯದ ನೆರೆಹೊರೆಯ ರಾಷ್ಟ್ರದಲ್ಲಿ ನಡೆಯುತ್ತಿರುವ ಬೆಳವಣಿಗೆ ಎಚ್ಚರಿಕೆಯ ಗಂಟೆಯಾಗಬೇಕಿದ್ದು, ದಕ್ಷಿಣ ಏಷ್ಯಾದಾದ್ಯಂತ ಯುವ ಜನರಲ್ಲಿ ಹೆಚ್ಚುತ್ತಿರುವ ಹತಾಶೆಯನ್ನು ಜಾಗರೂಕವಾಗಿ ಗಮನಿಸುವ ಅಗತ್ಯವಿದೆ.

ಹಿಂಸಾಚಾರಕ್ಕೆ ತಕ್ಷಣಕ್ಕೆ ಚಾಲನೆ ನೀಡಿದ್ದು ಒಂದು ರೀತಿಯ ನಿರಂಕುಶ ಆಡಳಿತದ ಕ್ರಮವಾಗಿತ್ತು. ನೇಪಾಳಿ ಸರ್ಕಾರ ಸುಳ್ಳು ಸುದ್ದಿಗಳನ್ನು ಹರಡುವುದನ್ನು ತಡೆಯುವ ನೆಪ ಒಡ್ಡಿ, ಫೇಸ್ ಬುಕ್, ಇನ್‌ಸ್ಟಾಗ್ರಾಮ್, ಯೂಟ್ಯೂಬ್, ವಾಟ್ಸಾಪ್ ಸೇರಿದಂತೆ, 26 ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸಿದ್ದಕ್ಕೆ ತಕ್ಷಣದ ಪ್ರತಿಕ್ರಿಯೆಯ ರೂಪದಲ್ಲಿ ಯುವಕರ ಪ್ರತಿಭಟನೆ ಆರಂಭ

☞ 14

6 ☞

ಥ್ರೆಡ್ಸ್, ಯೂಟ್ಯೂಬ್, ಸ್ನ್ಯಾಪ್ ಚಾಟ್, ಕ್ಲಬ್ ಹೌಸ್ ಸೇರಿದಂತೆ ಒಟ್ಟು 27 ಸೋಶಿಯಲ್ ಮೀಡಿಯಾ ಆಪ್‌ಗಳನ್ನು ಬ್ಯಾನ್ ಮಾಡುವ ಆದೇಶವನ್ನು ಹೊರಡಿಸುತ್ತದೆ. ಇದು ಸೆಪ್ಟೆಂಬರ್ 04ರಂದು ಜಾರಿಗೆ ಬಂದಿದೆ. ನೇಪಾಳದಲ್ಲಿ ಈ ಆಪ್‌ಗಳು ಕೆಲಸ ಮಾಡುವುದಿಲ್ಲ. ನಿಮಗೆಲ್ಲಾ ಗೊತ್ತಿರಲಿ ಕಳೆದ ಒಂದು ವರ್ಷದಿಂದ ಫೇಸ್ಬುಕ್ ಮಾನಿಟೈಸಷನ್ ಅಂದರೆ ಬಳಕೆದಾರರು ತಾವು ಹಾಕುವ ರೀಲ್ಸ್, ಪೋಸ್ಟ್ಸ್ ಇತ್ಯಾದಿಗಳ ಮೂಲಕ ಹಣವನ್ನು ಗಳಿಸಿಕೊಳ್ಳಬಹುದು ಎನ್ನುವ ಒಂದು ಅವಕಾಶವನ್ನು ಸೃಷ್ಟಿಸಿದೆ. ಅಂದರೆ ಬಳಕೆದಾರರು ಒಳ್ಳೊಳ್ಳೆ ಕಂಟೆಂಟ್ ಸೃಷ್ಟಿಸಿ ಅವುಗಳನ್ನು ತಮ್ಮ ಖಾತೆಯಲ್ಲಿ ಹಾಕಿದರೆ ಅದು ಹೆಚ್ಚು ವೀಕ್ಷಣೆ, ಜನ ಮನ್ನಣೆ ಪಡೆದುಕೊಂಡರೆ ಅದಕ್ಕೆ ತಕ್ಕಂತೆ ಪ್ರತಿ ಪೋಸ್ಟ್, ಪ್ರತಿ ರೀಲ್‌ಗೆ ಇಷ್ಟು ಎಂದು ಹಣವನ್ನು ಸಂದಾಯ ಮಾಡುತ್ತದೆ. ಇನ್ನು ಯೂಟ್ಯೂಬ್ ಬಗ್ಗೆ ಹೇಳುವ ಅವಶ್ಯಕತೆಯಿಲ್ಲ. ಇಲ್ಲಿ ಕೂಡ ಯಾರು ಬೇಕಾದರೂ ತಮ್ಮ ಚಾನಲ್ ತೆಗೆಯುವ ಅವಕಾಶವಿದೆ. ಕಂಟೆಂಟ್ ಕ್ರಿಯೇಟ್ ಮಾಡಿ ಅವುಗಳ ಮೂಲಕ ಬಹಳಷ್ಟು ಹಣವನ್ನು ಇಲ್ಲಿಂದ ಗಳಿಸಿಕೊಳ್ಳಬಹುದು.

ಯಾವಾಗ ಇಂತಹ ಸೋಶಿಯಲ್ ಮೀಡಿಯಾಗಳ ಮೇಲೆ ಸರಕಾರ ಕಡಿವಾಣ ಹಾಕಿತು ಅದು ಈ ನವ ಜನಾಂಗವನ್ನು ಕೆಣಕಿಬಿಟ್ಟಿತು. ದಂಗೆ ಎದ್ದವರೆಲ್ಲರೂ ಇಲ್ಲಿಂದ ಹಣವನ್ನು ಸಂಪಾದಿಸುತ್ತಿದ್ದರು ಎಂದಲ್ಲ. ದಂಗೆ ಎದ್ದವರಲ್ಲಿ ಬೆರಳೆಣಿಕೆಯಷ್ಟು ಜನ ಇದರಿಂದ ಆದಾಯ ಸೃಷ್ಟಿಸಿಕೊಂಡಿರಬಹುದು. ಆದರೆ ಹೆಚ್ಚಿನ ಜನರಿಗೆ ಇದು ತಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ಎಂದು ಭಾವಿಸಿಬಿಟ್ಟರು. ನೇಪಾಳ ಸರಕಾರ ಎಡವಿದ್ದು ಅಲ್ಲಿ. ಇಂದಿನ ಯುವ ಜನತೆ ಊಟ ತಿಂಡಿ ಇಲ್ಲದೆ ಕೂಡ ಒಂದೆರೆಡು ದಿನ ಬದುಕುತ್ತಾರೆ. ಮೊಬೈಲ್ ಮತ್ತು ಸೋಶಿಯಲ್ ಮೀಡಿಯಾ ಇಲ್ಲದೆ ಅವರು ಬದುಕಲು ಸಾಧ್ಯವಿಲ್ಲ ಎನ್ನುವ ಮಟ್ಟಕ್ಕೆ ತಲುಪಿದ್ದಾರೆ. ಅದರ ದಾಸರಾಗಿದ್ದಾರೆ. ಅಲ್ಲದೆ ಲಕ್ಷಾಂತರ ಜನಕ್ಕೆ ಇದು ಆದಾಯದ ಮೂಲ ಕೂಡ ಆಗಿದೆ. ಅವರ ಬುಡಕ್ಕೆ ನೇಪಾಳ ಸರಕಾರ ಕೈ ಇಟ್ಟ ಕಾರಣ ದಂಗೆ ಎದ್ದಿದ್ದಾರೆ. ಯಾವುದು ಈ ಇಂಟರ್ನೆಟ್ ಯುಗದಲ್ಲಿ ಸಾಧ್ಯವಿಲ್ಲ ಎಂದುಕೊಂಡಿದ್ದೇವೋ ಅದು ಇಂಟರ್ನೆಟ್ ಕಾರಣಕ್ಕೆ ಘಟಿಸಿರುವುದು ವಿಪರ್ಯಾಸ.

ನೇಪಾಳದಲ್ಲಿ ಈ ರೀತಿಯ ಅಸ್ಥಿರತೆ ಬರಲು ಇನ್ನೊಂದು ಕಾರಣ ಕೂಡ ಹಣಕ್ಕೆ ಸಂಬಂದಿಸಿದ್ದು. ಆ ದೇಶ ಅತ್ಯಂತ ಬಡತನವನ್ನು ಹೊಂದಿದೆ. ನಾನು ಇಲ್ಲಿಯವರೆಗೆ ನೇಪಾಳಕ್ಕೆ ಹೋಗದೆ ಇರಲು ಪ್ರಮುಖ ಕಾರಣ ಅಲ್ಲಿನ ಜನರ ಬವಣೆ, ಸರಕಾರ ಅವರನ್ನು ನಡೆಸಿಕೊಳ್ಳುವ ರೀತಿ. ಎರಡು ಸಾವಿರದ ಇಸವಿಯಲ್ಲಿ ನಾನಿನ್ನೂ ದುಬೈನಲ್ಲಿದ್ದೆ, ಅಲ್ಲಿ ಅತ್ಯಂತ ಕಡಿಮೆ ಹಣಕ್ಕೆ ದುಡಿಯುವ ಕೆಲಸಗಾರರು ಎಂದರೆ ನೇಪಾಳಿಗಳು ಎನ್ನುವುದು ಎಲ್ಲರಿಗೂ ಗೊತ್ತಿತ್ತು. ನೇಪಾಳಿ ಹೆಣ್ಣುಮಕ್ಕಳ ಕಳ್ಳ ಸಾಕಾಣಿಕೆ, ದಾಸ್ಯ ಇವುಗಳ ಬಗ್ಗೆ ಹೆಚ್ಚು ಬರೆಯಲು ಹೋಗುವುದಿಲ್ಲ. ಇಂದಿಗೂ ಬೆಂಗಳೂರು ಸಹಿತ ಭಾರತದ ಎಲ್ಲಾ ಪ್ರಮುಖ ನಗರಗಳಲ್ಲಿ ಸರ್ವಿಸ್ ಇಂಡಸ್ಟ್ರಿ ತುಂಬಾ ಅತಿ ಅಗ್ಗಕ್ಕೆ ದುಡಿಯುತ್ತಿರುವವರು ಇದೆ ಜನಾಂಗ. ಇವರ ಮೇಲೆ ಆಗುವ ಬೇರೆ ರೀತಿಯ ಅತ್ಯಾಚಾರಗಳ ಬಗ್ಗೆ ಇಲ್ಲಿ ಹೇಳಲು ಹೋಗುವುದಿಲ್ಲ. ಜನ ದಡ್ಡರಲ್ಲ. ನೆನಪಿರಲಿ ಅವರು ನಡೆದಾಡುವ ಟೈಮ್ ಬಾಂಬ್ ಇದ್ದಂತೆ, ಅವರ ಸಹನೆಗೂ ಒಂದು ಮಿತಿಯಿದೆ. ಮಿತಿ ಮೀರಿದ ಭ್ರಷ್ಟಾಚಾರ, ಬಡತನ ಅವರನ್ನು ಹೈರಾಣು ಮಾಡಿತ್ತು. ಅವರು ಒಂದು ಅವಕಾಶಕ್ಕೆ ಕಾಯುತ್ತಿದ್ದರು. ಸಿಕ್ಕ ಅವಕಾಶ ಬಳಸಿಕೊಂಡು ಸ್ಫೋಟವಾಗಿದೆ.

ಇನ್ನೊಂದು ಕಾರಣ ಕೂಡ ಹಣಕ್ಕೆ ಸಂಬಂದಿಸಿದ್ದು , ಜಾಗತಿಕವಾಗಿ ಹಿಡಿತವನ್ನು ಬಿಗಿಗೊಳಿಸಿಕೊಳ್ಳಲು, ನಾವೇನು ಮಾಡಬಲ್ಲೆವು, ನಮ್ಮ ಶಕ್ತಿಯೆಷ್ಟು ಎನ್ನುವುದರ ಪ್ರದರ್ಶನ ಮಾಡುವುದು. ಹೀಗೆ ದೇಶಗಳ ಮೇಲೆ ತಮ್ಮ ಹಿಡಿತವನ್ನು ಸಾಧಿಸುವುದಕ್ಕೆ ಡೀಪ್ ಸ್ಟೇಟ್ ಎನ್ನಲಾಗುತ್ತದೆ. ವಾರದ ಹಿಂದೆ ಅಮೇರಿಕಾ ಅಧ್ಯಕ್ಷ ಟ್ರಂಪ್ ಅವರ ಬಿಸಿನೆಸ್ ಸಲಹೆಗಾರ ಪೀಟರ್ ನವಾರೋ ರಷ್ಯಾದಿಂದ ತೈಲ ತರಿಸಿಕೊಂಡು ಭಾರತದ ಬ್ರಾಹ್ಮಣರು ಸಾಹುಕಾರರಾಗುತ್ತಿದ್ದರೆ, ಅವರಿಗೆ ಜನ ಸಾಮಾನ್ಯರ ಹಿತವನ್ನು ಕಾಪಾಡುವುದು ಮುಖ್ಯವಲ್ಲ ಎನ್ನುವ ಮಾತನ್ನು ಆಡಿದ್ದರು. ಅದು ಬಾಯಿ ತಪ್ಪಿ ಆಡಿದ ಮಾತಲ್ಲ, ಅದು ಅವರ ರಣನೀತಿ. ಭಾರತವನ್ನು ಛಿದ್ರ ಮಾಡಲು ಅವರು ಬಳಸಿಕೊಳ್ಳಲು ಬಯಸಿರುವ ಆಯುಧ. ಅದನ್ನು ಅವರು ಜಗತ್ತಿನ ಏಕೈಕ ಹಿಂದೂ ರಾಷ್ಟ್ರ ಎನ್ನುವ ಹೆಗ್ಗಳಿಕೆ ಪಡೆದಿರುವ ನೇಪಾಳಾದ ಮೇಲೆ ಪ್ರಯೋಗ ಮಾಡಿ ನೋಡಿದ್ದಾರೆ. ಅದರಲ್ಲಿ ಗೆದ್ದಿದ್ದಾರೆ. ನೇಪಾಳದ ಅಧಿಕಾರ ಚುಕ್ಕಾಣಿ ಹಿಡಿದವರಲ್ಲಿ ಬಹುತೇಕರು ಬ್ರಾಹ್ಮಣರು. 2021ರ ಜನಗಣತಿ ಪ್ರಕಾರ ನೇಪಾಳದ ಜನಸಂಖ್ಯೆಯ 12 ಪ್ರತಿಶತ ಜನ ಬ್ರಾಹ್ಮಣರು. ಚಾರಿತ್ರಿಕವಾಗಿ ಕೂಡ ನೇಪಾಳದ ಅಧಿಕಾರ ಇವರ ಕೈಲಿತ್ತು. ಇಂದಿಗೂ ನೇಪಾಳದ ಅಡಿಮಿನಿಸ್ಟ್ರೇಷನ್ ಸರ್ವಿಸಸ್ ಅಂದರೆ ನಮ್ಮ ಐಎಎಸ್ ಮತ್ತಿತರ ಸರಕಾರಿ ಆಯಾಕಟ್ಟಿನ ಹುದ್ದೆಗಳಲ್ಲಿ 39 ಪ್ರತಿಶತ ಅಧಿಕಾರಿಗಳು ಬ್ರಾಹ್ಮಣರು ಎನ್ನುವುದು ಅಂಕಿಅಂಶದಿಂದ ತಿಳಿದು ಬರುತ್ತದೆ. ಈ ಮಾಹಿತಿಯನ್ನು ಬಳಸಿಕೊಂಡು ಡೀಪ್ ಸ್ಟೇಟ್ ಕೆಲಸ ಮಾಡಿದೆ. ನೇಪಾಳ ಹತ್ತಿ ಉರಿದಿದೆ.

ಕೊನೆಮಾತು: ಭಾರತವನ್ನು ಕೂಡ ಇದೆ ರೀತಿಯ ಖೆಡ್ಡಾಗೆ ಕೆಡವಲು ಹುನ್ನಾರ ನಡೆಯುತ್ತಿದೆ. ಆರ್ಯ- ದ್ರಾವಿಡ ಸಿದ್ದಾಂತ ಮತ್ತು ನಿರೀಶ್ವರವಾದವನ್ನು ಮುಂಚೂಣಿಗೆ ತರುವ ಕೆಲಸಗಳನ್ನು ಮುಂದಿನ ದಿನದಲ್ಲಿ ನಾವು ಕಾಣಬಹುದು. ನೆನಪಿರಲಿ ಈ ರೀತಿಯ ಕಲಹಗಳನ್ನು ಸೃಷ್ಟಿಸುವರಿಗೆ ಯಾವ ಪಂಥದವರ ಉನ್ನತಿಯ ಬಗ್ಗೆಯೂ ವಿಶೇಷ ಪ್ರೀತಿ ಇರುವುದಿಲ್ಲ. ಅವರಿಗೇನಿದ್ದರೂ ತಮ್ಮ ಬೇಳೆ ಬೇಯಿಸಿಕೊಳ್ಳುವುದು ಮುಖ್ಯವಾಗುತ್ತದೆ. ಜಗತ್ತಿನ ಮೇಲೆ ನಿಯಂತ್ರಣ ಹೊಂದುವುದು ಅವರ ಗುರಿ. ನಾವು ಅವರು ಸೃಷ್ಟಿಸಿದ ಕಥೆಗಳಿಗೆ ಬಲಿಯಾಗುವುದು ಬೇಡ. ಭಾರತೀಯರು 'ನಾವೆಲ್ಲಾ ಒಂದೇ' ಎನ್ನುವ ಸಿದ್ದಾಂತಕ್ಕೆ ಬದ್ಧರಾಗಿರೋಣ. ಹಾಗಾದಾಗ ಮಾತ್ರ ನಮಗೆ ಮತ್ತು ನಮ್ಮ ದೇಶಕ್ಕೆ ಭವಿಷ್ಯ. ☯


**ಅವರಿಬ್ಬರು 25ರ ಹರೆಯದ ಅವಿವಾಹಿತ ಮುಸ್ಲಿಂ ಕುಚುಕು ಗೆಳೆಯರು. ಒಬ್ಬ ಕಟ್ಟಡ ಕಾರ್ಮಿಕನಾಗಿದ್ದರೆ ಇನ್ನೊಬ್ಬ ಆಗಾಗ ಕೂಲಿ ಕೆಲಸ ಮಾಡುತ್ತಿದ್ದನು. ಕಟ್ಟಡ ನಿರ್ಮಾಣದ ಕಾಮಗಾರಿಗೆ ಕೂಲಿಗೆಂದು ತನ್ನ ಗೆಳೆಯನನ್ನು ಕರೆದೊಯ್ದು ಸಂಬಳವನ್ನು ಬಾಕಿ ಉಳಿಸಿಕೊಂಡಿದ್ದ ಕಟ್ಟಡ ಕಾರ್ಮಿಕ. ಉಳಿದ ತನ್ನ ಸಂಬಳ ಬೇಕೆಂದು ಕಂಡ ಕಂಡಲ್ಲಿ ಸಾರ್ವಜನಿಕವಾಗಿ ಕಿರಿ... ಕಿರಿ... ಮಾಡುತ್ತಿದ್ದ ಕೂಲಿ ಗೆಳೆಯ. ಇದರಿಂದ ತೀರಾ ಅವಮಾನಿತನಾದ ಕಟ್ಟಡ ಕಾರ್ಮಿಕ ಈತನಿಂದ ತನ್ನ ಮರ್ಯಾದೆ ಹಾಳಾಗುತ್ತದೆ ಏನಾದರೂ ಸರಿ ಈತನಿಗೊಂದು ಗತಿ ಕಾಣಿಸಲೇಬೇಕೆಂದು ಒಳಗೊಳಗೇ ಸಂಚು ರೂಪಿಸಿದನು. ಅದೊಂದು ದಿನ 'ಕೂಲಿ ಕೆಲಸವಿದೆ... ಉಳಿದಿರುವ ಬಾಕಿ ಸಂಬಳ ಕೊಡುತ್ತೇನೆ' ಎಂದು ಉಪಾಯವಾಗಿ ತನ್ನ ಮೋಟಾರ್ ಬೈಕ್ ಮೇಲೆ ಕಟ್ಟಡ ಕಾರ್ಮಿಕನನ್ನು ಕರೆದುಕೊಂಡು ಬಂದು ದಾರಿ ಮಧ್ಯ ಬಾರ್‌ನಲ್ಲಿ ಕಂಠ ಪೂರ್ತಿ ಕುಡಿದರು. ಸಾಯಂಕಾಲದ ಸಮಯದಲ್ಲಿ 40 ಕಿ.ಮೀ. ದೂರ ಬಂದು ಅಲ್ಲಿಯೂ ಕುಡಿದು ಅಮಲೇರಿಸಿಕೊಂಡರು. ಕೂಲಿ ಗೆಳೆಯ ಕುಡಿದ ಮತ್ತಿನಲ್ಲಿ ತನಗೆ 'ಸಂಬಳ ಬೇಕು ನಾನು ಸಾಂಗಲಿಗೆ ಸೂಳೆಯರ ಹತ್ತಿರ ಹೋಗಬೇಕು' ಎಂದು ಜಗಳ ಕಾಯ್ದು ಕಟ್ಟಡ ಕಾರ್ಮಿಕನ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ. ಇದರಿಂದ ಆಕ್ರೋಶಗೊಂಡ ಕಟ್ಟಡ ಕಾರ್ಮಿಕನ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ. ಇದರಿಂದ ಆಕ್ರೋಶಗೊಂಡ ಕಟ್ಟಡ ಕಾರ್ಮಿಕ ಗೆಳೆಯ ಸಮೀಪದ ಕಟ್ಟಿಗೆ ಅಡ್ಡೆಯಿಂದ ಕಟ್ಟಿಗೆ ತಲೆಯ ಮೇಲೆ, ಮುಖದ ಬಲವಾಗಿ ಥಳಿಸಿದ್ದಾನೆ. ಗಂಭೀರವಾಗಿ ತಲೆ, ಮುಖಕ್ಕೆ ಗಾಯವಾಗಿ ರಕ್ತ ಸುರಿದು ಒದ್ದಾಡಿ ಗತ ಪ್ರಾಣನಾದ ಗೆಳೆಯನನ್ನು ಕಂಡು ತನ್ನ ಬೈಕ್ ಬಿಟ್ಟು, ಪಕ್ಕದಲ್ಲಿ ಮೊಬೈಲ್ ಬೀಸಾಕಿ ಪರಾರಿಯಾದ ಕಟ್ಟಡ ಕಾರ್ಮಿಕ. ಪ್ರಕರಣ ದಾಖಲಿಸಿಕೊಂಡು ಹಂತಕನ ಬೆನ್ನು ಬಿದ್ದ ಚತುರ ಮತ್ತು ಧಾಡಸಿ ಸಿಪಿಐ ವಿಶ್ವನಾಥ ಚೌಗಲಾ, ಪಿಎಸ್‌ಐ ನಂದೀಶ ಎಸ್. ಮತ್ತು ಸಿಬ್ಬಂದಿಗಳು ಹಂತಕನನ್ನು ಬಂಧಿಸಿ ಜೈಲಿಗಟ್ಟಿರುವ ಘಟನೆ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಅಂಕಲಿ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**


ಕೊಲೆಯಾದ ಹುಸೇನಸಾಬ ದಸ್ತಗೀರ ಪರೀಟ್

# ಬಾಕಿ ಸಂಬಳ ಕೇಳಿದ ಸ್ನೇಹಿತನನ್ನು ಸೌದೆಯಿಂದ ಬಡಿದು ಕೊಂದ ಬದ್ಮಾಷ್!

**ಬೆಳಗಾವಿ**
✍ ಮನ್ನಾಪೂರ

ಮನಸ್ತಾಪದಂತಹ ಕ್ಷುಲ್ಲಕ ಕಾರಣಗಳೇ ಮುಂದುವರೆದಾಗ ಬಹಳ ದೊಡ್ಡ ಅನಾಹುತಗಳು ಗೊತ್ತಿಲ್ಲದಂತೆ ಜರುಗಿ ಬಿಡುತ್ತವೆ. ಇದಕ್ಕೆ ನಿದರ್ಶನವೆಂಬಂತೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಯಮಕನಮರಡಿಯ ಇಬ್ಬರು ಕುಚುಕು ಗೆಳೆಯರ ಕಥೆ ಇದಾಗಿದೆ. ಇಮ್ತಿಯಾಜ್ ಅನ್ವರ್ ಶೇಗಡಿ (25 ವ) ಮತ್ತು ಹುಸೇನಸಾಬ ದಸ್ತಗೀರ


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ


ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ

ಪರೀಟ್ (25 ವ) ಎಂಬಿಬ್ಬರು ಮುಸ್ಲಿಂ ಗೆಳೆಯರು. ಇಬ್ಬರೂ ಪರಸ್ಪರ ಜಮಾತ್‌ಗಳಲ್ಲಿ ಪರಿಚಯವಾದರು. ಇಬ್ಬರೂ ಸ್ಫುರದ್ರೂಪಿ ಅವಿವಾಹಿತರಾಗಿದ್ದರು. ಕೂಲಿ ಮಾಡಿದ್ದ ಬಾಕಿ ಉಳಿದಿದ್ದ ಸಂಬಳಕ್ಕಾಗಿ ನಡೆದಿದ್ದ ಮನಸ್ತಾಪ ದೊಡ್ಡದಾಯಿತು. ಪರಿಣಾಮ ಗೆಳೆಯ ಹುಸೇನಸಾಬನನ್ನು ಇಮ್ತಿಯಾಜ್ ಕಟ್ಟಿಗೆಯಿಂದ ತಲೆ, ಮುಖದ ಮೇಲೆ ಹೊಡೆದು ಕೊಲೆ ಮಾಡಿ ಇಂದು ಜೈಲು ಸೇರಿ ತಂಗಳು ಮುರಿಯುತ್ತಿದ್ದಾನೆ. ಇತ್ತ ಕುಟುಂಬಕ್ಕೆ ಆಧಾರಸ್ತಂಭವಾಗಿದ್ದ ಮಗ ಹುಸೇನನನ್ನು ಕಳೆದುಕೊಂಡು ತಂದೆ ದಸ್ತಗೀರ, ತಾಯಿ ಅಮೀನಾ, ತಮ್ಮ, ತಂಗಿ ಇಂದು ಎದೆ ಬಡಿದುಕೊಂಡು ಅತ್ತು... ಅತ್ತು ಕಣ್ಣೀರು ಬತ್ತಿಸಿಕೊಂಡು ದಿಕ್ಕು ತೋಚದಂತೆ ಕುಳಿತಿದ್ದಾರೆ. ಅತ್ತ ದುಡಿಯುತ್ತಿದ್ದ ಮಗ ಇಮ್ತಿಯಾಜ್ ಜೈಲು ಪಾಲಾಗಿದ್ದಾನೆ. ಹೇಗಿದೆ ನೋಡಿ ಕ್ಷುಲ್ಲಕ ಕಾರಣಗಳ ಮನಸ್ತಾಪದ ಅನಾಹುತ.

**ಹುಸೇನಸಾಬನೆಂಬ ನತದೃಷ್ಟ...**

ಎಲ್ಲರಂತೆ ಸಮಾಜದಲ್ಲಿ ಬದುಕಬೇಕು. ಮದುವೆ, ಮಕ್ಕಳು, ತಂದೆ-ತಾಯಿ, ಸಂಸಾರ ಎಂದೆಲ್ಲ ಸಾಗಿಸಬೇಕು ಎನ್ನುವ ತವಕದಲ್ಲಿರುವಾಗಲೇ ವಿಧಿಯು ಬೀಸಿದ ಬಿರುಗಾಳಿಗೆ ಸಿಕ್ಕು ಹುಸೇನಸಾಬ ದಸ್ತಗೀರ ಪರೀಟ್ ತನ್ನ ತುಂಬು ಜೀವನಕ್ಕೆ ವಿದಾಯ ಹೇಳಿ ಬಾರದೂರಿಗೆ ತೆರಳಿದ್ದಾನೆ. ಇಲ್ಲಿ ಸಾವಿಗೆ ಒಂದು ಕಾರಣ ಬೇಕಷ್ಟೇ... ಅದು ಯಾವತ್ತು ತನ್ನ ಮೇಲೆ ಏನನ್ನು ಇಟ್ಟುಕೊಳ್ಳುವುದಿಲ್ಲ. ಮೂಲತಃ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಯಮಕನಮರಡಿ ಕೋಟೆಗಲ್ಲಿ ನಿವಾಸಿಯಾಗಿದ್ದನು. ಕೇವಲ ಮೆಟ್ರಿಕ್‌ವರೆಗೆ ವ್ಯಾಸಂಗ ಮಾಡಿದ್ದ ಈತ ನೋಡ...ನೋಡುತ್ತಿದ್ದಂತೆ ಬೆಳೆದು ನಿಂತಿದ್ದನು.

ಮನೆಯಲ್ಲಿ ತಂದೆ ದಸ್ತಗೀರ, ತಾಯಿ ಅಮೀನಾ, ಸಹೋದರ ಹಸನ್‌ಸಾಬ, ಸಹೋದರಿ ರೇಷ್ಮಾ ಸೇರಿದಂತೆ ಐದು ಜನರ ಕುಟುಂಬ. ಬದುಕಿನ ಬಂಡಿ ಎಳೆಯಲು ತಂದೆ ದಸ್ತಗೀರ, ಸಹೋದರ ಹಸನಸಾಬನೊಂದಿಗೆ ಹುಸೇನಸಾಬನು ಕೂಲಿನಾಲಿ, ಫ್ಯಾಬ್ರಿಕೇಶನ್ ಕೆಲಸ ಮಾಡಿಕೊಂಡು ಕುಟುಂಬಕ್ಕೆ ಆಧಾರ ಸ್ತಂಭವೆಂಬಂತೆ ಇದ್ದನು. ಇನ್ನೂ ತಾಯಿ ಅಮೀನಾ, ಸಹೋದರಿ ರೇಷ್ಮಾ ಮನೆಗೆಲಸ ಮಾಡಿಕೊಂಡಿದ್ದರು. ಹುಸೇನಸಾಬ ಮುಸ್ಲಿಂ ಸಮಾಜದ ರೀತಿ ರಿವಾಜ್‌ಗಳಂತೆ ನಮಾಜ್ ಮಾಡಿಕೊಂಡು ಜಮಾತ್‌ನಂತಹ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದನು. ಇಲ್ಲಿ ಹುಸೇನಸಾಬ ತನ್ನ ಕುಚುಕು ಗೆಳೆಯನಿಂದ ಸಂಬಳದ ವಿಚಾರಕ್ಕೆ ಮನಸ್ತಾಪ ಬಂದು ಕೊಲೆಯಾಗಿ ಹೋಗಿದ್ದಾನೆ. 'ಇರಲಿಬಿಡು ತನ್ನ ಸಂಬಳ ಕೊಟ್ಟಾಗ ಕೊಡಲಿ' ಎಂದು ದೊಡ್ಡ ಮನಸ್ಸು ಮಾಡಿದ್ದರೆ ಇಂದು ಹುಸೇನಸಾಬ ಎಲ್ಲರಂತೆ ನಮ್ಮ-ನಿಮ್ಮ ನಡುವೆ ಬದುಕಿ ಇರುತ್ತಿದ್ದನು.


ಸ್ನೇಹಿತನಿಂದಲೇ ಕೊಲೆಯಾದ ಹುಸೇನಸಾಬ

**ಜಮಾತ್‌ನಲ್ಲಿ ಗೆಳೆಯನಾಗಿದ್ದ ಇಮ್ತಿಯಾಜ್...**

ಯಮಕನಮರಡಿ, ಹತ್ತರಗಿ ಎರಡು ಊರುಗಳಿಂದು ಕೂಡಿಕೊಂಡು ಬೆಳೆದು ನಿಂತಿವೆ. ಇಂತಹುದರಲ್ಲಿ ಒಬ್ಬರ ಪರಿಚಯ ಒಬ್ಬರಿಗಿರುವುದು ತುಂಬಾ ವಿರಳ. ಮುಸ್ಲಿಂ ಸಮುದಾಯದಲ್ಲಿ ಹೆಚ್ಚಾಗಿ ಜಮಾತ್ ಧಾರ್ಮಿಕ ಸಭೆಗಳು ಜರುಗುತ್ತವೆ. ಕಟ್ಟಾ ಮುಸ್ಲಿಂ ಸಂಪ್ರದಾಯವಾದಿಗಳು ಹೆಚ್ಚಾಗಿ ಜಮಾತ್‌ಗೆ ಹೋಗುತ್ತಾರೆ. ಯಮಕನಮರಡಿಯ ಇಮ್ತಿಯಾಜ್ ಅನ್ವರ್ ಶೇಗಡಿ ಎಂಬ 25 ವರ್ಷದ ತರುಣನು ಆಗಾಗ ಜಮಾತ್‌ನಲ್ಲಿ ಭಾಗಿಯಾಗುತ್ತಿದ್ದನು. ಇದೇ ಸಂದರ್ಭದಲ್ಲಿ ಹುಸೇನಸಾಬ ಮತ್ತು ಇಮ್ತಿಯಾಜ್ ಪರಸ್ಪರರು ಗೆಳೆಯರಾಗುತ್ತಾರೆ. ಎಲ್ಲಿಯೇ ಜಮಾತ್ ಸಭೆಗಳು ನಡೆದರೂ ಬಹುಶಃ ಇವರಿಬ್ಬರೂ ಹಾಜರಾಗುತ್ತಿದ್ದರು. ದಿನದಿಂದ ದಿನಕ್ಕೆ ಇವರಿಬ್ಬರು ಕುಚುಕು ಗೆಳೆಯರಾಗಿ ಬಿಟ್ಟರು.

ಇಮ್ತಿಯಾಜ್‌ನ ತಂದೆ ಅನ್ವರ್ ಶೇಗಡಿ ನೇಕಾರಿಕೆ ಕೆಲಸ ಮಾಡಿಕೊಂಡಿದ್ದನು. ಇಮ್ತಿಯಾಜ್ ಮಾತ್ರ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಸೆಂಟ್ರಿಂಗ್ ಕೆಲಸವನ್ನು ನಿಭಾಯಿಸುತ್ತಿದ್ದನು. ಯಮಕನಮರಡಿ, ಹುಕ್ಕೇರಿ, ಬೆಳಗಾವಿ, ಸಂಕೇಶ್ವರ ಹಾಗೂ ಸುತ್ತಮುತ್ತಲಿನ ಪರಿಸರದಲ್ಲಿ ಇತ್ತೀಚಿಗೆ ಸ್ವತಂತ್ರವಾಗಿ ಸೆಂಟ್ರಿಂಗ್ ಕೆಲಸವನ್ನು ಮಾಡುತ್ತಿದ್ದನು. ಬಂದ ಆದಾಯದಲ್ಲಿ ಕುಟುಂಬವನ್ನು ಸಾಗಿಸಲು ನೆರವಾಗುತ್ತಿದ್ದನು. ಸೆಂಟ್ರಿಂಗ್ ಕೆಲಸದಲ್ಲಿ ಉತ್ತಮವಾದ ಸಂಬಳ ಕೂಡಾ ಗುತ್ತಿಗೆ ಆಧಾರದಲ್ಲಿ ಇಮ್ತಿಯಾಜ್ ಪಡೆದುಕೊಳ್ಳುತ್ತಿದ್ದನು. ಹೀಗಾಗಿ ಸೆಂಟ್ರಿಂಗ್ ಕೆಲಸದಲ್ಲಿ ಕೂಲಿಯಾಳುಗಳನ್ನು ಕೂಡಾ ಇಮ್ತಿಯಾಜ್ ಶೇಗಡಿ ಸಾಕಿಕೊಂಡಿದ್ದನು.

ಮನೆಯಲ್ಲಿ ತಾಯಿಯಾದ ಯಾಸ್ಮೀನ್ ಮನೆಗೆಲಸ ಮಾಡಿಕೊಂಡಿದ್ದಳು. ಮೂರು ಜನ ತಂಗಿಯರಾದ ಅಲ್ಮಾಸ್, ಆಶಿಯಾ, ಆಲಿಯಾರ ಶಿಕ್ಷಣ, ಅವರ ಮದುವೆ ಮಾಡುವ ಎಲ್ಲ ಜವಾಬ್ದಾರಿಗಳು ಏಕೈಕ ಮಗನಾಗಿದ್ದ ಇಮ್ತಿಯಾಜ್ ಶೇಗಡಿ ಮೇಲಿತ್ತು. ಹೀಗಾಗಿ ಈತ ಕಷ್ಟಪಟ್ಟು ದುಡಿಯುತ್ತಿದ್ದನು. ಆದರೆ ಇದೀಗ ಕುಚುಕು ಗೆಳೆಯನಾಗಿದ್ದ ಹುಸೇನಸಾಬ ದಸ್ತಗೀರ ಪರೀಟ್‌ನ ಕೊಲೆಯಲ್ಲಿ ಜೈಲು ಸೇರಿದ್ದಾನೆ. ಇಂದು ಅಕ್ಷರಶಃ ಇಮ್ತಿಯಾಜ್ ಶೇಗಡಿಯ ಕುಟುಂಬ ಬೀದಿಗೆ ಬಂದಿದೆ.


ಆರೋಪಿ ಇಮ್ತಿಯಾಜ್ ಅನ್ವರ ಶೇಗಡಿ

**ಕೂಲಿ ಕೆಲಸಕ್ಕೆಂದು ಹುಸೇನಸಾಬ...**

ಸೆಂಟ್ರಿಂಗ್ ಮತ್ತು ವೆಲ್ಡಿಂಗ್ ಕೆಲಸವನ್ನು ಮಾಡುತ್ತಲಿದ್ದ ಇಮ್ತಿಯಾಜ್ ಶೇಗಡಿಗೆ ಫ್ಯಾಬ್ರಿಕೇಷನ್ ಮತ್ತು ಸೆಂಟ್ರಿಂಗ್ ಕೆಲಸದಲ್ಲಿ ಸಹಾಯಕರಾಗಿ ಜನರು ಬೇಕಾಗಿದ್ದರು. ಇದೇ ಸಂದರ್ಭದಲ್ಲಿ ಕುಚುಕು ಗೆಳೆಯನಾಗಿದ್ದ ಹುಸೇನಸಾಬ ಪರೀಟ್‌ನನ್ನು ಕೆಲಸಕ್ಕೆಂದು ಕರೆದುಕೊಂಡ ಇಮ್ತಿಯಾಜ್. ಬೆಳಗಾವಿ ಮತ್ತಿತರ ಕಡೆಗಳಲ್ಲಿ ತನ್ನದೇ ಮೋಟಾರ್ ಬೈಕ್‌ನಲ್ಲಿ ಕರೆದುಕೊಂಡು ಹೋಗುತ್ತಿದ್ದನು. ಆರಂಭದಲ್ಲಿ ಸಂಬಳವನ್ನು ಕೊಡುತ್ತಿದ್ದ ಇಮ್ತಿಯಾಜ್ ಬರುಬರುತ್ತ ಬಾಕಿ ಉಳಿಸಿಕೊಳ್ಳತೊಡಗಿದನು. ಹೇಗೊ ಇಮ್ತಿಯಾಜ್ ಕುಚುಕು ಗೆಳೆಯನಿದ್ದಾನೆ. ಇವತ್ತು ನಾಳೆ ಕೊಡಬಹುದು ಎಂಬ ಭರವಸೆಯಲ್ಲಿ ಆತ ಕರೆದಲ್ಲಿ ಕೂಲಿ ಕೆಲಸಕ್ಕೆ ಹುಸೇನಸಾಬ ಹೋಗುತ್ತಲಿದ್ದನು.

**ಬಾಕಿ ಸಂಬಳಕ್ಕಾಗಿ ಕಿರಿ... ಕಿರಿ...**

ಇತ್ತೀಚಿಗೆ ಹುಸೇನಸಾಬ ಪರೀಟ್ ಸಂಬಳಕ್ಕಾಗಿ ಮೇಲಿಂದ ಮೇಲೆ ಗೆಳೆಯ ಇಮ್ತಿಯಾಜ್‌ನೊಡನೆ ಕಿರಿ ಕಿರಿ ಮಾಡತೊಡಗಿದನು. ಆತ ಕೆಲಸಕ್ಕೆಂದು ಕರೆದರೆ 'ನನ್ನ ಹಿಂದಿನ ಬಾಕಿ ಸಂಬಳವನ್ನು ಮೊದಲು ನೀನು ಕೊಡುವುದನ್ನು ಕಲಿ... ಆಮೇಲೆ ನನ್ನನ್ನು ಕೆಲಸಕ್ಕೆ ಕರಿ' ಎಂದು ಮೂದಲಿಸತೊಡಗಿದನು. ದಿನಕಳೆದಂತೆ ಸಂಬಳಕ್ಕಾಗಿ ಇಮ್ತಿಯಾಜ್‌ನನ್ನು ಸಾರ್ವಜನಿಕವಾಗಿ ಹುಸೇನಸಾಬ ಇನ್ನಿಲ್ಲದಂತೆ ಕಿರಿ ಕಿರಿ ಮಾಡತೊಡಗಿದನು. ಇದು ಹುಸೇನಸಾಬನ ಮನೆಯಲ್ಲಿ ಗೊತ್ತಿತ್ತು. ಮನೆಯಲ್ಲಿ 'ಇಮ್ತಿಯಾಜ್



ಕೊಲೆಯಾದ ಹುಸೇನಸಾಬ ಪರೀಟ್‌ನ ಶವ ಗುರುತಿಸಿ ರೋಧಿಸುತ್ತಿರುವ ತಂದೆ-ತಾಯಿ


ಬಾಳಿ ಬದುಕ ಬೇಕಾಗಿದ್ದ ಹುಸೇನಸಾಬ ಬಾರದೂರಿಗೆ ಪಯಣ

ಶೇಗಡಿ ಜತೆಗೆ ಕೆಲಸಕ್ಕೆ ಹೋಗಬೇಡ' ಎಂದು ತಾಕೀತು ಕೂಡಾ ಮಾಡಿದ್ದರು. ಹೀಗಾಗಿ ಬೇರೆ ಕಡೆಗೆ ಹುಸೇನಸಾಬ ಕೆಲಸಕ್ಕೆ ಹೋಗತೊಡಗಿದ್ದನು. ಹುಸೇನಸಾಬನ ಕಿರಿ... ಕಿರಿ ತೀರಾ ಅಸಹ್ಯ ಹುಟ್ಟಿಸಿತ್ತು. ಇದರಿಂದಾಗಿ ಇಮ್ತಿಯಾಜ್ ಆಕ್ರೋಶಗೊಂಡು ಈತನಿಗೊಂದು ಗತಿ ಕಾಣಿಸಬೇಕು ಎಂದು ತೀರ್ಮಾನಿಸಿದ್ದನು.

**ಇಬ್ಬರೂ ಕುಚುಕುಗಳ ಗುಂಡಿನ ಚಟ...**

ಪರಸ್ಪರ ಯಾವಾಗ ಹುಸೇನಸಾಬ ಮತ್ತು ಇಮ್ತೀಯಾಜ್ ಕುಚುಕು ಗೆಳೆಯರಾದರೋ... ಆಗಿನಿಂದಲೂ ಇಬ್ಬರೂ ಸೇರಿ ಗಂಟೆಗಟ್ಟಲೇ ಕುಳಿತುಕೊಂಡು ಗುಂಡು ಹಾಕುತ್ತಿದ್ದರು. ಬಿಲ್ ಕೂಡಾ ಇಬ್ಬರು ಶೇರ್ ಮಾಡಿಕೊಳ್ಳತೊಡಗಿದರು. ಕುಡಿತದ ಅಮಲಿನಲ್ಲಿ ಊರಿನ ಉಸಾಬರಿ ಎಲ್ಲವನ್ನೂ ಮಾಡುತ್ತಿದ್ದ ಗೆಳೆಯ ಹುಸೇನಸಾಬ. ಸ್ವಲ್ಪ ಕಿಕ್ ಏರಿದರೆ ಸಾಕು, ಸೊಂಟದ ಕೆಳಗಿನ ಭಾಷೆ ತನ್ನಿಂದ ತಾನೇ ಈತನ ಬಾಯಲ್ಲಿ ಉದುರುತ್ತಿದ್ದವು. ಮತ್ತು ಬಾಕಿ ಸಂಬಳಕ್ಕಾಗಿ ಇಮ್ತಿಯಾಜ್‌ನನ್ನು ಬಾಯಿಗೆ ಬಂದಂತೆ ಬಯ್ಯುತ್ತಿದ್ದನು. ಕುಡಿದ ಮತ್ತಿನಲ್ಲಿ ಹುಸೇನಸಾಬನ ವಿಕೃತಕಾಮ ಜಾಗ್ರತವಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ಆತನಿಗೆ ಸೂಳೆಯರ ಸಹವಾಸವು ಬೇಕಾಗಿತ್ತು. ಅದಕ್ಕಾಗಿ ಆತ ಸೂಳೆಯರ ಅಡ್ಡಾಗಳಲ್ಲಿ ಇಣುಕುತ್ತಿದ್ದನು. ಇದಕ್ಕಾಗಿ ಬೆಳಗಾವಿ, ಗೋಕಾಕ, ಮಹಾರಾಷ್ಟ್ರದ ಮಿರಜ್, ಸಾಂಗಲಿಯಂತಹ ರೆಡ್‌ಲೈಟ್ ಏರಿಯಾಗಳ ಸಂಪರ್ಕವೂ ಈತನಿಗಿತ್ತು ಎಂದು ಹೇಳಲಾಗುತ್ತಿದೆ. ಆದರೆ ಈತನ ಕುಚುಕು ಗೆಳೆಯ ಇಮ್ತಿಯಾಜ್‌ನಿಗೆ ಕುಡಿತದ ಚಟ ಮಾತ್ರ ಇತ್ತು.


ಸಿಪಿಐ ವಿಶ್ವನಾಥ ಚೌಗಲಾ


ಪಿಎಸ್‌ಐ ನಂದೀಶ ಎಸ್.

**ಸಂಚು ರೂಪಿಸಿದ ಇಮ್ತೀಯಾಜ್...**

ಇಮ್ತಿಯಾಜ್ ಶೇಗಡಿಯ ಜತೆ ಕೂಲಿಯಾಳಾಗಿ ಹೋಗುತ್ತಲಿದ್ದ ಹುಸೇನಸಾಬ ಪರೀಟ್ ಈತನು ದಷ್ಟಪುಷ್ಟನಿದ್ದು ದಣಿವರಿಯದೇ ಕೆಲಸ ಮಾಡಿಕೊಂಡಿದ್ದನು. ಹೀಗಾಗಿ ಈತ ಕೆಲಸಕ್ಕೆ ಬಾರದೆ ಇರದಿರುವುದು ಇಮ್ತೀಯಾಜ್‌ನಿಗೆ ತೊಂದರೆ ಉಂಟಾಗಿತ್ತು. ಅದಲ್ಲದೇ ಹುಸೇನಸಾಬ ಪರೀಟ್ ಬಾಕಿ ಉಳಿದಿದ್ದ ತನ್ನ ಸಂಬಳ ಕೊಡಬೇಕು ಅದಲ್ಲದೇ ಹುಸೇನಸಾಬ ಪರೀಟ್ ಬಾಕಿ ಉಳಿದಿದ್ದ ತನ್ನ ಸಂಬಳ ಕೊಡಬೇಕು ಎಂದು ಮೇಲಿಂದ ಮೇಲೆ ಇನ್ನಿಲ್ಲದಂತೆ ಕಿರಿ... ಕಿರಿ... ಮಾಡಿ ಸಾರ್ವಜನಿಕವಾಗಿ ನಿಂದಿಸತೊಡಗಿದಾಗ ಇಮ್ತಿಯಾಜ್ ತೀರಾ ಮುಜುಗರಕ್ಕೆ ಒಳಗಾದನು. ಹೇಗಾದರೂ ಸರಿ ಇವನಿಗೆ ತಕ್ಕ ಶಾಸ್ತಿ ಮಾಡಲೇಬೇಕು ಎಂದು ಒಳಗೊಳಗೆ ಹೊಂಚು ಹಾಕಿ ಸಂಚು ರೂಪಿಸಿ ಮುಹೂರ್ತಕ್ಕಾಗಿ ಕಾಯ್ದು ಕುಳಿತಿದ್ದನು.

**ಸಂಬಳ ಕೊಡುತ್ತೇನೆಂದು ಕರೆ ತಂದನು...**

ಅಂದು ದಿನಾಂಕ 03-08-2025 ರಂದು ಶನಿವಾರವಾಗಿತ್ತು. ಹುಸೇನಸಾಬ ಪರೀಟ್ ತನ್ನ ಮನೆಯಲ್ಲಿದ್ದನು. ಆಗ ಮಧ್ಯಾಹ್ನ 1 ಗಂಟೆಯ ಸಮಯ. ನೇರವಾಗಿ ಇಮ್ತಿಯಾಜ್ ಶೇಗಡಿ ಮನೆಗೆ ಬಂದು 'ಸಂಕೇಶ್ವರದಲ್ಲಿ ಕೆಲಸವಿದ್ದು ನೋಡಿಕೊಂಡು ಬರೋಣ ಬಾ' ಎಂದು ಕರೆದಾಗ 'ಏs ಮಗನ ಹೋಗಲೇ ನೀನು ನನ್ನ ದುಡಿದಿದ್ದ ಪಗಾರ್ ಕೊಡದೇ ಮುಳುಗಿಸಿಬಿಟ್ಟದಿ... ನಿನ್ನಂತಹ ನೀಚ ಮನುಷ್ಯಾನ ಜತೆಗೆ ಬರುವುದಿಲ್ಲ' ಎಂದಾಗ ಇಮ್ತಿಯಾಜ್ ಶೇಗಡಿಗೆ ಸಿಟ್ಟು ಉಕ್ಕಿ ಬಂದಿದೆ. ಆದರೂ ಅದನ್ನು ತೋರಿಸದೇ 'ಆಯ್ತು ಈಗಿಂದ ಮತ್ತು ಹಿಂದಿಂದ ಬಗಾರ ಕೂಡಿಯೇ ಕೊಡುತ್ತೇನೆಂದು ನಂಬಿಸಿ ಹುಸೇನಸಾಬನನ್ನು ತನ್ನ ಮೋಟಾರ್ ಬೈಕ್ ಮೇಲೆ ಕರೆದುಕೊಂಡು ನೇರವಾಗಿ ಸಂಕೇಶ್ವರದತ್ತ ಬಂದು ಊರ ಹೊರಗಿರುವ ಎ7 ಬಾರ್‌ಗೆ ಕರೆದೊಯ್ದಿದ್ದಾನೆ. ಇದು ಸಂಕೇಶ್ವರದ ಪರಿಸರದಲ್ಲಿ ಅತ್ಯಾಧುನಿಕವಾದ ಬಾರ್ ಆಗಿದೆ. ಅಲ್ಲಿ ಸುಮಾರು ಎರಡು ಗಂಟೆ ಕುಳಿತು ಗುಂಡು ಹಾಕಿದ್ದಾರೆ. ಎಲ್ಲಾ ಬಿಲ್ ಇಮ್ತಿಯಾಜ್ ಕೊಟ್ಟಿದ್ದಾನೆ.


**ಸೂಳೆಯರ ಸಂಗಕ್ಕಾಗಿ ಸಾಂಗಲಿಗೆ...?**

ಕುಡಿದ ಅಮಲಿನಲ್ಲಿ ಹುಸೇನಸಾಬ ಪರೀಟ್‌ನ ಕಾಮ ಜಾಗ್ರತಗೊಂಡಿದೆ. 'ಏ ಮಗನ ಇಮ್ಯಾಜ ನನಗ ಈ ಹೊತ್ತ ಹೆಂಗಸರು ಬೇಕು. ಅದಕ್ಕೆ ಇತ್ತಿಂದ ಸಾಂಗಲಿಗೆ ಹೋಗಿ ಮಸ್ತಪೈಕಿ ಚಂದಂತಹ ಸೂಳಿ ನೋಡುಣು' ಎಂದು ದುಂಬಾಲು ಬಿದ್ದಿದ್ದಾನೆ. ಇತ್ತ ಇಮ್ತಿಯಾಜ್‌ನ ಮನದಲ್ಲಿ ಸೇಡು... ಈರ್ಷೆ ತಲೆಯೆತ್ತಿದೆ. ಮಾರ್ಗ ಮಧ್ಯದಲ್ಲಿ ಹುಸೇನಸಾಬನಿಗೆ ಒಂದು ಗತಿ ಕಾಣಿಸಿದರಾಯಿತು ಎಂದು ಆತನು 'ಹೂಂ... ನಡಿ ನೀನೊಬ್ಬನೇ ಸೂಳೆಯರ ಅಡ್ಡೆಗೆ ಹೋಗುವಿಯಂತೆ... ನಾನು ಹೊರಗಿ ಇರ್‍ತೀನಿ' ಎಂದು ತನ್ನ ಬೈಕ್ ಚಿಕ್ಕೋಡಿ ತಾಲ್ಲೂಕಿನ ಅಂಕಲಿಗೆ ಹೊರಳಿಸಿದ್ದಾನೆ. ಅಂಕಲಿಯ ಬ್ಲೂಸ್ಟಾರ್ ವೈನ್ ಶಾಪ್‌ನಲ್ಲಿ ಮತ್ತೆ ಹುಸೇನಸಾಬ ಮತ್ತು ಇಮ್ತೀಯಾಜ್ ಗುಂಡು ಏರಿಸಿದ್ದಾರೆ. ಅದಾಗಲೇ ಸಂಜೆ 7 ಗಂಟೆಯಾಗಿದೆ. ಹುಸೇನಸಾಬನಿಗೆ ಸಾಂಗಲಿಯ ಸೂಳೆಯರ ಅಡ್ಡೆಗೆ ಹೋಗುವ ಅವಸರವಿತ್ತು. ಇದಕ್ಕೆ 'ಟಾಯಿಮ್ ಆಗಿದೆ ಬೇಡಾ' ಎಂದು ಕುಚುಕು ಗೆಳೆಯ ಇಮ್ತೀಯಾಜ್ ಹೇಳಿದಾಗ ಸಿಟ್ಟಿನಿಂದ ಇಮ್ತೀಯಾಜ್ ಮೇಲೆ ಹುಸೇನಸಾಬ ಹಲ್ಲೆ ಮಾಡಲು ಯತ್ನಿಸಿದ್ದಾನೆ.

**ಕಟ್ಟಿಗೆಯಿಂದ ಥಳಿಸಿ ಕೊಲೆಗೈದ...**

ಆಗಲೇ ಇಮ್ತೀಯಾಜ್ ಶೇಗಡಿ ಒಳಗಿನ ಸೇಡಿನ ಕಿಚ್ಚು ಧಗ... ಧಗಿಸಿದೆ. ಏನೋ ಹೇಳಿ... ಆತನನ್ನು ಸಾಂಗಲಿಗೆ ಹೋಗೋಣ. ಬೈಕ್ ಹತ್ತು ಎಂದು ಸ್ವಲ್ಪ ಮುಂದೆ ಹತ್ತಿಸಿಕೊಂಡು ಹೋಗಿ ರಸ್ತೆಬದಿ ಬೈಕ್ ನಿಲ್ಲಿಸಿದ್ದಾನೆ. ಅಲ್ಲಿಯೇ ಸಮೀಪದಲ್ಲಿದ್ದ ಕಟ್ಟಿಗೆ ಅಡ್ಡೆಯಿಂದ ದಪ್ಪ ಉರುವಲು ಕಟ್ಟಿಗೆ ತೆಗೆದುಕೊಂಡು ಬಂದು 'ಹೂಂ... ನಡೀ ಮಗನ ಹುಸನ್ಯಾ ಊರಿಗಿ ಹೋಗುಣು' ಎಂದಾಗ 'ಏ... ಇಮ್ತ್ಯಾ ನನಗ ಇಂದ ಹೆಂಗಸರು ಬೇಕೆ ಬೇಕು... ನೀ ಬರದಿದ್ರ ನಿನ ಬೈಕ್ ಕೊಡು ನಾ ಹೋಗ್ತಿನಿ' ಎಂದು ತೀರಾ ಹೊಲಸು... ಹೊಲಸು ಬೈದಿದ್ದಾನೆ.

ಆಕ್ರೋಶದ ಪಿತ್ತ ನೆತ್ತಿಗೇರಿಸಿಕೊಂಡ ಇಮ್ತೀಯಾಜ್


ಮಗ ಕಳೆದುಕೊಂಡು ಕಂಗಾಲಾದ ದಸ್ತಗೀರ, ಅಮೀನಾ ದಂಪತಿಗಳು

ಶೇಗಡಿ ಕೈಲಿದ್ದ ಕಟ್ಟಿಗೆಯಿಂದ ತಲೆ, ಮುಖಕ್ಕೆ ಬಲವಾಗಿ ಥಳಿಸಿದ್ದಾನೆ. ಥಳಿತದಿಂದ ತಲೆಯೊಡೆದು, ಮುಖಕ್ಕೆ ಗಾಯವಾಗಿ ತೀವ್ರ ರಕ್ತಸ್ರಾವವಾಗಿ ರಸ್ತೆಯ ಬದಿಗೆ ಬಿದ್ದು ಒದ್ದಾಡಿ ಕುಟುಕು ಜೀವ ಹಿಡಿದಿದ್ದ ಹುಸೇನಸಾಬ. ಇದನ್ನು ನೋಡಿ ಗಾಬರಿಗೊಂಡ ಇಮ್ತೀಯಾಜ್ ತನ್ನ ಬೈಕ್ ಬಿಟ್ಟು ಓಡುತ್ತ... ಓಡುತ್ತ ಮೊಬೈಲ್ ಬೀಸಾಕಿ ಸಂಕೇಶ್ವರದತ್ತ ಕತ್ತಲಲ್ಲಿ ಮರೆಯಾದನು.

**ಆಸ್ಪತ್ರೆಗೆ ದಾಖಲಿಸಿದರೂ... ಬದುಕಲಿಲ್ಲ...**

ಇತ್ತ ಅಂಕಲಿ-ಮಿರಜ್ ರಸ್ತೆಯ ಫೇಮಿಲಾ ಆಯಿಸ್ ಕ್ರೀಮ್ ಅಂಗಡಿಯ ಹತ್ತಿರ ನಡೆದ ಭೀಕರ ಘಟನೆಯನ್ನು ಸಾರ್ವಜನಿಕರು ಅಂಕಲಿ ಪೊಲೀಸರಿಗೆ ತಿಳಿಸಿದರು. ಕರ್ತವ್ಯದ ಮೇಲಿದ್ದ ಪಿಎಸ್‌ಐ ನಂದೀಶ ಎಸ್. ಅವರು ತಡ ಮಾಡದೇ ತಮ್ಮ ಸಿಬ್ಬಂದಿ ಸಮೇತ ಘಟನಾ ಸ್ಥಳಕ್ಕೆ ಧಾವಿಸಿದರು. ರಕ್ತದ ಮಡುವಿನಲ್ಲಿ ಕುಟುಕು ಜೀವ ಹಿಡಿದು ಬಿದ್ದಿದ್ದ ಹುಸೇನಸಾಬನನ್ನು ತಕ್ಷಣ ಸರಕಾರಿ ಆಸ್ಪತ್ರೆಗೆ ದಾಖಲಿಸಿದರು. ಆದರೆ ಪರಿಸ್ಥಿತಿ ಕೈ ಮೀರಿ ಹುಸೇನಸಾಬ ಮೃತಪಟ್ಟಿದ್ದನು. ತಕ್ಷಣ ತಡಮಾಡದೇ ವಿಷಯವನ್ನು ಪಿಎಸ್‌ಐ ನಂದೀಶ ಎಸ್. ಅವರು ಚಿಕ್ಕೋಡಿಯ ಸಿಪಿಐ ವಿಶ್ವನಾಥ ಚೌಗಲಾ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಕೊಲೆಯಾದವನ ಮತ್ತು ಕೊಲೆ ಮಾಡಿದವನ ಪತ್ತೆಗೆ ತೊಡಗಿಕೊಂಡರು. ಅಷ್ಟರೊಳಗೆ ಚಿಕ್ಕೋಡಿಯ ಸಿಪಿಐ ವಿಶ್ವನಾಥ ಚೌಗುಲಾ ಅವರು ಅಂಕಲಿಯ ಸರಕಾರಿ ಆಸ್ಪತ್ರೆಗೆ ಧಾವಿಸಿ ಬಂದ ಶವದ ಸೂಕ್ಷ್ಮ ಪರಿಶೀಲನೆ ಮಾಡಿ ಘಟನಾ ಸ್ಥಳವನ್ನು ಪರಿಶೀಲಿಸಿದರು. ಕೊಲೆಯಾದವನು ಹುಸೇನಸಾಬ ದಸ್ತಗೀರ ಪರೀಟ್ ಎಂದು ಆತನ ಜೇಬಿನಲ್ಲಿದ್ದ ಎಟಿಎಂ ಪರಿಶೀಲಿಸಿದಾಗ ತಿಳಿದು ಬಂದಿತು. ಇನ್ನೂ ಘಟನಾ ಸ್ಥಳದಲ್ಲಿದ್ದ ಬೈಕ್ ನಂ. ಮೇಲಿಂದ ಇಮ್ತೀಯಾಜ್ ಅನ್ವರ್ ಶೇಗಡಿ ಎಂದು ತಿಳಿದು ಬಂದಿತ್ತು. ಸದರಿ ವಿಷಯವನ್ನು ಯಮಕನಮರಡಿ ಪೊಲೀಸರ ಮುಖಾಂತರ ಕೊಲೆಯಾದ ಹುಸೇನಸಾಬನ ಮನೆಯವರಿಗೆ ವಿಷಯ ಮುಟ್ಟಿಸಲಾಯಿತು.


ಕೊಲೆಗೀಡಾದ ಹುಸೇನಸಾಬ ಮತ್ತು ಹಂತಕ ಇಮ್ತಿಯಾಜ್ ಸಂಕೇಶ್ವರದ ಎ7 ಬಾರ್‌ನಲ್ಲಿ ಕಂಠಪೂರ್ತಿ ಗುಂಡು ಹಾಕಿದ್ದರು

**ಪಂಚನಾಮೆ... ಮರಣೋತ್ತರ ಪರೀಕ್ಷೆ...**

ಯಮಕನಮರಡಿಯಿಂದ ಅಂಕಲಿ ಪೊಲೀಸ್ ಠಾಣೆಗೆ ಧಾವಿಸಿ ಬಂದು ಪಿಎಸ್‌ಐ ನಂದೀಶ್, ಸಿಪಿಐ ವಿಶ್ವನಾಥ ಅವರನ್ನು ಕಂಡು ಮಗ ಹುಸೇನಸಾಬ ಕೊಲೆಯಾಗಿರುವ ಮಾಹಿತಿ ತಿಳಿದುಕೊಂಡು ಸರಕಾರಿ ಆಸ್ಪತ್ರೆಗೆ ತೆರಳಿ ಮಗನ ಶವ ಗುರುತಿಸಿ ಎದೆ... ಎದೆ ಬಡಿದುಕೊಂಡು ಅತ್ತುಬಿಟ್ಟರು. ಅದರಂತೆ ತನ್ನ ಮಗನನ್ನು ಕರೆತಂದ ಆತನ ಸ್ನೇಹಿತ ಇಮ್ತೀಯಾಜ್ ವಿರುದ್ಧ ದೂರು ನೀಡಿದರು. ದೂರನ್ನು ಪಿಎಸ್‌ಐ ನಂದೀಶ್ ಎಸ್. ಅಂಕಲಿ ಪೊಲೀಸ್ ಠಾಣೆಯಲ್ಲಿ ದಾಖಲಿಸಿಕೊಂಡು ಪ್ರಕರಣವನ್ನು ಸಿಪಿಐ ವಿಶ್ವನಾಥರಿಗೆ ಹಸ್ತಾಂತರಿಸಿದರು. ನಂತರ ಹುಸೇನಸಾಬನ ಶವದ ಪಂಚನಾಮೆ, ಮರಣೋತ್ತರ ಪರೀಕ್ಷೆ ಜರುಗಿಸಿ ಶವವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

**ಹಂತಕ ಸ್ನೇಹಿತನ ಬಂಧನ...**


ಇದೇ ಮೋಟಾರ್ ಸೈಕಲ್ ಮೇಲೆ ಬಂದಿದ್ದ ಕೊಲೆಯಾದ ಹುಸೇನಸಾಬ, ಆರೋಪಿ ಇಮ್ತಿಯಾಜ್

ಚತುರ ಮತ್ತು ಧಾಡಸಿ ಸಿಪಿಐ ವಿಶ್ವನಾಥ ಅವರು ಪ್ರಕರಣದಲ್ಲಿ ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರಿಂದ ಮಹತ್ವದ ನಿರ್ದೇಶನ ಪಡೆದುಕೊಂಡರು. ಖಚಿತ ಮಾಹಿತಿ ಆಧರಿಸಿ ಹಂತಕ ಇಮ್ತೀಯಾಜ್ ಅನ್ವರ್ ಶೇಗಡಿಯನ್ನು ದಿ. 04-08-2025ರಂದು ಸಂಕೇಶ್ವರ-ಹುಕ್ಕೇರಿ ರಸ್ತೆಗೆ ಹೊಂದಿಕೊಂಡಿರುವ ನೇಸರಿ ಗಾರ್ಡನ್ ಹತ್ತಿರ ಪಿಎಸ್‌ಐ ನಂದೀಶ್, ಸಿಬ್ಬಂದಿಗಳಾದ ಆರ್.ಎಸ್. ಖೋತ ಅನಿಲ ಸಪ್ತಸಾಗರ, ಎಸ್.ಟಿ. ಪೂಜೇರಿ, ನಾಗರಾಜ ದೇವಲತ್ತಿ ವಶಕ್ಕೆ ಪಡೆದುಕೊಂಡು ಅಂಕಲಿ ಠಾಣೆಯಲ್ಲಿ ಸಿಪಿಐ ಪೂಜೇರಿ, ನಾಗರಾಜ ದೇವತ್ತಿ ವಶಕ್ಕೆ ಪಡೆದುಕೊಂಡು ಅಂಕಲಿ ಠಾಣೆಯಲ್ಲಿ ಸಿಪಿಐ ವಿಶ್ವನಾಥರ ಮುಂದೆ ಹಾಜರುಪಡಿಸಿದರು. ವಿಚಾರಣೆ ಕಾಲಕ್ಕೆ ತಾನು ಮಾಡಿದ ತಪ್ಪು ಒಪ್ಪಿಕೊಂಡಿದ್ದಾನೆ ಹಂತಕ. ಇದೀಗ ನ್ಯಾಯಾಧೀಶರ ಆದೇಶದಂತೆ ಹಂತಕನನ್ನು ಜೈಲಿಗಟ್ಟಲಾಗಿದೆ. ಈಗ ಹಂತಕ ಇಮ್ತೀಯಾಜ್ ಜೈಲಿನಲ್ಲಿ ತಂಗಳು ಮುರಿಯುತ್ತಿದ್ದಾನೆ.


ಸಿಬ್ಬಂದಿಗಳಾದ ಆರ್.ಎಸ್. ಖೋತ, ಅನೀಲ ಸಪ್ತಸಾಗರ ಹಾಗೂ ಎಸ್.ಟಿ. ಪೂಜೇರಿ

# ಎಸ್. ನಾರಾಯಣ್ ವಿರುದ್ಧ ವರದಕ್ಷಿಣೆ ದೂರು ಹೆಟ್ಟಿದಳು, ಸೊಸೆ ಪವಿತ್ರ!!


ಪವಿನ್-ಪವಿತ್ರಾ

3 ☞

ನಾನೇ ಅದರ ಖರ್ಚು ವೆಚ್ಚಗಳನ್ನು ಭರಿಸಿದ್ದೇನೆ. ಮಗುವಾಗಿ ಮೂರು ತಿಂಗಳಾದ ನಂತರ ನಮ್ಮ ಮಾವ (ಎಸ್. ನಾರಾಯಣ್) ತಮ್ಮ ಸ್ವಂತ ಮನೆಗೆ ನಮ್ಮನ್ನು ಆಹ್ವಾನಿಸಿದ್ದರಿಂದ ನಾವು ಅವರು ಹೇಳಿದಂತೆ ಪುನಃ ಅತ್ತೆ-ಮಾವನ ಮನೆಗೆ ಹೋಗಿದ್ದೆವು

ನಾವು ಅವರ ಮನೆಗೆ ವಾಪಸ್ಸು ಹೋದ ನಂತರ ಕೆಲವೇ ದಿನಗಳಲ್ಲಿ ಎಸ್. ನಾರಾಯಣ್ ಹಾಗೂ ನನ್ನ ಪತಿ ಪವನ್ ಅವರು 'ಕಲಾಸಾಮ್ರಾಟ್ ಟೀಂ ಅಕಾಡೆಮಿ' ಎಂಬ ಫಿಲ್ಮ್ ಇನ್‌ಸ್ಟಿಟ್ಯೂಟ್ ಆರಂಭಿಸಿದರು. ಅದಕ್ಕೆ ಬೇಕಾದ ಬಂಡವಾಳಕ್ಕಾಗಿ ಹಣ ಕೊಡುವಂತೆ ನನ್ನ ಪತಿ ಪವನ್ ನನ್ನ ಬಳಿ ಬೇಡಿಕೆಯಿಟ್ಟಿದ್ದರು. ನಾನು ನನ್ನ ತಾಯಿಯ ಒಡವೆಗಳನ್ನು ಒತ್ತೆಯಿಟ್ಟು ಹಣ ತಂದು ಕೊಟ್ಟಿದ್ದೆ. ಆದರೆ, ಆ ಸಂಸ್ಥೆ ಲಾಸ್ ಆಗಿ ಮುಚ್ಚಿಹೋಯಿತು. ಕಡೆಗೆ ಅಲ್ಲಿ ಆದ ನಷ್ಟವನ್ನು ತುಂಬಿಕೊಡಲು ನನಗೆ ಒತ್ತಡ ಹೇರಿದ್ದು, ನಾನು 10 ಲಕ್ಷ ರೂ.ಗಳ ಸಾಲ ತಂದು ಕೊಟ್ಟಿದ್ದೆ. ಅದರ ಇಎಂಐ ನಾನೇ ಕಟ್ಟುತ್ತಿದ್ದೇನೆ. ಇನ್ನು ಪವನ್, ನನ್ನ ತಾಯಿಯಿಂದ 75,000 ರೂ. ಹಣ ಪಡೆದಿದ್ದಾರೆ.

ಇಷ್ಟೆಲ್ಲಾ ಸಹಾಯ ಮಾಡಿದರೂ ಕೆಲವು ದಿನಗಳಿಂದ ನನಗೆ ಮತ್ತೆ ಮತ್ತೆ ಹಣ ತಂದು ಕೊಡುವಂತೆ ನನ್ನ ಅತ್ತೆ (ಭಾಗ್ಯವತಿ) ಹಾಗೂ ನನ್ನ ಪತಿ ಪವನ್ ಪೀಡಿಸುತ್ತಿದ್ದರು. ಅದಕ್ಕೆ ನಾನು ಒಪ್ಪಿರಲಿಲ್ಲ. ಆದರಿಂದ ಸಿಟ್ಟಿಗೆದ್ದ ಅವರು ನನ್ನನ್ನು ಮನೆಯಿಂದ ಹೊರಗೆ ಹಾಕಿದ್ದಾರೆ. ಮದುವೆ ಅವಧಿಯಲ್ಲೇ ಒಂದು ಲಕ್ಷ ರೂ. ಮೌಲ್ಯದ ಉಂಗುರ ಮತ್ತು ಮದುವೆಯ ಖರ್ಚು ವೆಚ್ಚಕ್ಕಾಗಿ ಸ್ವಲ್ಪ ಹಣವನ್ನೂ ಪಡೆದಿದ್ದಾರೆ ಎಂಬಿತ್ಯಾದಿಯಾಗಿ ಎಸ್ನಾಣಿ ಸೊಸೆ ಪವಿತ್ರಾ ಆಪಾದಿಸಿದ್ದಾರೆ!

ನಾನೀಗ ನನ್ನ ತವರು ಮನೆಯಲ್ಲಿದ್ದೇನೆ. ಈ ಮಧ್ಯೆ, ನಾನು ಸುಮಾರು ಬಾರಿ ಅವರ ಮನೆಗೆ ಹೋಗಿದ್ದೆನಾದರೂ, ಅವರ ಮನೆಯ ಸೆಕ್ಯುರಿಟಿ ಗಾರ್ಡ್, ಅವರ್‍ಯಾರು ಮನೆಯಲ್ಲಿಲ್ಲ ಎಂದು ಹೇಳಿದ್ದರಿಂದ ನಾನು ವಾಪಸ್ಸು ಬರಬೇಕಾಯಿತು. ನನಗೆ, ನನ್ನ ಮಗನಿಗೆ ಏನಾದರೂ ತೊಂದರೆ ಯಾದರೆ ಅದಕ್ಕೆ ಎಸ್.ನಾರಾಯಣ್, ಅವರ ಪತ್ನಿ ಭಾಗ್ಯವತಿ ಹಾಗೂ ಅವರ ಪುತ್ರ ಪವನ್ ಅವರೇ ಕಾರಣ.... ಅಲ್ಲದೆ, ಎಸ್. ನಾರಾಯಣ್, ಭಾಗ್ಯಲಕ್ಷ್ಮಿ ಹಾಗೂ ಪವನ್ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಪವಿತ್ರಾ ಪೊಲೀಸರಲ್ಲಿ ವಿನಂತಿಸಿದ್ದಾರೆ.

### ನಾರಾಯಣ್ ಏನಂತಾರೆ?

ಅತ್ತೆ, ಮಾವ, ಗಂಡನ ವಿರುದ್ಧ ಏನಾದರೊಂದು ಗಂಭೀರ ಆರೋಪ ಮಾಡಿ, ಅವರನ್ನು ಕಟ್ಟಿಹಾಕಲು ನಮ್ಮ ದೇಶದ ಹೆಣ್ಮಕ್ಕಳಿಗೆ ಸುಲಭವಾಗಿ ಸಿಗುವ ಅಸ್ತ್ರವೆಂದರೆ ಅದು ವರದಕ್ಷಿಣೆ ಕೇಸ್! ಇದು ಸೊಸೆಯ ದೂರಿಗೆ ಎಸ್.ನಾರಾಯಣ್ ಮಾಧ್ಯಮಗಳಿಗೆ ನೀಡಿದ ರಿಯಾಕ್ಷನ್!



ಸೊಸೆಯ ಡೌರಿ ಎರಾಸ್ಮೆಂಟ್ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿರುವ ಎಸ್. ನಾರಾಯಣ್, ನನ್ನ ಸೊಸೆ ಮನೆ ಬಿಟ್ಟು ಹೋಗಿ ಒಂದು ವರ್ಷವಾಗಿದೆ. ಆಗ ಹಾಕದ ಕೇಸ್ ಈಗ ಯಾಕೆ ಹಾಕಿದ್ದಾರೆ ಎಂದು ಗೊತ್ತಾಗುತ್ತಿಲ್ಲ. ಇಂದಿನ ಕಾಲದ ಹೆಣ್ಣು ಮಕ್ಕಳಿಗೆ ತನ್ನ ಗಂಡ, ಅತ್ತೆ, ಮಾವನನ್ನು ಕಟ್ಟಿಹಾಕಲು ಸುಲಭವಾಗಿ ಸಿಗುವ ಅಸ್ತ್ರವೇ ವರದಕ್ಷಿಣೆ. ಅದನ್ನೇ ನಮ್ಮ ಸೊಸೆಯೂ ಬಳಸಿದ್ದಾರೆ ಅಷ್ಟೇ ಎಂದು ಹೇಳಿದ್ದಾರೆ.

ನಮ್ಮಲ್ಲಿ ಹೆಣ್ಣುಮಕ್ಕಳನ್ನು ಗೌರವಿಸುವ ಸಂಸ್ಕೃತಿ, ಸಂಸ್ಕಾರವಿದೆ. ನನ್ನ ಪುತ್ರ ಪವನ್ ಮೇಲೆ, ನನ್ನ ಮೇಲೆ ಹಾಗೂ ನನ್ನ ಪತ್ನಿ ಭಾಗ್ಯಲಕ್ಷ್ಮಿ ಮೇಲೆ ನನ್ನ ಸೊಸೆ ಪವಿತ್ರಾ ಅವರು ಮಾಡಿರುವ ಆರೋಪಗಳೆಲ್ಲವೂ ಸುಳ್ಳು. ಪವನ್ ಹಾಗೂ ಪವಿತ್ರಾ ಪರಸ್ಪರ ಪ್ರೀತಿಸಿ ಮದುವೆಯಾದವರು. ಅವರ ಪ್ರೀತಿಗೆ ನಾನು ಅಡ್ಡಿ ಬರಲಿಲ್ಲ. ಆದರೆ, ಸೊಸೆಯಾಗಿ ಬಂದವಳು ಗಂಡನ ಮನೆಯಲ್ಲಿನ ಆಚಾರ-ವಿಚಾರ, ಸಂಸ್ಕೃತಿಯನ್ನು ಅರ್ಥ ಮಾಡಿಕೊಂಡು ಬಾಳಬೇಕು. ಆದರೆ, ಆಕೆ ಹಾಗೆ ನಡೆದುಕೊಳ್ಳಲಿಲ್ಲ. ಅದನ್ನು ತಿಳಿಸಲು ಹೋದಾಗ ಮನೆಯಲ್ಲಿ ಕಿರಿಕಿರಿಗಳಾದವು. ಸಂಬಂಧಗಳಲ್ಲಿ ಬಿರುಕು



ಮೂಡಿದವು. ಇಂದಿನ ಯುವಕ- ಯುವತಿಯರು ನಮ್ಮಂಥ ಹಿರಿಯ ಮಾತು ಕೇಳೋದೆ ಇಲ್ಲ ಎಂಬಂಥ ಮನಸ್ಥಿತಿಯಲ್ಲಿದ್ದಾರೆ. ಅವರಿಗೆ ನಾವು ಹೇಳೋದು ಆಗಲ್ಲ. ಸಂಸ್ಕಾರಬದ್ಧವಾಗಿ ಬದುಕು ಎಂದು ಹೇಳಿದ್ದೇ ತಪ್ಪಾಯ್ತು. ನಮ್ಮ ಮನೆಯಲ್ಲಿ ಇರುವುದು ಅವರಿಗೆ ಕಿರಿಕಿರಿ ಎಂದೆನಿಸಿ ಅವರಿಗೆ ಎಲ್ಲಿ ಸುಖ, ನೆಮ್ಮದಿ ಇದೆಯೋ ಅಲ್ಲಿಗೆ ಹೋಗಿ ಇದ್ದಾರಷ್ಟೇ.... ನಮಗೇ ಕಾನೂನಿನ ಮೇಲೆ ನಂಬಿಕೆ ಇದೆ, ಕೋರ್ಟ್‌ನಲ್ಲೇ ಇದಕ್ಕೆ ಉತ್ತರ ಕೊಡುತ್ತೇವೆ... ಎಂದು ಎಸ್. ನಾರಾಯಣ್ ಹೇಳಿದ್ದಾರೆ.

### ನಾಣಿ ನಂಬಿಕೆಗೆ ಅನರ್ಹ

ಸದ್ಯ, ಪೊಲೀಸರು ಎಸ್. ನಾರಾಯಣ್ ಕುಟುಂಬಕ್ಕೆ ಮೊದಲ ನೋಟೀಸ್ ಕೊಟ್ಟಿದ್ದಾರೆ. ಅವರು ಹೋಗಿ ಅಲ್ಲಿ ಅದೇನು ಸ್ಟೇಟ್‌ಮೆಂಟ್ ಕೊಟ್ಟುಬರ್ತಾರೋ ಗೊತ್ತಿಲ್ಲ. ಬಹುಷಃ ಮಾಧ್ಯಮಗಳ



ಮುಂದೆ ಬಡಬಡಿಸಿದ್ದನ್ನೇ ಅಲ್ಲೂ ಒದರುತ್ತಾರೆ ಬಿಡಿ. ಅದಿರಲಿ, ಎಸ್. ನಾರಾಯಣ್‌ಗೆ ಪೊಲೀಸ್ ಸ್ಟೇಷನ್ ಹೊಸದೇನಲ್ಲ. ಈ ಹಿಂದೆ ತಲಘಟ್ಟಪುರದ ಕಡೆ ಭೂ ವ್ಯಾಜ್ಯ ಮಾಡಿಕೊಂಡು ಕೋರ್ಟ್‌ಗೆ ಅಲೆದಿದ್ದಾರೆ. ಕೋತಿ ಬಂಡೆ ಹತ್ರ ಒಮ್ಮೆ ಡಕಾಯ್ತಿ ಆಯ್ತು ಅಂತ ಕಂಪ್ಲೇಂಟ್ ಕೊಟ್ಟಿದ್ದು, ಅದು ಫೇಕ್ ಅನ್ನೋದು ಗೊತ್ತಾಗಿ ಪೊಲೀಸರು ಉಗಿದಿದ್ರಂತೆ!

ನಾರಾಯಣ್ ತಮ್ಮ ಮಗಳನ್ನು ಕುಣಿಗಲ್ ಕಡೆಯ ಶ್ರೀಮಂತ ಬೆಟ್ಟೇಗೌಡರ ಮಗ ಡಾ. ಕುಮಾರ್‌ಗೆ ಕೊಟ್ಟು ಮದುವೆ ಮಾಡಿದ್ದಾರೆ. ಅಲ್ಲೂ ಏನೋ ಕಿರಿಕ್ ಆಗಿ ಮಗಳು ತವರುಮನೆ ಸೇರಿಕೊಂಡು 'ಕತೆ' ಬರೆಯುತ್ತಿದ್ದಾಳೆ ಅನ್ನೋ ಸುದ್ದಿ ಓಡಾಡುತ್ತಿದೆ!!

ಹಿರಿಯ ಮಗ ಪಂಕಜ್ ಸದ್ಯ ಸೇಫ್ ಆಗಿ ಸಂಸಾರ ನಡೆಸುತ್ತಿದ್ದಾರೆ. ಕಿರೀ ಮಗ ಪವನ್ ಪಾಪ, ಈ ಹುಡುಗಿ ಪವಿತ್ರಳನ್ನ ಲವ್ ಮ್ಯಾರೇಜ್ ಆಗಿದ್ದೆಯಡವಟ್ಟು ಆಗಿತ್ತು. ಅಷ್ಟು ಲವ್ ಸ್ಟೋರಿ ಸಿನಿಮಾ ಮಾಡಿರೋ ನಾಣಿ, ಮಗ ಸೊಸೆಯ ಪ್ರೇಮ ವಿವಾಹವನ್ನ ಮೊದಲಿಗೆ ಒಪ್ಪಿಕೊಂಡಿಲ್ಲ! ಮಗನಿಗೋಸ್ಕರ ಒಲ್ಲದ ಮದುವೆ ಮಾಡಿ, ಮನೆಯಲ್ಲಿ ಪ್ರತಿನಿತ್ಯ ಕಿರಿಕ್ ಮಾಡಿದ್ದಾರೆ. ಇದರಿಂದ ಪವನ್ ಪವಿತ್ರ ಬೇರೆ ಕಡೆ ಹೋಗಿ ಒಂದಷ್ಟು ತಿಂಗಳು ಸಂಸಾರ ನಡೆಸಿದ್ದಾರೆ. ಪವಿತ್ರಳೆ ದುಡಿದು ಗಂಡ ಮತ್ತು ಮಗುವನ್ನು ಸಾಕಿದ್ದಾಳೆ. ಪವನ್‌ಗೆ ಮುಂದೊಮ್ಮೆ ಇರಿಟೇಟ್ ಆಗಿರಬೇಕು, ಅಪ್ಪನ ಹುಡಿಕೊಂಡು ಹೋಗಿದ್ದಾನೆ! ಈಗ ಈ ರೀತಿ ಆಗಿದೆ...!! ಎಸ್. ನಾರಾಯಣ್‌ಗೆ ಕುಣಿಗಲ್, ಶಿವಗಂಗೆ ಕಡೆ ತೋಟ ವಿದೆ. ಸಿಟಿಯ ಅಲ್ಲಲ್ಲಿ ಒಳ್ಳೆ ಆಸ್ತಿ ಇದೆ! ಆದರೂ ಇವರಿಗೆ ಸೊಸೆಯಿಂದ ಹಣ ಪಡೆಯುವ ದರ್ದು ಏಕೆ ಬಂತೋ, ನಾರಾಯಣ... ನಾರಾಯಣ... ☯

# ಅಸ್ಸಾಂ ಮಹಿಳೆ ಜೊತೆ ಇನ್‌ಸ್ಟಾಗ್ರಾಂ ಪ್ರೇಮ ಬಳಸಿಕೊಂಡು ಬೀಸಾಡಿದ ಜಮೀರ್ ಅರೆಸ್ಟ್!

5 ☞

ಅದರಂತೆ ನಾನು ಕಳೆದ ಜುಲೈ 24ರಂದು ಅಸ್ಸಾಂನಲ್ಲಿರುವ ನನ್ನ ಗಂಡ ಹಾಗೂ ಮಗಳನ್ನು ತೊರೆದು ಬಂಗಾರಪೇಟೆಗೆ ಬಂದು ನನ್ನನ್ನು ಮದುವೆಯಾಗುವಂತೆ ಜಮೀರ್‌ಪಾಷನನ್ನು ಕೇಳಲಾಗಿ ಈಗ ಸದ್ಯಕ್ಕೆ ಮದುವೆಯಾಗುವುದಕ್ಕೆ ಸಾಧ್ಯವಿಲ್ಲ, ನನ್ನ ಜೊತೆ ಸ್ವಲ್ಪ ಕಾಲ ಇರು ನಂತರ ಮದುವೆ ಮಾಡಿಕೊಳ್ಳುವ ಬಗ್ಗೆ ಹೇಳುತ್ತೇನೆಂದು ಹೇಳಇದನು. ಇದರಿಂದ ಅವನ ಮೇಲೆ ಕೋಪ ಬಂದು ನಾನು ಕೊಟ್ಟಿರುವ ಹಣವನ್ನು ವಾಪಸು ಕೊಟ್ಟು ಬಿಟ್ಟರೆ ನಿನ್ನ ಸಹವಾಸವನ್ನು ಬಿಟ್ಟು ಊರಿಗೆ ಹೋಗುವುದಾಗಿ ಹೇಳಿದ್ದೇನು. ಸ್ವಲ್ಪ ದಿನ ನಮ್ಮ ಮನೆಯಲ್ಲಿಯೇ ಇರು ಒಂದು ಒಳ್ಳೆಯ ದಿನ ನೋಡಿ ಮದುವೆಯಾಗೋಣವೆಂದು ಹೇಳಿದನು. ಅದರಂತೆ ಅವನ ಮಾತಿಗೆ ಕಟ್ಟುಬಿದ್ದು ಅವನ ಮನೆಯಲ್ಲಿಯೇ ಇದ್ದೆನು. ಸ್ವಲ್ಪ ದಿನ ಚೆನ್ನಾಗಿ ನೋಡಿಕೊಂಡಿದ್ದ ಜಮೀರ್ ಪಾಷ ರಾತ್ರಿ ಹೊತ್ತು ದೈಹಿಕ ಸಂಪರ್ಕಕ್ಕಾಗಿ ಹಿಂಸೆ ನೀಡುತ್ತಾ ಬಲವಂತಪಡಿಸುತ್ತಿದ್ದನು. ಇವನಿಂದ ತಪ್ಪಿಸಿಕೊಂಡು ಊರಿಗೆ ಹೋಗೋಣವೆಂದರೆ ನನ್ನನ್ನು ರೂಂನಲ್ಲಿ ಕೂಡಿ ಹಾಕಿ ಅವರ ತಾಯಿಯನ್ನು ಕಾವಲಿಟ್ಟಿದ್ದನು. ರಾತ್ರಿ ಹೊತ್ತು ಜಮೀರ್‌ಪಾಷ ಬೇರೆ ಯುವತಿಯೊಂದಿಗೆ ಫೋನ್‌ನಲ್ಲಿ ಮಾತನಾಡುವುದು ಮತ್ತು ಮೆಸೇಜ್‌ಗಳನ್ನು ಕಳುಹಿಸುತ್ತಿದ್ದನು. ಒಂದು ದಿನ ಅವನು ಮಲಗಿರಬೇಕಾದರೆ ಮೊಬೈಲ್ ತೆಗೆದುಕೊಂಡು ನೋಡಿದಾಗ ಯುವತಿಯೊಂದಿಗಿನ ಫೋಟೋ ಮತ್ತು ವಿಡಿಯೋ ಇದ್ದು ಇದರ ಬಗ್ಗೆ ಜಮೀರ್‌ಪಾಷನ ಬಳಿ ಕೇಳಳಾಗಿ ಇದು ನನ್ನ ಸ್ವಂತ ವಿಚಾರ. ಇದರಲ್ಲಿ ನೀನು ತಲೆ ಹಾಕಬಾರದು. ನನ್ನ ಬಗ್ಗೆ ಪತ್ತೆದಾರಿ ಕೆಲಸ ಮಾಡುತ್ತೀಯ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿದನಲ್ಲದೆ ನನ್ನ ಮೊಬೈಲ್ ಫೋನನ್ನು ಕಿತ್ತುಕೊಂಡು ನಿನ್ನ ವೈಯಕ್ತಿಕ ವಿಡಿಯೋ ಮತ್ತು ಫೋಟೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದಾಗಿ ಬ್ಲಾಕ್ ಮೇಲ್ ಮಾಡುತ್ತಾ ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ನೀಡುತ್ತಿದ್ದನು. ಕಳೆದ 37 ದಿನಗಳಿಂದ ಅವನು ನೀಡುತ್ತಿದ್ದ ಹಿಂಸೆ ಮತ್ತು ನೋವನ್ನು ತಡೆಯಲಾರದೆ ಅವರಿಂದ ತಪ್ಪಿಸಿಕೊಂಡು ಬಂದಿರುವುದಾಗಿ ಹೇಳಿದಳು.

ತಕ್ಷಣ ಕಾರ್ಯಪ್ರವೃತ್ತರಾದ ಪಿಐ ದಯಾನಂದ ರವರು ಮುಂದಿನ ತನಿಖೆಗಾಗಿ ಮಹಿಳೆ ನೀಡಿದ ದೂರಿನ ವರದಿಯನ್ನು ಹಿರಿಯ ಅಧಿಕಾರಿಗಳಿಗೆ ಸಲ್ಲಿಸಿದ್ದು, ಎಸ್ಪಿ ಶಿವಾಂಶು ರಜಪುತ್, ಡಿವೈಎಸ್ಪಿ ಎಸ್. ಪಾಂಡುರಂಗರವರ ಮಾರ್ಗದರ್ಶನದಲ್ಲಿ ತನಿಖೆಗೆ ಆದೇಶ ನೀಡಿದ್ದು ಅದರಂತೆ ಮಹಿಳೆ ನೀಡಿದ ದೂರಿನ ಮೇರೆಗೆ ಅತ್ಯಾಚಾರ, ವಂಚನೆ, ಹಲ್ಲೆ, ಪ್ರಾಣ ಬೆದರಿಕೆ, ಬ್ಲಾಕ್‌ಮೇಲ್ ಮಾಡಿರುವ ಸಂಬಂಧ 376, 324, 506ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪಟ್ಟಣದ ನ್ಯೂ ಟೌನ್ ಬಡಾವಣೆಯಲ್ಲಿ ವಾಸವಿರುವ ಜಮೀರ್‌ಪಾಷ ಮತ್ತು ಅವನ ತಾಯಿಯನ್ನು ವಶಕ್ಕೆ ಪಡೆದು ತನಿಖೆ ಕೈಗೊಂಡಿದ್ದು, ಸೋನಿಯಾ ಶರ್ಮರವರನ್ನು ಕೆಜಿಎಫ್‌ನ ನಿರಾಶ್ರಿತರ ಕೇಂದ್ರದಲ್ಲಿ ವಾಸಕ್ಕೆ ವ್ಯವಸ್ಥೆ ಮಾಡಿರುತ್ತಾರೆ. ಅಸ್ಸಾಂ ರಾಜ್ಯದ ಮಹಿಳೆಗೆ ಮದುವೆಯಾಗುವುದಾಗಿ ಹಾಗೂ ಲಕ್ಷಾಂತರ ರೂ.ಗಳನ್ನು ತೆಗೆದುಕೊಂಡು ವಂಚಿಸಿರುವ ಜಮೀರ್‌ಪಾಷನ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುವ ವಿಚಾರ ತಿಳಿಯುತ್ತಿದ್ದಂತೆ ಯುವಕನ ಕಡೆಯ ಮುಖಂಡರು ರಾತ್ರಿಯೇ ಪೊಲೀಸ್ ಠಾಣೆಗೆ ಬಂದು ರಾಜಿ ಸಂಧಾನ ಮಾಡಿಸಿ ಮಹಿಳೆಯಿಂದ ತೆಗೆದುಕೊಂಡಿದ್ದ ಹಣವನ್ನು ಜಮೀರ್‌ಪಾಷನಿಂದ ಕೊಡಿಸಿ ಅಸ್ಸಾಂಗೆ ವಾಪಸ್ಸು ಕಳುಹಿಸುವ ಭರವಸೆ ನೀಡಿರುವುದಲ್ಲದೆ ಪ್ರಕರಣವನ್ನು ಮುಚ್ಚಿ ಹಾಕುವ ಹುನ್ನಾರವು ನಡೆದಿದ್ದು ಆದರೆ ಇದಕ್ಕೆ ಪೊಲೀಸರು ಅವಕಾಶ ಕೊಡದೆ ಸಂತ್ರಸ್ತೆ ಮಹಿಳೆಗೆ ನ್ಯಾಯ ಕೊಡಿಸಲು ಮುಂದಾಗಿದ್ದಾರೆಂದು ತಿಳಿದು ಬಂದಿದೆ. ☯

# ಗಂಡನ ಕೊಂದು ಕಥೆ ಕಟ್ಟಿದ ಸುಪ್ನಾತಿ!

**ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಚಿಕ್ಕಹೆಜ್ಜೂರು ಗ್ರಾಮದಲ್ಲಿ ನಡೆದ ಘಟನೆಯೊಂದು ಬೆಚ್ಚಿಬೀಳಿಸಿದೆ. ಹುಲಿದಾಳಿಯಿಂದ ಮೃತಪಟ್ಟರೆ ಸರ್ಕಾರದಿಂದ 15ಲಕ್ಷ ರೂ. ಪರಿಹಾರ ಸಿಗುತ್ತದೆ ಎಂಬ ಹಣದಾಸೆಗಾಗಿ ಮಹಿಳೆಯೊಬ್ಬಳು ತನ್ನ ಗಂಡನನ್ನು ವಿಷಹಾಕಿ ಸಾಯಿಸಿ ಶವವನ್ನು ತಿಪ್ಪೆಗುಂಡಿಯಲ್ಲಿ ಮುಚ್ಚಿಟ್ಟು ಹುಲಿ ಹೊತ್ತೊಯ್ದಿದೆ ಎಂದು ಕಥೆ ಕಟ್ಟಿ ಅರಣ್ಯ ಇಲಾಖೆ ಮತ್ತು ಪೊಲೀಸರನ್ನು ಊರು ತುಂಬಾ ಅಲೆದಾಡಿಸಿದ್ದಾಳೆ. ಸಂಶಯಗೊಂಡ ಪೊಲೀಸರು ತನಿಖೆ ನಡೆಸಿದಾಗ ಹಂತಕಿಯ ನೈಜ ಬಣ್ಣ ಬಯಲಾಗಿದೆ.**

**ಮೈಸೂರು**
ಬಿ.ಎಂ. ಲವಕುಮಾರ್


ಕೊಲೆಯಾದ ವೆಂಕಟಸ್ವಾಮಿ

ಎಲ್ಲದಕ್ಕೂ ಹಣವೇ ಮುಖ್ಯವಾಗಿರುವುದರಿಂದ ಹಣವನ್ನು ಹೇಗಾದರೂ ಮಾಡಿ ಪಡೆಯುವ ಸಲುವಾಗಿ ಜನ ವಂಚನೆ, ಮೋಸ, ದರೋಡೆ, ಕೊಲೆ ಹೀಗೆ ಹತ್ತು ಹಲವು ಅಪರಾಧ ಮಾಡಲು ಮುಂದಾಗುತ್ತಾರೆ. ಆದರೆ ಇದೆಲ್ಲದರ ನಡುವೆ ಸರ್ಕಾರದಿಂದ ಪರಿಹಾರದ ಹಣ ಪಡೆದು ಸುಖವಾಗಿ ಇರಬಹುದು ಎಂಬ ಕೆಟ್ಟ ಆಲೋಚನೆ ಮಾಡಿದ ಮಹಿಳೆ ಅದಕ್ಕಾಗಿ ತನ್ನ ಗಂಡನನ್ನೇ ಬಲಿ ಕೊಟ್ಟ ಪ್ರಕರಣ ಬಹುಶಃ ಇದೇ ಮೊದಲೇನೋ?

ಬೇರೆ, ಬೇರೆ ಕಾರಣಗಳಿಗೆ ಗಂಡನನ್ನು ಹೆಂಡತಿಯೇ ಕೊಲೆ ಮಾಡಿದ ಪ್ರಕರಣಗಳು ಬೇಕಾದಷ್ಟು ನಡೆದಿವೆ. ಆದರೆ ಗಂಡನನ್ನು ಕೊಂದು ಹುಲಿ ದಾಳಿ ಮಾಡಿ ಸಾಯಿಸಿದೆ ಎಂದು ಕಥೆ ಕಟ್ಟಿದರೆ 15 ಲಕ್ಷ ಸಿಗುತ್ತದೆ. ಅದರಿಂದ ಎಂಜಾಯ್ ಮಾಡಿಕೊಂಡಿರಬಹುದು ಎಂಬ ದುರಾಲೋಚನೆಯಿಂದ ಪೊಲೀಸ್ ಮತ್ತು ಅರಣ್ಯ ಇಲಾಖೆಗೆ ಮಂಕುಬೂದಿ ಎರಚಲು ಮುಂದಾದ ಇಂತಹ ಘಟನೆ ಬೇರೆಲ್ಲೂ ನಡೆದಿಲ್ಲವೇನೋ?

ಇಷ್ಟಕ್ಕೂ ಗಂಡನಕೊಂದು ಹುಲಿ ಹೊತ್ತೊಯ್ದು ಕಥೆ ಕಟ್ಟಿದ ಹಂತಕಿ ಯಾರಪ್ಪಾ? ಎಂಬ ಕುತೂಹಲ ಕಾಡದಿರದು. ಹೀಗಾಗಿ ಆಕೆಯ ಪರಿಚಯ ಮಾಡಿ ಆ ನಂತರ ಘಟನೆ ಬಗ್ಗೆ ವಿವರಿಸಿದರೆ ಓದುಗರಿಗೆ ಸುಲಭವಾಗಿ ಅರ್ಥವಾಗಿ ಬಿಡುತ್ತದೆ. ಈಕೆಯ ಹೆಸರು ಸಲ್ಲಾಪುರಿ ವಯಸ್ಸು ನಲುವತ್ತು. ಗಂಡನ ಹೆಸರು ವೆಂಕಟಸ್ವಾಮಿ ವಯಸ್ಸು ನಲ್ವತ್ತೈದು. ಮೂಲತಃ ಇವರು ಮಂಡ್ಯ ಜಿಲ್ಲೆಯ ಹಲಗೂರು ಹೋಬಳಿಯ ಕಂದಪುರ ಗ್ರಾಮದವರು. ಅಲ್ಲಿಂದ ಕಳೆದ ಹನ್ನೊಂದು ತಿಂಗಳ ಹಿಂದೆ ಹೊಟ್ಟೆಪಾಡಿಗಾಗಿ ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಚಿಕ್ಕ ಹೆಜ್ಜೂರು ಗ್ರಾಮಕ್ಕೆ ಬಂದಿದ್ದರು.


ಹುಲಿಗಾಗಿ ಹುಡುಕಾಟ

ಬೆಂಗಳೂರಿನಲ್ಲಿ ಸಿವಿಲ್ ಇಂಜಿನಿಯರ್ ಆಗಿರುವ ರವಿಕುಮಾರ್ ಮತ್ತು ಅರುಣ್ ಕುಮಾರ್ ಎಂಬುವರಿಗೆ ಚಿಕ್ಕಹೆಜ್ಜೂರಿನಲ್ಲಿ 4.10 ಎಕರೆ ಅಡಿಕೆ ತೋಟವಿದ್ದು, ಅದರ ನಿರ್ವಹಣೆ ಕೆಲಸವನ್ನು ಈ ಮೊದಲು ಬಿಡದಿಯಲ್ಲಿ ಕೆಲಸ ಮಾಡಿಕೊಂಡಿದ್ದ ವೆಂಕಟಸ್ವಾಮಿ ಮತ್ತು ಸಲ್ಲಾಪುರಿ ದಂಪತಿಗೆ ವಹಿಸಿದ್ದರು. ಅವರಿಗೆ ಮಾಸಿಕ 18ಸಾವಿರ ವೇತನವನ್ನು ನಿಗದಿ ಪಡಿಸಿದ್ದರು. ತೋಟದಲ್ಲಿ ಎರಡು ಮನೆಗಳಿದ್ದವು. ಈ ಪೈಕಿ ಒಂದನ್ನು ಮಾಲೀಕರು ತಮ್ಮ ಬಳಕೆಗೆ ಇಟ್ಟುಕೊಂಡಿದ್ದರೆ ಮತ್ತೊಂದು ಮನೆಯನ್ನು ವೆಂಟಸ್ವಾಮಿ, ಸಲ್ಲಾಪುರಿ ದಂಪತಿಗೆ ಬಿಟ್ಟುಕೊಟ್ಟಿದ್ದರು. ಈ ಮನೆಯಲ್ಲಿದ್ದುಕೊಂಡು ತೋಟದ ಕೆಲಸ ಮಾಡುತ್ತಿದ್ದರು.

ಕೆಲವು ವರ್ಷಗಳ ಹಿಂದೆಯೇ ಮದುವೆಯಾಗಿದ್ದ ದಂಪತಿಗೆ ಇಬ್ಬರು ಮಕ್ಕಳಿದ್ದು ಅವರಿಗೆ ಶಿಕ್ಷಣ ಕೊಡಿಸುವ ಸಲುವಾಗಿ ಬಿಡದಿಯಲ್ಲಿ ಸಂಬಂಧಿಕರ ಮನೆಯಲ್ಲಿ ಬಿಟ್ಟು ಓದಿಸುತ್ತಿದ್ದರು. ಇವರು ಚಿಕ್ಕಹೆಜ್ಜೂರಿನ ಅಡಿಕೆ ತೋಟದಲ್ಲಿ ಕೆಲಸ ಮಾಡಿಕೊಂಡು ಜೀವನ ಮಾಡಿಕೊಂಡು ಹೋಗುತ್ತಿದ್ದರು. ಆದರೆ ಸಲ್ಲಾಪುರಿಗೆ ಮಾತ್ರ ತಮ್ಮ ಬದುಕಿನ ಬಗ್ಗೆ ಬೇಸರವಿತ್ತು. ತಾನು ಜಾಲಿಯಾಗಿ ಜೀವನ ನಡೆಸಬೇಕೆಂದು ಬಯಸಿದ್ದಳು. ಆದರೆ ಹಣ ಬರುವ ದಾರಿ ಮಾತ್ರ ಇರಲಿಲ್ಲ.


ಎಸ್ಪಿ ವಿಷ್ಣುವರ್ಧನ

ಆಕೆಯ ಹುಚ್ಚು ಆಸೆಯ ವಿಚಾರದಲ್ಲಿ ಗಂಡ ಹೆಂಡತಿ ನಡುವೆ ಜಗಳಗಳು ನಡೆಯುತ್ತಿದ್ದವು. ಆದರೆ ಹಣವಿದ್ದವರು ಓಡಾಡುವುದನ್ನು ನೋಡಿದ ಆಕೆಗೆ ಏನು ಮಾಡಿದರೆ ತಾನು ಹಣ ಪಡೆಯಬಹುದು ಎಂದು ಯೋಚಿಸುತ್ತಿದ್ದಳು. ಈ ನಡುವೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಹುಲಿ, ಆನೆ ದಾಳಿಯಿಂದ ಮೃತಪಟ್ಟವರಿಗೆ ಸರ್ಕಾರ ನೀಡುವ ಪರಿಹಾರದ ಬಗ್ಗೆ ಅರಿತಿದ್ದ ಆಕೆಗೆ ಗಂಡ ವೆಂಕಟಸ್ವಾಮಿ ಜತೆ ಇದ್ದಷ್ಟು ದಿನ ಯಾರದ್ದೋ ತೋಟದಲ್ಲಿ ಕೆಲಸ ಮಾಡಿಕೊಂಡು ಹೋಗುವುದು ನಿಲ್ಲುವುದಿಲ್ಲ, ನಾನು ಶ್ರೀಮಂತಳಾಗುವುದಿಲ್ಲ ಎಂಬುದು ಅವಳಿಗೆ ಖಾತ್ರಿಯಾಗಿತ್ತು.

ಈ ನಡುವೆ ಗಂಡ ಹೆಂಡತಿ ನಡುವೆ ಜಗಳಗಳು ತಾರಕಕ್ಕೇರಿದ್ದರಿಂದ ಅವರ ದಾಂಪತ್ಯದಲ್ಲಿ ಬಿರುಕು ಕಾಣಿಸಿಕೊಳ್ಳಲಾರಂಭಿಸಿತು. ಸಲ್ಲಾಪುರಿಗೆ ಗಂಡ ವೆಂಕಟಸ್ವಾಮಿ ಮೇಲೆ ಪ್ರೀತಿಗಿಂತ ದ್ವೇಷವೇ ಹೆಚ್ಚಾಯಿತು. ಹೀಗಾಗಿ ಆತ ಇರೋದಕ್ಕಿಂತ ಇಲ್ಲದಿದ್ದರೆ ನಾನು ಮಕ್ಕಳು ನೆಮ್ಮದಿಯಾಗಿ ಬದುಕ ಬಹುದೆಂಬ ಕೆಟ್ಟ ಆಲೋಚನೆಯೊಂದು ಅವಳ ಮನಸ್ಸಲ್ಲಿ ಗಿರಕಿ ಹೊಡೆಯಲಾರಂಭಿಸಿತು. ಹೀಗಿರುವಾಗಲೇ ಅವಳ ಮನಸ್ಸಿನಲ್ಲೊಂದು ಯೋಚನೆ ಬಂದಿತಲ್ಲದೆ, ಅದು ಅವಳನ್ನು ಹಂತಕಿಯಾಗುವ ಹಂತಕ್ಕೆ ಕೊಂಡೊಯ್ದಿತು.

ಆ ಕ್ಷಣಕ್ಕೆ ಅವಳಿಗೆ ನಾನು ಮಾಡಲು ಹೊರಟಿರುವುದು ಘೋರ ಅಪರಾಧ ಎಂದೆನಿಸಲೇ ಇಲ್ಲ, ಬದಲಿಗೆ ಅದನ್ನು ಹೇಗೆ ಮಾಡುವುದು ಎಂಬುದರ ಬಗ್ಗೆ ಐಡಿಯಾಗಳನ್ನು ಹುಡುಕಲಾರಂಭಿಸಿದಳು. ಈ ನಡುವೆ ಆಕೆ ವನ್ಯಪ್ರಾಣಿಗಳ ದಾಳಿಯಿಂದ ಸತ್ತರೆ ಸರ್ಕಾರದಿಂದ ಪರಿಹಾರ ಎಷ್ಟು ಸಿಗುತ್ತದೆ ಎಂಬುದನ್ನು ಹಲವರಿಂದ ಕೇಳಿ ತಿಳಿದುಕೊಂಡಿದ್ದಳಂತೆ. 15 ಲಕ್ಷ ಸಿಗುತ್ತದೆ ಎಂಬುದು ಗೊತ್ತಾಗುತ್ತಿದ್ದಂತೆಯೇ ಗಂಡ ವೆಂಕಟಸ್ವಾಮಿಗೆ ಸ್ಕೆಚ್ ಹಾಕಿದ್ದಳು. ಇದಕ್ಕಾಗಿ ಮುಹೂರ್ತ ಫಿಕ್ಸ್ ಮಾಡಿದ್ದಳು.

ಎಂದಿನಂತೆ ತೋಟದಲ್ಲಿ ಕೆಲಸ ಮುಗಿಸಿ ಕೆಲಸ ಮಾಡಿದ ಸುಸ್ತು ಹೋಗಲಾಡಿಸಲು ಎಣ್ಣೆ ಹೊಡೆಯುವುದು ವೆಂಕಟಸ್ವಾಮಿಯ ಅಭ್ಯಾಸವಾಗಿತ್ತು. ಮನೆಗೆ ಹೋದರೆ ಹೆಂಡತಿಯೊಂದಿಗೆ ಕಿರಿಕ್ ಮಾಡಿಕೊಳ್ಳುವುದು ಮಾಮೂಲಿಯಾಗಿತ್ತು. ಆದರೆ ತನ್ನ ಮೇಲೆ ಹೆಂಡತಿ ಕಣ್ಣಿಟ್ಟಿದ್ದಾಳೆ ಎಂಬ ಚಿಕ್ಕ ಅನುಮಾನವೂ ಬಂದಿರಲಿಲ್ಲ. ಅವತ್ತು ಸೆಪ್ಟಂಬರ್ 8, ಸೋಮವಾರ ರಾತ್ರಿ ಮನೆಗೆ ಎಂದಿನಂತೆ ಎಣ್ಣೆ ಬಿಟ್ಟುಕೊಂಡು ವೆಂಕಟಸ್ವಾಮಿ ಬಂದಿದ್ದನು. ಅವತ್ತು ರಾತ್ರಿ ಅಡುಗೆ ಮಾಡಿದ ಸಲ್ಲಾಪುರಿ ಗಂಡನಿಗೆ ಕೊಡುವ ಊಟಕ್ಕೆ ವಿಷ ಬೆರೆಸಿದಳು. ಆದರೆ ಹೆಂಡತಿ ತನಗೆ ವಿಷ ಬೆರೆಸಿಕೊಟ್ಟಿದ್ದಾಳೆ ಚಿಕ್ಕ ಅನುಮಾನವೂ ಆತನಿಗೆ ಇರಲಿಲ್ಲ, ಹೀಗಾಗಿ ಹೊಟ್ಟೆತುಂಬ ಉಂಡಿದ್ದನು.

ವಿಷ ಹೊಟ್ಟೆಗೆ ಹೋಗುತ್ತಿದ್ದಂತೆಯೇ ಆತನಿಗೆ ನರಕ ಕಂಡಿತ್ತು. ಆತ ಅಸ್ವಸ್ಥನಾಗಿ ಪ್ರಜ್ಞೆ ತಪ್ಪುತ್ತಿದ್ದಂತೆಯೇ ರೌದ್ರಾವತಾರ ತಾಳಿದ ಪತ್ನಿ ಸಲ್ಲಾಪುರಿ ಆತನ ಖಾಸಗಿ ಅಂಗಕ್ಕೆ ಒದ್ದಿದಲ್ಲದೆ, ದಿಂಬನ್ನು ಮೂಗಿಗೆ ಒತ್ತಿ ಹಿಡಿದಿದ್ದಾಳೆ. ಹೀಗೆ ಮಾಡಿದ್ದರಿಂದ ಆತ ಕಮಕ್ ಕಿಮಕ್ ಎನ್ನದೆ ಪ್ರಾಣ ಬಿಟ್ಟಿದ್ದಾನೆ. ಆ ನಂತರ ರಾತ್ರಿಯೇ ಮನೆಯಿಂದ ಆತನನ್ನು ಕಷ್ಟಪಟ್ಟು ಎಳೆದುಕೊಂಡು ಹೊರಗೆ ಹೋದ ಆಕೆ ಮನೆಗೆ ಸಮೀಪದಲ್ಲಿದ್ದ ತಿಪ್ಪೆಗುಂಡಿಯನ್ನು ಅಗೆದು ಅಲ್ಲಿ ಹಳ್ಳತೋಡಿ ಶವವನ್ನು ಹಾಕಿ ಮುಚ್ಚಿ ಅದರ ಮೇಲೆ ಎಲೆಗಳು ಮತ್ತು ಜೋಳದ ಹುಲ್ಲು ದಂಟನ್ನು ಹರಡಿ ಯಾವುದೇ ಅನುಮಾನ ಬಾರದಂತೆ ಮಾಡಿದ್ದಾಳೆ.

ಮಾರನೆಯ ದಿನ ಸೆಪ್ಟೆಂಬರ್ 9 ಮಂಗಳವಾರ ನನ್ನ ಗಂಡನನ್ನು ಹುಲಿ ಎಳೆದೊಯ್ದಿದೆ ಎಂಬ ಕಥೆ ಕಟ್ಟಿ ಜನರ ಮುಂದೆ ಕಣ್ಣೀರಿಟ್ಟಿದ್ದಾಳೆ. ವಿಷಯ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ ಮತ್ತು ಅರಣ್ಯ ಇಲಾಖೆಗೂ ತಲುಪಿದೆ. ಸುತ್ತಮುತ್ತಲಿನ ಜನರೂ ಓಡಿ ಬಂದಿದ್ದಾರೆ. ಏನಾಯಿತು ಎಂದು ಕೇಳಿದಾಗ ಮೊದಲೇ ತಯಾರು ಮಾಡಿಕೊಂಡಿದ್ದ ಕಥೆಯನ್ನು ಅವರ ಮುಂದೆ ಬಿಚ್ಚಿಟ್ಟಿದ್ದಾಳೆ.


ಆರೋಪಿ ಸಲ್ಲಾಪುರಿ

ಸೋಮವಾರ ರಾತ್ರಿ ಹುಲಿ ಘರ್ಜಿಸಿದ ಸದ್ದಾಯಿತು. ಮನೆಯೊಳಗಿದ್ದ ಗಂಡ ವೆಂಕಟಸ್ವಾಮಿ ಮನೆಯ ಬಾಗಿಲು ತೆಗೆದು ಹೊರಗೆ ಹೋಗಿ ಏನಾಗಿದೆ ಎಂದು ನೋಡಿಕೊಂಡು ಬರುತ್ತೇನೆ. ನೀನು ಮನೆಯೊಳಗಿರು ಎಂದು ಹೇಳಿ ಹೊರಗೆ ಹೋಗಿದ್ದು ಆ ನಂತರ ಮರಳಿ ಮನೆಗೆ ಬರಲೇ ಇಲ್ಲ. ಆತನನ್ನು ಹುಲಿಯೇ ಹೊತ್ತುಕೊಂಡು ಹೋಗಿದೆ ಎಂದು ಗೋಳಾಡಿದ್ದಾಳೆ. ಊರಿನವರು, ಪೊಲೀಸರು, ಅರಣ್ಯ ಇಲಾಖೆಯವರು ಆಕೆಗೆ ಸಮಾಧಾನ ಮಾಡಿ ವೆಂಕಟಸ್ವಾಮಿ ಶವ ಮತ್ತು ಹುಲಿಗಾಗಿ ಹುಡುಕಾಟ ಆರಂಭಿಸಿದ್ದರು.

ಅರಣ್ಯ ಇಲಾಖೆ ಜೊತೆಗೆ ಗ್ರಾಮಸ್ಥರು ಸೇರಿ ಸುಮಾರು 60 ಮಂದಿ ತೋಟ, ಹೊಲ ಎಂಬಂತೆ ಎಲ್ಲೆಡೆ ಜಾಲಾಡಿದ್ದಾರೆ. ಆದರೆ ಎಲ್ಲಿಯೂ ಹುಲಿಯ ಹೆಜ್ಜೆಯಾಗಲೀ, ವೆಂಕಟಸ್ವಾಮಿಯನ್ನು ಹುಲಿಯೇ ಹೊತ್ತೊಯ್ದಿದೆ ಎಂಬುದಕ್ಕೆ ಎಳೆದೊಯ್ದ ಗುರುತು, ರಕ್ತದ ಕಲೆ ಹೀಗೆ ಯಾವುದೇ ಕುರುಹು ಪತ್ತೆಯಾಗಲಿಲ್ಲ. ಇದೇ ವೇಳೆಗೆ ಸಲ್ಲಾಪುರಿ ಇನ್ನಷ್ಟು ನಂಬಿಸುವ ಸಲುವಾಗಿ ಗೋಳಾಡುತ್ತಾ ತಮ್ಮ ತೋಟಕ್ಕೆ ಆನೆ




☞12

4 ☜

ರೀತಿಯಲ್ಲಿ ಅಕ್ರಮವಾಗಿ ಯಾವ ಯಾವ ನಿಷೇಧಿತ ವಸ್ತುಗಳು ಸರಬರಾಜಾಗುತ್ತಿರಬಹುದೆಂಬುದಕ್ಕೆ ಪುರಾವೆ ಸಿಕ್ಕಂತಾಗಿದೆ. ಈ ಘಟನೆಯಿಂದ ಸಾಬೀತಾಗುತ್ತಿರುವುದೇನೆಂದರೇ ಎನ್‌ಐಎ ದಾಳಿಯಲ್ಲಿ ಪತ್ತೆಯಾದಂತೆ ಇಲ್ಲಿನ ಪೊಲೀಸ್ ಸಿಬ್ಬಂದಿ, ಜೈಲ್ ವಾರ್ಡರ್, ಡಾಕ್ಟರ್ ಗಳೇ



ಚೀಫ್ ಸೂಪರಿಂಟೆಂಡೆಂಟ್ ಸುರೇಶ್



ಜೈಲರ್ ಕರ್ಣ ಭಜಂತ್ರಿ

ಇಲ್ಲಿನ ಮುಖ್ಯ ಅಧೀಕ್ಷರ ಜೊತೆಗೆ ಶಾಮೀಲಾಗಿ, ಕೊಡಬೇಕಾದವರಿಗೆ 'ಷೇರು' ಪರ್ಸೆಂಟೇಜ್ ತಲುಪಿಸುತ್ತಲೇ ತಿಂಗಳಿಗೆ ಈ ಡ್ರಗ್ಸ್ ಧಂಧೆಯಿಂದಲೆ ಕೋಟಿಗಳ ಲೆಕ್ಕದಲ್ಲಿ ಅಮೌಂಟ್ ಜೇಬಿಗಿಳಿಸುತ್ತಾರೆಂಬ ವದಂತಿಗಳಿವೆ. ಇದಕ್ಕೆಲ್ಲಾ ಪರ್ಮಿಷನ್ ಕೊಟ್ಟುಕೊಂಡು ಕಂಡೂ ಕಾಣದಂತಿರುವ ಇಡೀ ಜೈಲಿನ ಉಸ್ತುವಾರಿಯ ಹೊರೆ ಹೊತ್ತುಕೊಂಡು ಜೈಲು ಮೇಲ್ವಿಚಾರಕರಾಗಿರುವ ಮುಖ್ಯ ಅಧೀಕ್ಷಕರಾದ ಸುರೇಶ್, ಸಹಾಯಕ ಅಧೀಕ್ಷಕರಾದ ಕರ್ಣ, ಅಶೋಕ್ ಭಜಂತ್ರಿಗೆ ಅದೆಷ್ಟು ಕಮಿಷನ್ ಸಿಗುತ್ತಿರಬಹುದೆಂಬುದನ್ನು ಜೈಲ್ ಚೀಫ್ ದಯಾನಂದ ಸಾಹೇಬ್ರೆ ಬಾಯಿ ಬಿಡಿಸಬೇಕಿದೆ!



ಡ್ರಗ್ಸ್ ಸಪ್ಲೈಯರ್ ಪೊಲೀಸ್ ಕಲ್ಲಪ್ಪ

ನೆನಪಿಡಿ, ಪರಪ್ಪನ ಅಗ್ರಹಾರ ಜೈಲಿನಲ್ಲಿ ಮೊಬೈಲ್ ಸಪ್ಲೈ ಆಗುತ್ತಿರುವುದು ಈ ಹಿಂದೆ ನಡೆದಿದ್ದ ಸಿಸಿಬಿ ಹಾಗೂ ಎನ್‌ಐಎ ದಾಳಿಯಲ್ಲೇ ಸಾಬೀತಾಗಿದೆ! ಇತ್ತೀಚೆಗೆ ಒಳಗಿರುವ ಖೈದಿಗಳು ಒಳಗಿನಿಂದಲೇ ಮೊಬೈಲ್ ಬಳಸಿ ಹೊರಗಿರುವವರನ್ನು ಬೆದರಿಸಿ ಫೋನ್‌ಪೇ ಮಾಡಿಸಿಕೊಂಡು ಕೋಟ್ಯಾಂತರ ರೂಪಾಯಿ ಹಪ್ತಾ ವಸೂಲಿ ಮಾಡಿದ್ದ ಘಟನೆ ಬೆಳಕಿಗೆ ಬಂದು ಸಿಸಿಬಿಯಿಂದಲೆ ಜೈಲಿನೊಳಗಿದ್ದವರ ಮೇಲೆ ಎಫ್‌ಐಆರ್ ದಾಖಲಾಗಿ ತನಿಖೆ ನಡೆದಿತ್ತು. ಈ ಧಂಧೆಯಲ್ಲಿ ಸಜಾ ಬಂದಿಗಳು, ಜೈಲಿನ ಅಧಿಕಾರಿಗಳು ಕಜೋಡಿಸಿರುವುದು ತನಿಖೆಯಲ್ಲಿ ಬಯಲಾಗಿತ್ತು.

ಕಳೆದ ವಾರ ಸೆಂಟ್ರಲ್ ಜೈಲಿನಲ್ಲೆ ಪೊಲೀಸ್ ಕೆಲಸ ಮಾಡುತ್ತಿದ್ದ ಹುಡುಗಿಯೊಬ್ಬಳು ಗಾಂಜಾ ತಂದು ಒಳಗಡೆ ಮಾರಲು ಹೋಗಿ ಸಿಕ್ಕಿಬಿದ್ದು ಅವಳೂ ಜೈಲು ಪಾಲಾದಳೆಂಬ ಸುದ್ದಿ ಹರಿದಾಡುತ್ತಿವೆ! ಸೆಂಟ್ರಲ್ ಜೈಲಿನಲ್ಲೀಗ ಹೈಪ್ರೊಫಲ್ ಖೈದಿಗಳಾದ ನಟ ದರ್ಶನ್, ಮಾಜಿ ಎಂಪಿ ಪ್ರಜ್ವಲ್ ರೇವಣ್ಣ, ಶಾಸಕ ವಿನಯ್ ಕುಲಕರ್ಣಿ, ಡಾನ್ ರವಿ ಪೂಜಾರಿಯಂತವರೇ ಜಮಾಯಿಸಿರುವುದರಿಂದ ಸುಗ್ಗಿ ಹಬ್ಬದಂತೆ ಸಂಭ್ರಮ ಪಡುತ್ತಿರುವ ಜೈಲಿನ ಕಡು ಭ್ರಷ್ಟ ಅಧಿಕಾರಿಗಳು ಲಕ್ಷಾಂತರ ರೂಪಾಯಿ ಕಮಾಯಿ ಮಾಡಲು ನಾನಾ ತರದ ಮಾಸ್ಟರ್ ಪ್ಲಾನ್ ರೂಪಿಸಿಕೊಂಡು ದುಡ್ಡಿಗಾಗಿ ಇಡೀ ಜೈಲನ್ನೇ ಮೂರು ವಿಭಾಗ ಮಾಡಿಕೊಂಡು ಗೆಬರುತ್ತಿದ್ದಾರೆ.

ಮುಖ್ಯ ಅಧೀಕ್ಷಕ ಸುರೇಶ್ ಸಹಾಯಕ ಅಧೀಕ್ಷಕ ಕರ್ಣ, ಮತ್ತೊಬ್ಬ ಸಹಾಯಕ ಅಧೀಕ್ಷಕ ಅಶೋಕ್ ಭಜಂತ್ರಿ ಒಬ್ಬರ ಮೇಲೊಬ್ಬರು ಹದ್ದಿನ ಕಣ್ಣಿಟ್ಟು ಹಿಡನ್ ಕ್ಯಾಮರಾಗಳ ಮೂಲಕ ಒಬ್ಬರನ್ನೊಬ್ಬರು ಸ್ಟಿಂಗ್ ಆಪರೇಷನ್ ಮಾಡಿಕೊಳ್ಳುತ್ತಾರಂತೆ! ಒಳಗಡೆ ನಡೆವ ಅಕ್ರಮ ವೆಲ್ಲವನ್ನೂ ವೀಡಿಯೋ ರೆಕಾರ್ಡ್ ಮಾಡಿಟ್ಟುಕೊಂಡು, ವಿಐಪಿ ಖೈದಿಗಳ ಯಥಾ ಸ್ಥಿತಿಯನ್ನು (ಐಷಾರಾಮಿ ಸವಲತ್ತುಗಳ ಹೊಂದಿರುವುದನ್ನು) ವೀಡಿಯೊ ಮಾಡಿಟ್ಟುಕೊಂಡು ಅವರನ್ನವರೇ ಬ್ಲಾಕ್ ಮೇಲ್ ಮಾಡಿಕೊಂಡು, ನೀನು ಕಳ್ಳ... ನಾನು ಕಳ್ಳ... ನೀನು ತಿನ್ನು... ನಾನು ನುಂಗ್ತೇನೆ... ನಿನ್ ತಂಟಗೆ ನಾನ್ ಬರೊಲ್ಲ... ನನ್ ತಂಟೆಗೆ ನೀನು ಬರಬೇಡ... ಎಂಬ ಅಂಡರ್ ಸ್ಟಾಂಡಿಂಗ್ ಇಬ್ಬರಲ್ಲಿಯೂ ಇದೆಯಂತೆ!! ಹೀಗೆ ಪರಪ್ಪನ ಅಗ್ರಹಾರ ಜೈಲ್ ಒಳಗಡೆ ಅಕ್ರಮ ಧಂಧೆ ನಡೆಸಿಕೊಂಡು ಇಡೀ ಪರಪ್ಪನ ಅಗ್ರಹಾರವನ್ನೆ ಉರಿದು ಮುಕ್ಕುತ್ತಿರೋ ಇವರಿಬ್ಬರು, ಜೊತೆಗೆ ಮುಖ್ಯ ಅಧೀಕ್ಷಕ ಸುರೇಶ್ ಮೂವರ ಎತ್ತಂಗಡಿ ಆಗದೆ ಈ ಜೈಲ್ ಶುದ್ಧವಾಗಲಾರದು!!!

ಇತ್ತೀಚೆಗೆ ರಘು ಅಲಿಯಾಸ್ ಗುರು ಎಂಬ ಖೈದಿಯ ಕೈಯ್ಯಲ್ಲಿ ಹಿಡನ್ ಕ್ಯಾಮರಾ ಕೊಟ್ಟು ಸಹಾಯಕ ಅಧೀಕ್ಷಕ ಅಶೋಕ್ ಭಜಂತ್ರಿ ಎಂಬ ಅಧಿಕಾರಿ ಮಾಜಿ ಎಂಪಿ ಹಾಸನದ ಪ್ರಜ್ವಲ್ ರೇವಣ್ಣನಿಗೆ ಕಾನೂನು ಬಾಹಿರವಾಗಿ ನೀಡಿರುವ ಬೆಡ್ ಕಾಟು, ಚೇರು, ಟೇಬಲ್ಲು, ಸ್ಟವ್ ಮುಂತಾದ ವಸ್ತುಗಳ ವೀಡಿಯೊ ಮತ್ತು ಸಜಾ ಬಂದಿಯಾಗಿದ್ದರೂ, ಬಿಳಿ ಶರ್ಟ್ ಬಿಳಿಟೋಪ್ಪಿ ಬಿಳಿ ಚಡ್ಡಿಯ ಜೀವಾವಧಿ ಸಜಾ ಬಂದಿಗಳ ಜೈಲು ಯೂನಿಫಾರ್ಮ್ ಧರಿಸದೆ ಜೀನ್ಸ್ ಪ್ಯಾಂಟ್ ಕಲರ್ ಕಲರ್ ಟೀ ಶರ್ಟ್‌ನಲ್ಲೆ ಈವತ್ತಿಗೂ ಪರಪ್ಪನ ಅಗ್ರಹಾರ ಜೈಲಿನೊಳಗೆ ಮಿಂಚುತ್ತಿರುವ ಪ್ರಜ್ವಲ್ ರೇವಣ್ಣನ ಅಸಲೀ ರೂಪದ ಒರಿಜಿನಲ್ ವೀಡಿಯೊ ಶೂಟಿಂಗ್ ಮಾಡಿಸಿಟ್ಟುಕೊಂಡು, ಮುಖ್ಯ ಅಧೀಕ್ಷಕ ಸುರೇಶ್‌ಗೇ ಬ್ಲಾಕ್‌ಮೇಲ್ ಮಾಡಿಕೊಂಡು ತನಗೂ ಕೂಡ ಜೈಲಿನ ಅಕ್ರಮ ದಂಧೆ, ದುಡ್ಡುಗಳಲ್ಲಿ ಪಾಲು ಬರಬೇಕೆಂದು ಓಡಾಡುತ್ತಿರುವುದೀಗ ಜೈಲೊಳಗೇ ಇರುವ ಖೈದಿಗಳಿಂದಲೇ ಹೊರಗಡೆ ಟಾಮ್ ಟಾಮ್ ಮೊಳಗುತ್ತಿದೆ.



ಜಪ್ತಿ ಮಾಡಿದ ಆಶೀಶ್ ಆಯಿಲ್ ಡ್ರಗ್

ಸೆಂಟ್ರಲ್ ಜೈಲಿನೊಳಗೆ ಇಷ್ಟೆಲ್ಲ ನಡೆಯುತ್ತಿದ್ದರೂ ಆಡಳಿತ ಸರ್ಕಾರಕ್ಕೆ, ಮಂತ್ರಿಗಳಿಗೆ ಬೇರಾವುದೋ ಚಿಂತೆ ಮುತ್ತಿಕೊಂಡಿರುವಂತಿದೆ! ಕಾರಾಗೃಹಗಳ ಹಳೇ ಡಿಜಿಪಿ ಮಾಲಿನಿ ಮೇಡಮ್ಮು ಎಷ್ಟು ಸಾಧ್ಯವೋ ಅಷ್ಟನ್ನೂ ಬಾಚ್ಚಿಕೊಂಡು ರಿಟೇರ್ ಆದ್ರು! ಒಂದರ್ಥದಲ್ಲಿ ಸೆಂಟ್ರಲ್ ಜೈಲ್ ಇಷ್ಟು ಆದ್ವಾನ ಆಗಿದ್ದು ಅವರಿಂದಲೇ ಅಂದ್ರೆ ತಪ್ಪೇನಿಲ್ಲ!! ನಿಷ್ಪಾಪಿ ಖೈದಿಗಳ ಪುಣ್ಯವೋ ಏನೋ, ಇದೀಗ ಬಂದೀಖಾನೆಯ ಹೊಸ ಡಿಜಿಯಾಗಿ ಮಾನ್ಯ ದಯಾನಂದ್ ಐಪಿಎಸ್ ಆಗಮಿಸಿದ್ದಾರೆ.

ಸಾಹೇಬರಿಗೆ ರಾಜ್ಯದ ಎಲ್ಲಾ ಜೈಲುಗಳನ್ನು, ಮುಖ್ಯವಾಗಿ ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲ್ ಅನ್ನು ಕ್ಲೀನ್ ಮಾಡುವ ಇಚ್ಛೆಯಂತೂ ಇದ್ದೇ ಇದೆ. ಅವರಿಗೆ ಯಾವುದೇ ಕಿರಿಕ್ ಮಾಡದೇ, ಉತ್ತಮ ಕರ್ತವ್ಯ ನಿಭಾಯಿಸುವಂತೆ ಸರ್ಕಾರ, ನೋಡಿಕೊಳ್ಳಬೇಕಿದೆ... ☯

# ಇಂಜಿನಿಯರಿಂಗ್ ಮಾಡಿರೋ ಪ್ರಜ್ವಲ್‌ಗೆ ಕ್ಲರ್ಕ್ ಪೋಸ್ಟ್!!

ಕುಮಾರಸ್ವಾಮಿ ಅವರ ಮಗ ಚರ್ಚ್ ಸ್ಟ್ರೀಟ್‌ನ ಹೋಟೆಲ್‌ನಲ್ಲಿ ಮಧ್ಯರಾತ್ರಿ ವೇಳೆ ಗಲಾಟೆ ಮಾಡಿಕೊಂಡ ದಿವಸ ಇಡೀ ರಾಜ್ಯದ ಜನ ಅಂದುಕೊಂಡಿದ್ದು, ಅಪ್ಪನ ಮರ್ಯಾದೆ ಕಳೆಯೋ ಈ ಹುಡುಗ ಉದ್ಧಾರ ಆಗಲ್ಲ ಬಿಡ್ರಿ... ರೇವಣ್ಣನ ಮಗನೊಬ್ಬ ಭಾಳ ಬುದ್ದಿವಂತನಂತೆ! ಅವನೇನಾದ್ರೂ ರಾಜಕೀಯಕ್ಕೆ ಬಂದ್ರೆ ಇವನ ಕತೆ ಮುಗೀತು!! ಅಂದು ಜನ ಮಾತಾಡಿಕೊಂಡದ್ದು ಪ್ರಜ್ವಲ್ ರೇವಣ್ಣ ಬಗ್ಗೆ! ಗ್ರಹಚಾರ ತುಂಬಾ ಕೆಟ್ಟದ್ದು ಕಂಡ್ರಿ... ನಸೀಬು ಕೆಟ್ರೆ ಮಾತ್ರ ಈ ತರಾ ಎಲ್ಲಾ ಆಗುತ್ತವೆ.. ಪ್ರಜ್ವಲ್ ಹೇಗಿದ್ದ... ಹೇಗಾದ... ಈಗೆಲ್ಲಿದ್ದಾನೆ... ಇದೆಲ್ಲ ಬಿಡಿಸಿ ಹೇಳಬೇಕಿಲ್ಲವಷ್ಟೇ.



ಅಂದಹಾಗೆ, ಚಿಕ್ಕಮಗಳೂರಿನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ ಪೂರೈಸಿ ಹುಟ್ಟೂರು ಹಾಸನಕ್ಕೆ ಹಿಂತಿರುಗಿದ ಪ್ರಜ್ಜು, ಮುಂದೆ ಜನರ ನಿರೀಕ್ಷೆಯಂತೆಯೇ ರಾಜಕೀಯ ಅಖಾಡಕ್ಕೆ ಜಿಗಿದ. ಮೊದಲ ಚುನಾವಣೆಯಲ್ಲೇ ಗೆದ್ದು ಹಾಸನ ಲೋಕಸಭಾ ಕ್ಷೇತ್ರದ ಸದಸ್ಯನಾಗಿ ಐದು ವರ್ಷ ವಿಜೃಂಭಿಸಿದ್ದ. ಈತನ ಸ್ಪೀಡ್ ಮತ್ತು ಸ್ಪೀಚ್ ನೋಡಿ ವಾರೆವ್ಹಾ ಅಂದ್ರು. ಪ್ರಜ್ವಲ್ ದೇವೇಗೌಡರ ಹೆಸರು ಉಳಿಸುತ್ತಾನೆ ಅಂತಲೂ ಅಂದುಕೊಂಡ್ರು... ಆದರೆ ಮುಂದೆ ಆಗಿದ್ದೇ ಬೇರೆ!

ಪ್ರಜ್ವಲ್ ಸೈಕೋ ಆಗದೆ, ರೇಪ್ ಕೇಸ್‌ಗಳಲ್ಲಿ ಭಾಗಿಯಾಗದೇ ಇದ್ದರೆ ಮತ್ತೊಮ್ಮೆ ಲೋಕಸಭೆ ಪ್ರವೇಶಿಸುವ ಅವಕಾಶವೂ ಇತ್ತು! ಅದರೀಗ ಜೈಲು ಪ್ರವೇಶವಾಯಿತು!! ಮನೆಯಲ್ಲಿ ಕಸ ಮುಸುರೆ ಎತ್ತಿಕೊಂಡಿದ್ದ ಕೆಲಸದವಳನ್ನು ಕೆಡಿಸಿ ರೇಪ್ ಕೇಸ್ ಹೆಟ್ಟಿಸಿಕೊಂಡು ಜೈಲು ಪಾಲಾಗಿ ಜೀವಾವಧಿ ಶಿಕ್ಷೆಗೂ ಗುರಿಯಾಗಿದ್ದಾನೆ ಪಾಪಿ! ಮೊದಲು ಎಂಪಿಯಾಗಿ ಮೆರೆಯುತ್ತಿದ್ದಾಗ.... ಜೈಲಿನ ಹೊರಗಡೆ ತಾನೇ ಹತ್ತಾರು ಮಂದಿಗೆ ಕೆಲಸ ನೀಡಿದ್ದ ಪ್ರಜ್ಜು ಇವತ್ತು ಜೈಲಿನಲ್ಲಿ ದಿನಗೂಲಿ ನೌಕರ!! ಇಂಜಿನಿಯರಿಂಗ್ ವಿದ್ಯಾರ್ಥಿ ಅಂತಲೋ ಅಥವಾ ಮಾಜಿ ಸಂಸದ ಅಂತಲೋ ಜೈಲು ಅಧಿಕಾರಿಗಳು ಈತನಿಗೆ ಲೈಬ್ರರಿಯಲ್ಲಿ ಗುಮಾಸ್ತನ ನೌಕರಿ ಕರುಣಿಸಿದ್ದಾರೆ! ದಿನವೊಂದಕ್ಕೆ 522 ರೂ. ಪಗಾರ. ಕೋರ್ಟ್, ವಕೀಲರೊಡನೆ ಮಾತುಕತೆ ಅಂತ ಡ್ಯೂಟಿಗೆ ಗೈರಾದರೆ ಪಗಾರ ಕಟ್.... ಪ್ರಜ್ಜು ತಾನು ಸಂಪಾದಿಸಿದ ಹಣವನ್ನ ತನ್ನ ಖರ್ಚಿಗೆ ಬಳಸಿಕೊಳ್ಳಬಹುದು.

ಈ ಕಾರ್ ಬೆಲೆ ಎಷ್ಟು ಗೊತ್ತೇನೋ.... ಒಂದೂವರೆ ಕೋಟಿ ರುಪಾಯ್.... ಎಂಬ ಡೈಲಾಗ್ ನೆನಪಾಯಿತೇ?! 522 ರೂ. ಎಲ್ಲಿ ಒಂದೂವರೆ ಕೋಟಿ ರೂ. ಎಲ್ಲಿ?? ಇದಕ್ಕೆ ಅಲ್ಲವೇ ಹೇಳೋದು, ಕಾಲಾಯ ತಸ್ಮೈ ನಮಃ ಅಂತ!! ☯

# ಗಂಡನ ಕೊಂದು ಕಥೆ ಕಟ್ಟಿದ ಸುಪ್ನಾತಿ!

11 ☜

ಬಂದಿತ್ತು ಎಂಬುದನ್ನು ತೋರಿಸಿದ್ದಳು. ಆದರೆ ಅದು ಬಂದು ಹೋಗಿ ಬಹಳ ದಿನಗಳೇ ಕಳೆದು ಹೋಗಿದ್ದವು. ಹೀಗಾಗಿ ಆಕೆಯ ಮೇಲೆಯೇ ಸಂಶಯ ಬರಲಾರಂಭಿಸಿತು.


ಆಕೆಯನ್ನು ಪ್ರಶ್ನಿಸಿದಾಗಲೆಲ್ಲ ಹಾರಿಕೆಯ ಉತ್ತರ ಹೇಳುತ್ತಿದ್ದಳಲ್ಲದೆ, ಅವಳು ನೀಡುತ್ತಿದ್ದ ಉತ್ತರಗಳಲ್ಲಿ ಒಂದಕ್ಕೊಂದು ಸಂಬಂಧವೇ ಇರುತ್ತಿರಲಿಲ್ಲ, ಹೀಗಾಗಿ ಸ್ಥಳದಲ್ಲಿದ್ದ ಇನ್ಸ್‌ಪೆಕ್ಟರ್ ಮುನಿಯಪ್ಪ ಅವರಿಗೆ ಸಂಶಯ ಬಂದು ಅವರಿದ್ದ ಅಡಿಕೆ ತೋಟವನ್ನು ಸಂಪೂರ್ಣವಾಗಿ ಹುಡುಕುವಂತೆ ಹೇಳಿದ್ದಾರೆ. ಹೀಗೆ ಹುಡುಕುವಾಗ ಅನುಮಾನ ಪಡುವಂತಹ ಕುರುಹು ಅಲ್ಲಿ ಪತ್ತೆಯಾಗಿತ್ತು. ಅದೇನೆಂದರೆ ಮನೆಯಿಂದ ಸೆಗಣಿ ಗುಂಡಿಯ ಕಡೆಗೆ ಮನುಷ್ಯನ ಹೆಜ್ಜೆ ಗುರುತು ಕಾಣಿಸಿತ್ತಲ್ಲದೆ, ಏನನ್ನೋ ಎಳೆದೊಯ್ದ ಗುರುತು ಕಾಣಿಸಿತ್ತು. ಆದರೆ ಮಳೆಗೆ ಅಳಿಸಿದಂತಾಗಿತ್ತು. ಇನ್ನು ತೋಟಕ್ಕೆ ಅಳವಡಿಸಲಾಗಿದ್ದ ಸಿಸಿಟಿವಿ ಕ್ಯಾಮರಾದಲ್ಲಿ ಅನುಮಾನ ಹುಟ್ಟಿಸುವಂತಹ ಚಲನ ವಲನಗಳು ಸೆರೆಯಾಗಿದ್ದವು. ಅಲ್ಲದೆ ಸಲ್ಲಾಪುರಿ ಏಕಾಂಕಿಯಾಗಿ ಅಡ್ಡಾಡುತ್ತಿದ್ದದ್ದು ಕಂಡು ಬಂದಿತ್ತು. ಹೀಗಾಗಿ ಆಕೆಯ ಮೇಲೆಯೇ ಅನುಮಾನ ಗಟ್ಟಿಯಾಗಿತ್ತು. ಆದ್ದರಿಂದ ಆಕೆಯನ್ನು ಪೊಲೀಸ್ ಸ್ಟೈಲ್‌ನಲ್ಲಿ ವಿಚಾರಿಸಿದಾಗ ತಾನು ಮಾಡಿದ ಕೃತ್ಯವನ್ನು ಒಪ್ಪಿಕೊಂಡಿದ್ದಾಳೆ.



ಸಲ್ಲಾಪುರಿ ಮಾಡಿದ ಕಿತಾಪತಿ ಬಹಿರಂಗವಾಗುತ್ತಿದ್ದಂತೆಯೇ ಎಸ್ಪಿ ವಿಷ್ಣುವರ್ಧನ್ ಅವರ ನಿರ್ದೇಶನದಂತೆ ಎಎಸ್ಪಿಸಿ. ಮಲ್ಲಿಕ್, ಹುಣಸೂರು ಉಪ ವಿಭಾಗದ ಡಿವೈಎಸ್ಪಿ ಗೋಪಾಲಕೃಷ್ಣ, ಹುಣಸೂರು ಗ್ರಾಮಾಂತರ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ರಾಧಾ, ಜಿಲ್ಲಾ ಬೆರಳಚ್ಚು ಘಟಕದ ಇನ್ಸ್‌ಪೆಕ್ಟರ್ ಎಂ.ಆರ್. ಬಾಲಸುಬ್ರಹ್ಮಣ್ಯ, ಸಹಾಯಕ ಸಬ್ ಇನ್ಸ್‌ಪೆಕ್ಟರ್ ಹೆಚ್. ಆರ್. ಹರೀಶ್, ಮುಖ್ಯಪೇದೆ ಹೆಚ್. ಮಧುಚಂದ್ರ, ಸೀನ್ ಆಫ್ ಕ್ರೈಂ ಅಧಿಕಾರಿ ಆದರ್ಶ ಮತ್ತು ಮೋಹಿತ್ ಅವರು ಸ್ಥಳಕ್ಕೆ ಭೇಟಿ ನೀಡಿ ಹುಣಸೂರು ಉಪವಿಭಾಗಾಧಿಕಾರಿ ವಿಜಯ್‌ಕುಮಾರ್ ಸಮ್ಮುಖದಲ್ಲಿ ತಿಪ್ಪೆಗುಂಡಿಯನ್ನು ಅಗೆದಿದ್ದು ಈ ವೇಳೆ ಮೊದಲಿಗೆ ವೆಂಕಟಸ್ವಾಮಿಯ ಕೈ ಕಂಡಿದೆ. ಆ ನಂತರ ಅಗೆದು ಶವವನ್ನು ಹೊರತೆಗೆದು ಮಹಜರು ನಡೆಸಿ ಶವದ ಮರಣೋತ್ತರ ಪರೀಕ್ಷೆ ನಡೆಸಿ ಶವವನ್ನು ವಾರಾಸುದಾರರಿಗೆ ನೀಡಲಾಗಿದೆ.

ಸದ್ಯ ಹಣದಾಸೆಗಾಗಿ ಗಂಡನನ್ನು ಕೊಂದು ಹುಲಿ ಹೊತ್ತೊಯ್ದಿದೆ ಎಂದು ಕಥೆ ಕಟ್ಟಿದ ಸಲ್ಲಾಪುರಿಯನ್ನು ಬಂಧಿಸಿ ಜೈಲಿಗಟ್ಟಲಾಗಿದೆ. ಈಕೆ ಮಾಡಿದ ಕೃತ್ಯದಿಂದ ಇದೀಗ ಮಕ್ಕಳಿಬ್ಬರು ಅಪ್ಪ-ಅಮ್ಮನಿಲ್ಲದೆ ತಬ್ಬಲಿಯಾಗಿವೆ. ಇಡೀ ಪ್ರಕರಣವನ್ನು ನೋಡಿದಾಗ ಹಣದಾಸೆಗೆ ಹೀಗೂ ಮಾಡುತ್ತಾರಾ? ಎಂಬುದು ಅಚ್ಚರಿಯಾಗಿಯೇ ಉಳಿಯುತ್ತದೆ. ☯

# ಪ್ರಧಾನಿ ಮೋದಿಯವರ ಟೀಕಾಕಾರರಿಗೆ 'ಅಚ್ಛೇ ದಿನ್' ಅರ್ಥ ತಿಳಿಸಿದ ಓದುಗ ದೊರೆ!



ಜಿಎಸ್‌ಟಿ 2.0 ಸುಧಾರಣೆ ಜಾರಿಗೆ ತರಲು ಸರ್ಕಾರ ಎಂಟು ವರ್ಷ ತಡ ಮಾಡಿದೆ ಎಂದು ಮಾಜಿ ವಿತ್ತ ಸಚಿವ ಪಿ. ಚಿದಂಬರ್‌ರವರು ಜಿಎಸ್‌ಟಿ 2.0 ಘೋಷಣೆ ಮಾಡಿದ ತರುವಾಯ ನೀಡಿದ ಪ್ರತಿಕ್ರಿಯೆ. ಚಿದಂಬರಂರವರು ಕೇಂದ್ರ ವಿತ್ತ ಸಚಿವರಾಗಿ ಆರ್ಥಿಕ ವಿಚಾರಗಳಲ್ಲಿ ಪರಿಣಿತಿಯನ್ನು ಪಡೆದವರು. ಕಾಂಗ್ರೆಸ್ ನಾಯಕ, ಹಿರಿಯ ನ್ಯಾಯವಾದಿ ಅಭಿಷೇಕ್ ಮನುಸಿಂಘ್ವಿ ರವರು ಸರ್ಕಾರ ವಾಸ್ತವದಲ್ಲಿ, ರಾಹುಲ್ ಗಾಂಧಿ ಒತ್ತಡ ಹೇರಿದಾಗ ಮಾತ್ರ ಕಾರ್ಯಪ್ರವೃತ್ತವಾಗುತ್ತದೆ. ಇಂದಿನ ಜಿಎಸ್ಟಿ ಕಡಿತಗಳು, ರಾಹುಲ್ ಅವರ ನಿರಂತರ ಪರಿಶ್ರಮ ಕಾರಣ ಎಂದರೆ. ಸಿದ್ದರಾಮಯ್ಯನವರು ಇದನ್ನು ಮೊದಲೇ ಮಾಡಿದ್ದರೆ ಜನರು ಪಡಬಾರದ ಕಷ್ಟ ಪಡಬೇಕಾದ ಪರಿಸ್ಥಿತಿ ಇರುತ್ತಿರಲಿಲ್ಲ ಎಂದು ಟೀಕೆ ಮಾಡುತ್ತಾರೆ. ವಾಸ್ತವಿಕತೆಯಿಂದ ದೂರವಾಗಿ ಕಾಂಗ್ರೆಸ್ ನಾಯಕರು ತಮ್ಮ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಇವರಿಗೆ ಮೋದಿ ಸರ್ಕಾರ ಕೈಗೊಂಡ ಐತಿಹಾಸಿಕ ಆರ್ಥಿಕ ಸುಧಾರಣೆಯನ್ನು ಹೇಗೆ ಸ್ವೀಕರಿಸಬೇಕು ಎಂಬ ಗೊಂದಲ ವಾಗಿರುವುದು ಸ್ಪಷ್ಟವಾಗಿ ಕಾಣುತ್ತಿದೆ.

ಜಿಎಸ್‌ಟಿ ಜಾರಿಗೆ ಬರುವ ಮುನ್ನ 17 ವಿವಿಧ ತೆರಿಗೆಗಳು ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಿದ್ದವು.ದೈನಂದಿನ ದಿನಬಳಕೆಯ ವಸ್ತುಗಳಾದ ಸೋಪು, ಟೂತ್ ಪೇಸ್ಟ್ ತಲೆಗೆ ಹಚ್ಚುವ ಎಣ್ಣೆ ಮತ್ತು ಸ್ಕೂಲ್ ಬ್ಯಾಗ್ ಮುಂತಾದ ವಸ್ತುಗಳಿಗೆ 27% ಮಾರಾಟ ತೆರಿಗೆ ಕೊಡಬೇಕಿತ್ತು. 2017 ರಲ್ಲಿ ಜಿಎಸ್‌ಟಿ ಜಾರಿಯಾದ ನಂತರ ಈ ಎಲ್ಲಾ ಪದಾರ್ಥಗಳ ತೆರಿಗೆಯು 18% ಗೆ ಇಳಿಯಿತು. ಇವರ ತರ್ಕ ಹೇಗಿದೆಯೆಂದರೆ ಶೇಕಡಾ 27ರಷ್ಟು ತೆರಿಗೆಯು ಸುಖದ ಸೋಪಾನ ಆದರೆ ಶೇಕಡಾ 18ರಷ್ಟು ತೆರಿಗೆ ನೀಡಿದರೆ ಅದು ಪಡಬಾರದ ಕಷ್ಟವು ಎಂದು ಅಭಿಪ್ರಾಯ ಪಡುತ್ತಾರೆ.

ರಾಹುಲ್ ಗಾಂಧಿಯವರು 2017 ರಲ್ಲಿ ಜಿಎಸ್ ಟಿಯನ್ನು ಗಬ್ಬರ್ ಸಿಂಗ್ ಟ್ಯಾಕ್ಸ್ ಎಂದು ಅಪಹಾಸ್ಯ ಮಾಡಿದ್ದರು. ಕೇವಲ 18% ಒಂದೇ ಸ್ಲ್ಯಾಬ್ ಇರಬೇಕು ಎಂದು ಅಭಿಪ್ರಾಯಪಟ್ಟಿದ್ದರು. ತದನಂತರ ಎಂಟು ವರ್ಷದ ಅವಧಿಯಲ್ಲಿ ಒಮ್ಮೆಯೂ ಜಿಎಸ್‌ಟಿಯ ಕುರಿತು ಯಾವುದೇ ಸಲಹೆ ನೀಡಿಲ್ಲ, ಪಾಪ ಕಾಂಗ್ರೆಸ್ಸಿಗರು ಅನಿ ವಾರ್ಯವಾಗಿ ಕೇಂದ್ರ ಸರ್ಕಾರದ ನಿರ್ಧಾರಕ್ಕೆ ರಾಹುಲ್ ಹೆಸರು ಜೋಡಿಸ ಬೇಕಾಗಿದೆ.



ಸೆಪ್ಟೆಂಬರ್ ಮೂರನೆಯ ತಾರೀಖು ರಾತ್ರಿ ಹತ್ತು ಗಂಟೆಗೆ ವಿತ್ತ ಸಚಿವೆ ಪರಿಷ್ಕರಿಸಿದ ನೂತನ ಜಿಎಸ್‌ಟಿ ತೆರಿಗೆ ಪ್ರಮಾಣವನ್ನು ಘೋಷಿಸಿ ಒಂದು ವಾರ ಕಳೆದಿದೆ. ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರು ಇದರ ಕುರಿತು ಯಾವುದೇ ಪ್ರತಿಕ್ರಿಯೆ ನೀಡದೆ ದಿವ್ಯಮೌನಕ್ಕೆ ಶರಣಾಗಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಕಾಂಗ್ರೆಸ್ ಜಿಎಸ್‌ಟಿ ಸರಳೀಕರಣಕ್ಕೆ ಒತ್ತಾಯಿಸುತ್ತಿತ್ತು ನಾವು ಇದನ್ನು ಗಬ್ಬರ್ ಸಿಂಗ್ ತೆರಿಗೆ ಎಂದು ಕರೆಯುತ್ತಿದ್ದೇವು ಎಂದು ಅದೇ ಹಳೆಯ ರಾಗವನ್ನೇ ಹಾಡಿದ್ದಾರೆ. ದರ ಇಳಿಕೆಯನ್ನು ಸ್ವಾಗತಿಸಲು ಆಗದೆ ವಿರೋಧಿಸಲು ಸಾಧ್ಯವಾಗದೆ ಗಂಟಲಲ್ಲಿ ಕಡಬು ಸಿಕ್ಕಿಕೊಂಡವರ ಹಾಗಿದೆ ಇವರ ಪ್ರತಿಕ್ರಿಯೆ.

ಕಳೆದ ಏಳು ವರ್ಷದಲ್ಲಿ ಅತಿ ಹೆಚ್ಚಿನ ತೆರಿಗೆ ಸಂಗ್ರಹಿಸಿ ಜನರ ಹಣವನ್ನು ಲೂಟಿ ಮಾಡಿ ಈಗ ತೆರಿಗೆ ಇಳಿಸಿ ಸಾಧನೆಯೆಂದು ಬಿಂಬಿಸುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕರ ಮತ್ತೊಂದು ಟೀಕೆ. ಜಿಎಸ್‌ಟಿ ಜಾರಿಯಾದಾಗ 2014ರ ಮೊದಲು ಇದ್ದ ತೆರಿಗೆ ಪ್ರಮಾಣಕ್ಕೆ ಸಮನಾಗಿ ವಿವಿಧ ವಸ್ತುಗಳ ಮೇಲೆ ತೆರಿಗೆ ನಿಗದಿ ಮಾಡಲಾ ಗಿತ್ತು. ಉದಾಹರಣೆಗೆ ಯುಪಿಎ ಅವಧಿ ಯಲ್ಲಿ ಸಿಮೆಂಟ್ ಮೇಲೆ 31% ತೆರಿಗೆ ಯಿತ್ತು. ಜಿಎಸ್ ಟಿ ಬಂದ ತರುವಾಯ ಅದರ ಪ್ರಮಾಣ ಶೇಕಡಾ 28ಕ್ಕೆ ನಿಗದಿಯಾಗಿತ್ತು. ಇದೀಗ ಸಿಮೆಂಟ್ ಮೇಲಿನ ತೆರಿಗೆ ಪ್ರಮಾಣವು 18%ಗೆ ಇಳಿಸಲಾಗಿದೆ. ಇಂದಿರಾಗಾಂಧಿ ಯವರ ಅವಧಿಯಲ್ಲಿ ಆದಾಯ ತೆರಿಗೆಯ ಪ್ರಮಾಣವು ಒಂದು ಲಕ್ಷ ಸಂಪಾದಿಸಿದರೆ ರೂ. 97,000 ತೆರಿಗೆ ನೀಡಬೇಕಿತ್ತು. ಇಂದು ರೂ. 12 ಲಕ್ಷ ಸಂಪಾದಿಸಿದರೂ ಒಂದು ಪೈಸೆ ಆದಾಯ ತೆರಿಗೆ ನೀಡ ಬೇಕಾಗಿಲ್ಲ, ಕಾಂಗ್ರೆಸ್ ನಾಯಕರು ತಮ್ಮ ಅಧಿಕಾರಾವಧಿ ಯಲ್ಲಿ ವಿಧಿಸಲಾಗುತ್ತಿದ್ದ ತೆರಿಗೆಯ ಪ್ರಮಾಣವನ್ನು ಒಮ್ಮೆ ತಿರುವಿ ನೋಡಿದರೆ ಅವರಿಗೆ ಲೂಟಿ ಎಂದರೆ ಹೇಗಿರುತ್ತದೆ ಎಂಬ ಅನುಭವವಾಗುವುದು.



ವಿತ್ತ ಸಚಿವೆ ನಿರ್ಮಲ ಸೀತಾರಾಮನ್‌ರವರು ಅತ್ಯಂತ ದಿಟ್ಟತನ ಪ್ರದರ್ಶಿಸಿ ಕಳೆದ ಒಂದು ವರ್ಷದ ಅವಧಿಯಲ್ಲಿ ಮೂರು ಆರ್ಥಿಕ ಸುಧಾರಣಾ ಕ್ರಮವನ್ನು ಕೈಗೊಂಡಿದ್ದಾರೆ. 2024-25ರ ಮುಂಗಡ ಪತ್ರದಲ್ಲಿ ವೈಯಕ್ತಿಕ ಆದಾಯ ತೆರಿಗೆ ಮಿತಿಯು ರೂ. 12 ಲಕ್ಷಕ್ಕೆ ಹೆಚ್ಚಳವಾಗುತ್ತದೆ. 2026 ರಿಂದ ಅನ್ವಯವಾಗುವ ಹಾಗೆ ನೂತನ ಆದಾಯ ತೆರಿಗೆ ಕಾಯಿದೆ ಜಾರಿಗೆ ತಂದಿರುವ ಕಾರಣ ಆದಾಯ ತೆರಿಗೆ ಕಾಯಿದೆಯನ್ನು ಸರಳೀಕರಣ ಗೊಳಿಸಿ, ಹಲವಾರು ಸಮಯಬಾಹಿರವಾಗಿರುವ ಕಾಯಿದೆಗಳನ್ನು ತೆಗೆದು ಹಾಕಲಾಗಿದೆ. ಇದೀಗ ಜಿಎಸ್‌ಟಿ 2.0 ಮೂಲಕ ತೆರಿಗೆ ಪ್ರಮಾಣವನ್ನು ಕೇವಲ 5% ಮತ್ತು 18%ಕ್ಕೆ ಸೀಮಿತಗೊಳಿಸಿ, ಸದ್ಯ ಇದ್ದ 28% ತೆರಿಗೆ ಪ್ರಮಾಣವು ರದ್ದಾಗಿದೆ. ಜಿಎಸ್‌ಟಿ ಜಾರಿಗೆ ಬಂದ ಎಂಟು ವರ್ಷಗಳ ತರುವಾಯ ಕೈಗೊಂಡಿರುವ ಎರಡನೆ ಹಂತದ ಸುಧಾರಣೆಯನ್ನು ಐತಿಹಾಸಿಕ ಆರ್ಥಿಕ ಕ್ರಾಂತಿ ಎಂದು ಬಣ್ಣಿಸಬಹುದು.

ನರೇಂದ್ರ ಮೋದಿಯವರು ಆಗಸ್ಟ್ 15ರಂದು ಕೆಂಪುಕೋಟೆಯ ಮೇಲೆ ನೀಡಿದ್ದ ಜಿಎಸ್‌ಟಿ ಸುಧಾ ರಣೆಯ ವಾಗ್ದಾನವನ್ನು ಈಡೇರಿಸಿದ್ದಾರೆ. ಕಳೆದ ಅನೇಕ ತಿಂಗಳಿನಿಂದ ಎಲ್ಲರ ಬೇಡಿಕೆಯಿದ್ದ ವೈಯಕ್ತಿಕ ಆರೋಗ್ಯ ಮತ್ತು ಜೀವವಿಮೆಯ ಮೇಲಿನ ಜಿಎಸ್‌ಟಿಯನ್ನು ಶೇಕಡಾ 18 ರಿಂದ ಶೂನ್ಯಕ್ಕೆ ಇಳಿಸಿ ಜನರ ಭಾವನೆಗೆ ಸ್ಪಂದಿಸಿದ್ದಾರೆ. ಕೃಷಿ ಉಪಕರಣಗಳು ಹಾಗೂ ಹೈನುಗಾರಿಕೆಯ ಪದಾರ್ಥಗಳ ಮೇಲಿನ ತೆರಿಗೆ ಪ್ರಮಾಣವನ್ನು ಇಳಿಸಲಾಗಿದೆ. ಜೀವರಕ್ಷಕ ಕ್ಯಾನ್ಸರ್ ಔಷಧಿಗಳ ಮೇಲಿನ ತೆರಿಗೆಯನ್ನು ಶೂನ್ಯಕ್ಕೆ ಇಳಿಸಲಾಗಿದೆ. ಗೃಹೋಪಯೋಗಿ ದಿನಬಳಕೆ ವಸ್ತುಗಳ ಮೇಲಿನ ತೆರಿಗೆಯನ್ನು ಶೇಕಡಾ 5ರ ಪ್ರಮಾಣಕ್ಕೆ ಇಳಿಸಲಾಗಿದೆ. ಕಾರು ಮತ್ತು ದ್ವಿಚಕ್ರ ವಾಹನಗಳ ಮೇಲಿನ ತೆರಿಗೆ 28% ರಿಂದ 18ಕ್ಕೆ ತರಲಾಗಿದೆ. ಈಗಾಗಲೇ ಹಲವಾರು ಕಾರು ತಯಾರಕರು ಕಾರು ಮಾರಾಟದ ಬೆಲೆಯಲ್ಲಿ ಬೆಲೆ ಇಳಿಕೆ ಘೋಷಿಸಿದ್ದಾರೆ.


ಮೋದಿ ಸರ್ಕಾರವು ಮಧ್ಯ ವರ್ಗದವರನ್ನು ಕಡೆಗಣಿಸುತ್ತಿದೆ ಎಂಬ ಆರೋಪವನ್ನು ಸುಳ್ಳು ಮಾಡಿ ತಮ್ಮ ಸರ್ಕಾರ ಅತ್ಯಂತ ಮಧ್ಯಮ ವರ್ಗ ಸ್ನೇಹಿ ಎಂದು ಕೃತಿಯಲ್ಲಿ ಸಾಬೀತು ಪಡಿಸಿದ್ದಾರೆ. ಜಿಎಸ್‌ಟಿ 2.0 ರ ಲಾಭ ಕೇವಲ ಮಧ್ಯಮ ವರ್ಗದವರಿಗಲ್ಲದೆ ಪ್ರತಿಯೊಂದು ವರ್ಗದ ಜನರಿಗೂ ಇದರಿಂದ ಲಾಭ ದೊರೆಯಲಿದೆ. ಮಾರಾಟ ಮತ್ತು ಆದಾಯ ತೆರಿಗೆಯಲ್ಲಿ ನೀಡಿರುವ ವಿನಾಯತಿಗಳು ಜನಸಾಮಾನ್ಯರ ಖರೀದಿ ಶಕ್ತಿಗೆ ಬಲ ಹೆಚ್ಚಿಸಲಿದೆ. ಅಗತ್ಯ ವಸ್ತುಗಳ ಖರೀದಿಯಲ್ಲಿ ಆಗುವ ಉಳಿತಾಯದಿಂದ ಜನಸಾಮಾನ್ಯರು ಹೆಚ್ಚು ಹಣ ಉಳಿತಾಯದ ಕಡೆಗೂ ಗಮನ ಹರಿಸಬಹುದಾಗಿದೆ.

2014ರ ಮುನ್ನ ಮಾರಾಟ ತೆರಿಗೆ ಪ್ರಮಾಣದಲ್ಲಿ ಕಡಿಮೆಯಾಗುವ ಯೋಚನೆಯನ್ನು ಮಾಡಲು ಕೂಡಾ ಸಾಧ್ಯವಾಗುತ್ತಿರಲಿಲ್ಲ, ಹತ್ತು ವರ್ಷಗಳ ಮನಮೋಹನ ಸಿಂಗ್ ಆಡಳಿತವು ಸಾಲು ಸಾಲು ಭ್ರಷ್ಟಾಚಾರ ಹಗರಣ ಗಳಿಗೆ ಕುಖ್ಯಾತಿ ಪಡೆದಿತ್ತು. ಭಯೋತ್ಪಾದಕರ ದಾಳಿಯ ದುರ್ಘಟನೆಗಳಿಗೆ ಹಾಗೂ ನಕ್ಸಲರ ಹಿಂಸಾಚಾರ, ಭದ್ರತಾ ಪಡೆಗಳ ನರಮೇಧಕ್ಕೆ ಸುದ್ದಿಯಾಗುತ್ತಿತ್ತು. ಅನುತ್ಪಾದಕ ಬ್ಯಾಂಕ್ ಸಾಲಗಳು ಮಿತಿಮೀರಿ ಬ್ಯಾಂಕಿಂಗ್ ವ್ಯವಸ್ಥೆ ಕುಸಿಯುವ ಪರಿಸ್ಥಿತಿ ತಂದು ನಿಲ್ಲಿಸಿದ್ದರು. ಕುಸಿಯುತ್ತಿದ್ದ ಆರ್ಥಿಕ ಪರಿಸ್ಥಿತಿಯ ಕಾರಣ ಭಾರತ ವಿಶ್ವದ ಐದು ದುರ್ಬಲ ಆರ್ಥಿಕ ದೇಶವೆಂಬ ಅಪಖ್ಯಾತಿಗೆ ಒಳಗಾಗಿತ್ತು.

ಬಿಜೆಪಿಗೆ ಸ್ವಂತ ಬಲದ ಆಧಾರದ ಮೇಲೆ ಅಧಿಕಾರವಿಲ್ಲ ಹೀಗಾಗಿ ಕೇವಲ ರಾಜಿ ರಾಜಕೀಯದ ಅನಿವಾರ್ಯತೆಯಿಂದ ಯಾವುದೇ ಬಿಗ್ ಟಿಕೆಟ್ ಸುಧಾರಣೆಯು ಅಸಾಧ್ಯ ಎಂದು ಲೆಕ್ಕಾಚಾರ ಹಾಕಿದ್ದ ರಾಜಕೀಯ ಪಂಡಿತರಿಗೆ ಆಘಾತ ನೀಡುವ ಹಾಗೆ ಪೂರ್ಣ ಬಹುಮತ ಇದ್ದಾಗಲೂ ಕೈಗೊಳ್ಳದ ಆರ್ಥಿಕ ಸುಧಾರಣೆಯನ್ನು ಕೈಗೊಂಡು ಮೋದಿ ಸರ್ಕಾರ ಕೈಗೊಂಡು ಎಲ್ಲರನ್ನು ಚಕಿತಗೊಳಿಸಿದ್ದಾರೆ.

ಮೋದಿಯವರ ಹನ್ನೊಂದು ವರ್ಷದ ಆಳ್ವಿಕೆಯು ಎಲ್ಲ ನಕಾರಾತ್ಮಕತೆಯನ್ನು ಅಳಿಸಿ, ಭಾರತವನ್ನು ವಿಶ್ವದ ನಾಲ್ಕನೆ ಆರ್ಥಿಕ ಶಕ್ತಿಯಾಗಿ ನಿಲ್ಲಿಸಿದೆ. ಯಾವುದೇ ಹಗರಣಕ್ಕೆ ಅವಕಾಶವಾಗದ ಆಡಳಿತ ನೀಡಿದ್ದಾರೆ. ಇಂದು ಬೆಲೆ ಇಳಿಕೆಯು ಪ್ರಧಾನವಾಗಿ ಸುದ್ದಿ ಮಾಡುತ್ತಿದೆ. ಆಪರೇಷನ್ ಸಿಂಧೂರದ ಮೂಲಕ ನಮ್ಮ ರಕ್ಷಣಾ ಬಲದ ಪ್ರಾಬಲ್ಯವನ್ನು ಜಗತ್ತಿಗೆ ತೋರಿದ್ದಾರೆ. ಅಮೆರಿಕಾ ಅಧ್ಯಕ್ಷ ಟ್ರಂಪ್ ರವರ ಸುಂಕದ ಒತ್ತಡಕ್ಕೆ ಬಗ್ಗದೆ ದೇಶದ ಹಿತಾಸಕ್ತಿಯ ನಿಲುವಿಗೆ ಗಟ್ಟಿಯಾಗಿ ನಿಂತು ಅವರಿಗೆ ಪ್ರತಿ ಟಕ್ಕರ್ ಕೊಡಲು ಹಿಂಜರಿಯಲಿಲ್ಲ, ಪ್ರತಿ ರಂಗದಲ್ಲಿಯೂ ಭಾರತ ಆತ್ಮನಿರ್ಭರತೆಯತ್ತ ದಾಪುಗಾಲು ಹಾಕುತ್ತಿದೆ. 2014ರಲ್ಲಿ ಮೋದಿಯವರು ಅಚ್ಛೇದಿನ ಆಯೇಗ ಎಂದು ಹೇಳಿದ್ದು ಜನರಿಗೆ ಇಂದು ಅದರ ಅನುಭವ ಆಗುತ್ತಿರು ವುದು. ರಾಜಕಾರಣಿಗಳು ನೀಡುವ ಆಶ್ವಾಸನೆಯು ಈಡೇರಿಸಲು ಅಲ್ಲ ಎಂಬ ನಂಬಿಕೆಯನ್ನು ಸುಳ್ಳು ಮಾಡಿ ಮೋದಿಯವರು ಇದ್ದರೆ ಎಲ್ಲವೂ ಸಾಧ್ಯ ಎಂಬುದನ್ನು ರುಜುವಾತು ಪಡಿಸುತ್ತಿದ್ದಾರೆ.

ಮೋದಿಯವರ ಯುಗದಲ್ಲಿ ಸರ್ಕಾರವನ್ನು ಹಣಿಯಲು ವಿರೋಧ ಪಕ್ಷಗಳಿಗೆ ಇಂದು ವಿಷಯದ ಕೊರತೆಯಾಗಿ ಚುನಾವಣಾ ಆಯೋಗ ಕೈಗೊಂಡಿರುವ ಬಿಹಾರದ ಮತದಾರ ಪರಿಷ್ಕರಣೆಯನ್ನು ವಿರೋಧಿ ಸುತ್ತಾರೆ. ಚುನಾವಣಾ ಆಯೋಗದ ವಿಶ್ವಾಸಾರ್ಹತೆಗೆ ಮಸಿ ಬಳಿದು ತೃಪ್ತಿ ಪಟ್ಟಿಕೊಳ್ಳುತ್ತಿದ್ದಾರೆ. ಜನರಿಗೆ ವಿಶ್ವಾಸ ತುಂಬದ ಮತಾಧಿಕಾರ ಯಾತ್ರೆ ಮಾಡಿ ತಮ್ಮ ಹತಾಶೆ ಯನ್ನು ಶಮನ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ.




ನಿಜ ಅರ್ಥದಲ್ಲಿ ಜನಪರ ಹೋರಾಟ ವಿರೋಧ ಪಕ್ಷಗಳಿಗೆ ಕೈಗೆಟುಕದ ವಸ್ತುವಾಗಿರುವುದು ಕಟು ಸತ್ಯ.

ನರೇಂದ್ರ ಮೋದಿಯವರ ವಿಕಸಿತ ಭಾರತದ ಕಲ್ಪನೆಯು ಕೇವಲ ರಾಜಕೀಯ ಘೋಷಣೆಯಾಗಿಲ್ಲ, 2047ಕ್ಕೆ ಅದರ ಕನಸು ನನಸು ಮಾಡಲು ದೂರದೃಷ್ಟಿ ಯೋಜನೆಗಳ ಮೂಲಕ ಅದನ್ನು ಸಾಧಿಸಲು ಗಟ್ಟಿಯಾದ ಅಡಿಪಾಯವನ್ನು ಹಾಕುತ್ತಿದ್ದಾರೆ.

-ಪುನೀತ್

# ರಾಜವಂಶದ ಕರಾಳ ಇತಿಹಾಸ ಮತ್ತು ನೇಪಾಳಿ ಜನರ ಆಕ್ರೋಶ!

ನೇಪಾಳದಲ್ಲಿ ಕಳೆದ 2008ರ ವರೆಗೂ ಇದ್ದದ್ದು ರಾಜರ ಆಡಳಿತ. ಆಮೇಲೆ ಚೀನಾ ಕುಮ್ಮಕ್ಕಿನಿಂದ ಅಲ್ಲಿ ಮತದಾನ ಶುರುವಾದದ್ದು. ನೇಪಾಳದ ರಾಜ ವಂಶದ ಕುರಿತು ನಡೆಸುವ ಯಾವುದೇ ಮಾತುಕತೆಗಳಾದರೂ, ಜನರಿಗೆ ಅದು 2001ರಲ್ಲಿ ನಡೆದ ರಾಜವಂಶದ ಹತ್ಯಾಕಾಂಡದ ನೆನಪು ತರುತ್ತದೆ. ಆ ದುರಂತ ಘಟನೆಯಲ್ಲಿ ನೇಪಾಳದ ರಾಜವಂಶ ಬಹುತೇಕ ಅಂತ್ಯ ಕಂಡಿತ್ತು. ಈಗ ಅಲ್ಲಲ್ಲಿ ಈ ಬಗ್ಗೆ ಮಾತಾಡುವವರು ದೂರದ ಸಂಬಂದಿಗಳು ಅನುಯಾಯಿ ಗಳು ಮಾತ್ರ....





ನೇಪಾಳದ ಯುವ ಜೆನ್-ಜಿ ಪ್ರತಿಭಟನಾಕಾರರು ಹೋರಾಟ ನಡೆಸಿ, ಪ್ರಧಾನ ಮಂತ್ರಿ ಕೆಪಿ ಶರ್ಮಾ ಓಲಿ ಅವರನ್ನು ಅಧಿಕಾರದಿಂದ ಕೆಳಗಿಳಿಸಿದ್ದು, ಈಗ ರಾಜ ಪ್ರಭುತ್ವದ ಪರ ಇರುವ ಧ್ವನಿಗಳು ಮತ್ತೆ ನೇಪಾಳದಲ್ಲಿ ರಾಜ ಪ್ರಭುತ್ವ ಜಾರಿಗೆ ಬರಬೇಕು ಎಂದು ಆಗ್ರಹಿಸಲು ಆರಂಭಿಸಿವೆ. ನೇಪಾಳದಲ್ಲಿ ರಾಜಾಡಳಿತವನ್ನು 2008 ರಲ್ಲಿ ಅಧಿಕೃತವಾಗಿ ಕೊನೆಗೊಳಿಸಲಾಗಿತ್ತು.

ನೇಪಾಳದ ರಾಜ ವಂಶದ ಕುರಿತು ನಡೆಸುವ ಯಾವುದೇ ಮಾತುಕತೆಗಳಾದರೂ, ಜನರಿಗೆ ಅದು 2001ರಲ್ಲಿ ನಡೆದ ರಾಜವಂಶದ ಹತ್ಯಾಕಾಂಡದ ನೆನಪು ತರುತ್ತದೆ. ಆ ದುರಂತ ಘಟನೆಯಲ್ಲಿ ನೇಪಾಳದ ರಾಜವಂಶ ಬಹುತೇಕ ಅಂತ್ಯ ಕಂಡಿತ್ತು! ಈ ರಾಜ ಹತ್ಯೆ ಇಡೀ ಜಗತ್ತಿಗೇ ಆಘಾತವನ್ನ ಉಂಟುಮಾಡಿತ್ತು. ಈ ದುರ್ಘಟನೆ ಭಾರತದಲ್ಲೂ ಅಪಾರ ಚರ್ಚೆಗೊಳಗಾಗಿದ್ದು, ಇದಕ್ಕೆ ಗ್ವಾಲಿಯರ್ ಆಯಾಮವೂ ಇದೆ ಅನ್ನೋದು ಗಮನಿಯ ಸಂಗತಿ. ನೇಪಾಳದ ರಾಜ ಕುಟುಂಬ ಗ್ವಾಲಿಯರ್‌ನ ಸಿಂದಿಯಾ ರಾಜ ವಂಶದೊಡನೆ ವೈವಾಹಿಕ ಸಂಬಂಧಗಳನ್ನು ಬೆಳೆಸುವ ಮೂಲಕ ಉತ್ತಮ ಬಾಂಧವ್ಯ ಹೊಂದಿದ್ದರಿಂದ, ನೇಪಾಳದ ರಾಜಹತ್ಯೆ ಭಾರತದಲ್ಲೂ ವ್ಯಾಪಕ ಚರ್ಚೆಗೆ ಒಳಗಾಗಿತ್ತು. ನಮ್ಮ ಉಪೇಂದ್ರ ಈ ಕತೆಯನ್ನು ಇಟ್ಟುಕೊಂಡು ಸೂಪರ್ ಸ್ಟಾರ್ ಅನ್ನೋ ಸಿನಿಮಾವನ್ನೇ ಎತ್ತಿದ್ದ!

2001ರಲ್ಲಿ ಬೀರೇಂದ್ರ ಬೀರ್ ಬಿಕ್ರಮ್ ಶಾ ದೇವ್ ನೇಪಾಳದ ರಾಜನಾಗಿದ್ದರು. ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ್ದ ಬೀರೇಂದ್ರ, ಪಶ್ಚಿಮ ಬಂಗಾಳದ ಡಾರ್ಜಿಲಿಂಗ್‌ನಲ್ಲೂ ಓದಿದ್ದರು. ಅವರು ಕೈಗೊಂಡಿದ್ದ ಅಭಿವೃದ್ಧಿ ಕಾರ್ಯಗಳು ಮತ್ತು ಸಾಮಾಜಿಕ ಸುಧಾರಣೆಗಳಿಂದ ದೊರೆ ಬೀರೇಂದ್ರರನ್ನು ಪ್ರಜೆಗಳು ಬಹಳ ಇಷ್ಟಪಡುತ್ತಿದ್ದರು.




1970ರಲ್ಲಿ ಮಹಾರಾಜ ಬೀರೇಂದ್ರ, ಒಂದು ವೈಭವೋಪೇತ ಸಮಾರಂಭದಲ್ಲಿ ರಾಣಿ ಐಶ್ವರ್ಯ ರಾಜ್ಯ ಲಕ್ಷ್ಮೀದೇವಿ ಶಾ ಅವರನ್ನು ವಿವಾಹವಾಗಿದ್ದರು. ಈ ರಾಜ ದಂಪತಿಗಳು ಮೂವರು ಮಕ್ಕಳನ್ನು ಹೊಂದಿದ್ದರು. ಅವರೇ ಯುವರಾಜ ದೀಪೇಂದ್ರ, ರಾಜಕುಮಾರಿ ಶೃತಿ ಮತ್ತು ರಾಜಕುಮಾರ ನಿರಂಜನ

ಜೂನ್ 1, 2001ರಂದು ರಾಜ ಕುಟುಂಬ ಕಠ್ಮಂಡುವಿನ ನಾರಾಯಣಹಿತಿ ಅರಮನೆಯಲ್ಲಿ ಸೇರಿತ್ತು. (ಈ ಅರಮನೆಯನ್ನು ಈಗ ವಸ್ತು ಸಂಗ್ರಹಾಲಯವಾಗಿ ಮಾರ್ಪಡಿಸಲಾಗಿದೆ). ವರದಿಗಳ ಪ್ರಕಾರ, ಪಾರ್ಟಿಯ ಆರಂಭದಲ್ಲಿ ಯುವರಾಜ ದೀಪೇಂದ್ರ (29) ಕಾಣಿಸಿಕೊಂಡಿದ್ದು, ಎಲ್ಲರಿಗೂ ಕುಡಿಯಲು ಪಾನೀಯ ನೀಡುತ್ತಿದ್ದರು. ಕೆಲ ಸಮಯದ ಬಳಿಕ ಪಾರ್ಟಿಯ ಮಧ್ಯದಿಂದಲೇ ತೆರಳಿದ ದೀಪೇಂದ್ರ, ಕೆಲ ಕಾಲದ ನಂತರ ಕಮಾಂಡೋ ಸಮವಸ್ತ್ರದಲ್ಲಿ ಪಾರ್ಟಿಗೆ ಮರಳಿದ್ದರು. ಬರುವಾಗ ತನ್ನೊಡನೆ ಎರಡು ಅಸಾಲ್ಟ್ ರೈಫಲ್‌ಗಳನ್ನೂ ತಂದಿದ್ದರು.

ದೀಪೇಂದ್ರ, ಮೊದಲು ತನ್ನ ತಂದೆಯತ್ತ ನೋಡಿ, ಏನೂ ಮಾತನಾಡದೆ ಬಂದೂಕಿನ ಟ್ರಿಗರ್ ಎಳೆದರು. ಯುವರಾಜನ ಮಾವ, ಘಟನೆಗೆ ಸಾಕ್ಷಿಯಾಗಿದ್ದ ರವಿ ಶಮ್‌ಶೇರ್ ರಾಣಾ ಅವರು ಈ ಕುರಿತು ವಿವರಣೆ ನೀಡುತ್ತಾ, ಮಹಾರಾಜ ಕೆಲವು ಸೆಕೆಂಡುಗಳು ಗುಂಡೇಟು ತಿಂದು ಹಾಗೇ ನಿಂತಿದ್ದರು. ಬಳಿಕ ನೆಲದ ಮೇಲೆ ಕುಸಿದು ಕುಳಿತು, ಕೇ ಗರ್ ದೇಕೋ? (ನೀನೇನು ಮಾಡಿ ಬಿಟ್ಟೆ?) ಎಂದು ಪ್ರಶ್ನಿಸಿದ್ದರು. ಬಳಿಕ ದೀಪೇಂದ್ರ ತನ್ನ ತಾಯಿ, ರಾಜಮಾತೆ ಐಶ್ವರ್ಯರನ್ನು, ತನ್ನ ಸೋದರಿ ಶೃತಿ ಮತ್ತು ಸಹೋದರ ನಿರಂಜನರನ್ನು, ಮತ್ತು ಐವರು ಇತರ ಸಂಬಂಧಿಕರನ್ನು ಗುಂಡಿಟ್ಟು ಹತ್ಯೆಗೈದರು. ಬಳಿಕ, ದೀಪೇಂದ್ರ ತಲೆಯಲ್ಲಿ ಗುಂಡೇಟು ಬಿದ್ದ ಸ್ಥಿತಿಯಲ್ಲಿ ದೊರೆತಿದ್ದರು. ಕುಟುಂಬಸ್ಥರನ್ನು ಕೊಂದು, ಬಳಿಕ ಅವರು ಆತ್ಮಹತ್ಯೆಗೆ ಪ್ರಯತ್ನ ನಡೆಸಿದರು ಎಂದು ಸಂದೇಹಿಸಲಾಗಿತ್ತು.

ಕೋಮಾಗೆ ತೆರಳಿದ್ದ ದೀಪೇಂದ್ರರನ್ನು ಆ ಸ್ಥಿತಿಯಲ್ಲೇ ಮಹಾರಾಜ ಎಂದು ಘೋಷಿಸಲಾಯಿತು. ದೀಪೇಂದ್ರ ಜೂನ್ 4ರಂದು ಮೃತರಾದ ಬಳಿಕ, ಅವರ ಚಿಕ್ಕಪ್ಪ ಗ್ಯಾನೇಂದ್ರ ನೇಪಾಳದ ಮಹಾರಾಜರಾಗಿ, ರಾಜಾಡಳಿತ ಕೊನೆಯಾಗುವ ತನಕ ಆಡಳಿತ ನಡೆಸಿದರು.ಆಗಿನ ಸರ್ಕಾರ ರಾಜವಂಶದ ಹತ್ಯೆಗೆ ದೀಪೇಂದ್ರರೇ ಕಾರಣ ಎಂದು ಆರೋಪಿಸಿತು. ಒಂದು ಬಲ್ಲ ಸಿದ್ಧಾಂತದ ಪ್ರಕಾರ, ದೀಪೇಂದ್ರ ನಡೆಸಿದ ಕೃತ್ಯಕ್ಕೆ ರಾಜಕಾರಣಿ ಪಶುಪತಿ ಶಮ್‌ಶೇರ್ ಜಂಗ್ ಬಹಾದೂರ್ ರಾಣಾ ಮತ್ತು ಉಷಾ ರಾಜೇ ಸಿಂದಿಯಾ ಅವರ ಪುತ್ರಿ ದೇವಯಾನಿ ರಾಣಾ ಅವರ ಜೊತೆಗೆ ದೀಪೇಂದ್ರ ಸಂಬಂಧವೇ ಕಾರಣ ಎನ್ನಲಾಗಿದೆ. ದೇವಯಾನಿ ರಾಣಾ ಗ್ವಾಲಿಯರ್ ರಾಜವಂಶಕ್ಕೆ ಸೇರಿದವರಾಗಿದ್ದು, ಮಾಧವರಾವ್ ಸಿಂಧಿಯಾ ದೇವಯಾನಿಯ ಸೋದರ ಮಾವನಾದರೆ, ವಸುಂಧರಾ ರಾಜೇ ಸಿಂದಿಯಾ ಆಕೆಯ ಚಿಕ್ಕಮ್ಮ!

ದೀಪೇಂದ್ರ ಮತ್ತು ದೇವಯಾನಿ ಯುನೈಟೆಡ್ ಕಿಂಗ್‌ಡಮ್ ನಲ್ಲಿ ಭೇಟಿಯಾಗಿದ್ದು, ಅವರಿಬ್ಬರ ಮಧ್ಯ ಪ್ರೀತಿ ಮೂಡಿತ್ತು. ವರದಿಗಳ ಪ್ರಕಾರ, ರಾಜ ಕುಟುಂಬ ಇವರಿಬ್ಬರ ವಿವಾಹಕ್ಕೆ ವಿರೋಧ ವ್ಯಕ್ತಪಡಿಸಿತ್ತು. ಇದು ದೀಪೇಂದ್ರರನ್ನು ಅಸಮಾಧಾನಗೊಳಿಸಿ, ತನ್ನ ಕುಟುಂಬವನ್ನೇ ನಾಶಪಡಿಸುವ ತೀರ್ಮಾನ ಕೈಗೊಳ್ಳುವಂತೆ ಮಾಡಿತ್ತು. ಮಹಾರಾಣಿ ಐಶ್ವರ್ಯ ತನ್ನ ಮಗ ದೀಪೇಂದ್ರ, ಇನ್ನೊರ್ವ ರಾಜಕುಮಾರಿಯನ್ನು ಮದುವೆಯಾಗಬೇಕೆಂದು ಬಯಸಿದ್ದರು. ಈ ಘಟನೆಯ ಕುರಿತು ದೇವಯಾನಿಯ ಕುಟುಂಬವೂ ಸಂದೇಹ ವ್ಯಕ್ತಪಡಿಸಿತ್ತು. ವರದಿಗಳ ಪ್ರಕಾರ, ಆಕೆಯ ಕುಟುಂಬ ನೇಪಾಳದ ರಾಜವಂಶಕ್ಕಿಂತಲೂ ಹೆಚ್ಚಿನ ಶ್ರೀಮಂತಿಕೆ ಹೊಂದಿತ್ತು. ಒಂದು ವೇಳೆ ದೇವಯಾನಿ ಏನಾದರೂ ದೀಪೇಂದ್ರ ಜೊತೆ ವಿವಾಹವಾದರೆ, ಆಕೆಯ ಜೀವನ ಶೈಲಿ ಕೆಳಮಟ್ಟಕ್ಕೆ ಇಳಿಯಬಹುದು ಎಂದು ಆಕೆಯ ಕುಟುಂಬ ಅಭಿಪ್ರಾಯ ಪಟ್ಟಿತ್ತು. ಇನ್ನಷ್ಟು ವರದಿಗಳ ಪ್ರಕಾರ, ಜೂನ್ 1ರಂದು ನಡೆದ ಪಾರ್ಟಿಯಲ್ಲಿ ದೀಪೇಂದ್ರ, ಅತಿಥಿಯೊಬ್ಬರೊಡನೆ ವಾದಿಸಿದ್ದು, ತನ್ನ ಕುಟುಂಬದತ್ತ ಬಂದೂಕು ಚಾಚುವ ವೇಳೆಗೆ ಸಾಕಷ್ಟು ಮದ್ಯ ಸೇವಿಸಿದ್ದರು ಎನ್ನಲಾಗಿತ್ತು.

ಫ್ಲಾಷ್ ಬ್ಯಾಕ್ ಮುಗೀತು. ಈಗ ರಾಜರ ಕತೆ ಯಾಕೆ ಪುನರಾವರ್ತನೆ ಆಯಿತೆಂದರೆ, ಪ್ರಧಾನ ಮಂತ್ರಿ ಕೆ.ಪಿ ಶರ್ಮಾ ಓಲಿ ಅವರನ್ನು ಜೆನ್-ಜಿ ಪ್ರತಿಭಟನಾಕಾರರು ಪದಚ್ಯುತಿಗೊಳಿಸುವ ಮುನ್ನ, ಅವರು ಮಾಜಿ ಅರಸ ಗ್ಯಾನೇಂದ್ರ, ರಾಜಾಡಳಿತ ಪರ ಪ್ರತಿಭಟನೆಗಳಲ್ಲಿ ಹಿಂಸಾಚಾರಕ್ಕೆ ಕುಮ್ಮಕ್ಕು ನೀಡಿದ್ದರು ಎಂದು ಆರೋಪಿಸಲಾಗಿತ್ತು.

ಕಳೆದ ಮಾರ್ಚ್ 28ರಂದು ರಾಜಾಡಳಿತ ಪರವಾಗಿ ನಡೆದ ಪ್ರತಿಭಟನೆಗಳಲ್ಲಿ ತಲೆದೋರಿದ ಹಿಂಸಾಚಾರ ಕುರಿತು ಸಂಸತ್ತಿನಲ್ಲಿ ಮಾತನಾಡಿದ ಓಲಿ, ಈ ಹಿಂಸಾಚಾರಕ್ಕೆ ಗ್ಯಾನೇಂದ್ರ ಅವರೇ ಕಾರಣ ಎಂದು ಆರೋಪಿಸಿದ್ದ ಪ್ರಧಾನಿ ಓಲಿ, ಗ್ಯಾನೇಂದ್ರ ಅವರು ಜನರ ಸಾವಿಗೆ ಕುಮ್ಮಕ್ಕು ನೀಡುವ ನಾಯಕ , ಇತಿಹಾಸ ಅವರನ್ನು ತಿರಸ್ಕರಿಸಿದ್ದರೂ ಈಗ ಮತ್ತೊಮ್ಮೆ ನೇಪಾಳದ ರಾಜನಾಗುವ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಆರೋಪಿಸಿದ್ದರು! ಇವತ್ತೂ ಕೂಡ ಹಿಂಸಾಚಾರಕ್ಕೆ ಗ್ಯಾನೇಂದ್ರನೇ ಕಾರಣ, ಇದರ ಹೊಣೆಯನ್ನು ಅವರೇ ಹೊರಬೇಕು ಎಂದಿದ್ದಾರೆ, ಓಲಿ!! ☯

---

7 ☞

ಗೊಂಡಿತು. ಆದರೆ, ವಾಸ್ತವ ವಿಚಾರ ಬಹಳಷ್ಟು ಆಳವಾಗಿದೆ. ನೇಪಾಳದ ಜನರೇಶನ್, ಅಂದರೆ, 13ರಿಂದ 28ರ ಹರೆಯದ ಯುವ ಜನರು ಅದೇ ಭ್ರಷ್ಟ, ವಯಸ್ಸಾದ ಹಳೆ ರಾಜಕಾರಣಿಗಳ ಆಡಳಿತದಿಂದ ರೋಸಿ ಹೋಗಿದ್ದಾರೆ. ಈ ಹಳೇ ರಾಜಕಾರಣಿಗಳು ಕಳೆದ ಎರಡು ದಶಕಗಳಿಂದ ಸಂಗೀತ ಕುರ್ಚಿಯ ರೀತಿಯಲ್ಲಿ ಅಧಿಕಾರವನ್ನು ತಾವೇ ಒಬ್ಬರ ನಂತರ ಒಬ್ಬರಂತೆ ಹಂಚಿಕೊಳ್ಳುತ್ತಲೇ ಬಂದಿದ್ದಾರೆ.

ಅಲ್ಲಿನ ಯುವ ಜನರ ಅವಶ್ಯಕತೆಗಳನ್ನು ಪೂರೈಸಲು ಆಡಳಿತ ಎಷ್ಟರಮಟ್ಟಿಗೆ ವಿಫಲವಾಗಿದೆ ಎನ್ನುವುದರ ಸ್ಪಷ್ಟ ಚಿತ್ರಣ ಒದಗಿಸುತ್ತವೆ. 15ರಿಂದ 24 ವರ್ಷದ ಯುವ ಜನರ ನಿರುದ್ಯೋಗ ಪ್ರಮಾಣ 20%ಕ್ಕಿಂತಲೂ ಹೆಚ್ಚಾಗಿದ್ದು, 82% ಉದ್ಯೋಗಿಗಳು ಅನೌಪಚಾರಿಕ ಉದ್ಯೋಗಗಳನ್ನು ಹೊಂದಿದ್ದಾರೆ. ಇದೆಲ್ಲದರ ಪರಿಣಾಮವಾಗಿ, ಯುವ ನೇಪಾಳಿಗಳು ತಮ್ಮ ದೇಶದಲ್ಲಿ ಭವಿಷ್ಯವಿಲ್ಲ ಎಂಬ ಆಲೋಚನೆಗೆ ತಲುಪಿದ್ದಾರೆ. ಬಹಳಷ್ಟು ಜನರು ಉದ್ಯೋಗಕ್ಕಾಗಿ ವಿದೇಶಗಳಿಗೆ ತೆರಳಿದ್ದು, ಅವರು ಮನೆಗೆ ಕಳುಹಿಸುವ ಹಣವೇ ದೇಶದ ಜಿಡಿಪಿಗ 33%ಕ್ಕೂ ಹೆಚ್ಚಿನ ಪಾಲು ಹೊಂದಿದೆ. ಈ ವಿಚಾರ ನೇಪಾಳ ತನ್ನ ಅತ್ಯಂತ ಹೆಚ್ಚಿನ ಉತ್ಪಾದಕತೆ ಹೊಂದಿರುವ ಪ್ರಜೆಗಳಿಗೆ ದೇಶದಲ್ಲಿ ಅವಕಾಶಗಳನ್ನು ಸೃಷ್ಟಿಸುವ ಬದಲಾಗಿ, ಅವರನ್ನು ರಫ್ತು ಮಾಡುವುದರ ಮೇಲೆ ಅವಲಂಬಿತವಾಗಿರುವ ದುರದೃಷ್ಟಕರ ಬೆಳವಣಿಗೆಯನ್ನು ತೋರಿಸುತ್ತಿದೆ.

ಈ ಹೋರಾಟವನ್ನು ಇನ್ನಷ್ಟು ಮಹತ್ವವಾಗಿಸುವ ವಿಚಾರವೆಂದರೆ, ವಿವಿಧ ಪಕ್ಷಗಳಿಗೆ ಸೇರಿರುವ ನೇಪಾಳದ ಯುವಕರೂ ಈಗ ವೃದ್ಧ, ಭ್ರಷ್ಟ ನಾಯಕರ ವಿರುದ್ಧ ಹೋರಾಟದಲ್ಲಿ ಒಗ್ಗೂಡಿ ಧುಮುಕಿದ್ದಾರೆ. ಈಗಾಗಲೇ ವೈರಲ್ ಆಗಿರುವ 'ನೆಪೋ ಕಿಡ್ಸ್' ಚಳವಳಿ (ಅಂದರೆ, ಸಾಮಾನ್ಯ ಜನರು ಕಷ್ಟಪಡುತ್ತಾ ಜೀವನ ನಡೆಸುತ್ತಿರುವಾಗ, ರಾಜಕಾರಣಿಗಳ ಮಕ್ಕಳು ತಮ್ಮ ಶ್ರೀಮಂತ ಜೀವನಶೈಲಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದನ್ನು ಗುರಿಯಾಗಿಸುವುದು) ತಮ್ಮ ಭವಿಷ್ಯವನ್ನು ಶ್ರೀಮಂತ ವರ್ಗ ಕಿತ್ತುಕೊಳ್ಳುತ್ತಿರುವುದರ ಕುರಿತು ನೇಪಾಳದ ಯುವ ಜನತೆ ಹೊಂದಿರುವ ಆಕ್ರೋಶವನ್ನು ಸಮರ್ಥವಾಗಿ ಪ್ರದರ್ಶಿಸಿತ್ತು. ಈ ಪ್ರಕ್ರಿಯೆ ಕೇವಲ ನೇಪಾಳಕ್ಕೆ ಸೀಮಿತವಾದುದಲ್ಲ, ಭಾರತದಲ್ಲೂ ಅಧಿಕಾರ ಮತ್ತು ಸಂಪತ್ತನ್ನು ಸಂಪಾದಿಸುವುದಕ್ಕಿಂತಲೂ ವಂಶಪಾರಂಪರ್ಯವಾಗಿ ಅನುಭವಿಸುತ್ತಾ ಬಂದಿರುವ ರಾಜಕೀಯ ಕುಟುಂಬಗಳ ಕುರಿತು ನಾಗರಿಕರ ಮನಸ್ಸಿನಲ್ಲಿ ಇಂತಹದ್ದೇ ಅಸಮಾಧಾನವಿದೆ. ರಾಷ್ಟ್ರ ಮಟ್ಟದಲ್ಲಿ ಗಾಂಧಿ ಕುಟುಂಬದಿಂದ, ವಿವಿಧ ರಾಜ್ಯಗಳಲ್ಲಿ ಸ್ಥಳೀಯ ರಾಜಕಾರಣದಲ್ಲಿ ರಾಜಕೀಯ ಕುಟುಂಬಗಳ ಕುರಿತೂ ಇಂತಹ ಅಸಮಾಧಾನವನ್ನು ಕಾಣಬಹುದು.


ಸಾಮಾಜಿಕ ಜಾಲತಾಣಗಳ ನಿಷೇಧದ ಬಳಿಕ ನಡೆದ ಪ್ರತಿಭಟನೆಗಳು, ಅದರ ಬೆನ್ನಲ್ಲೇ ಉಂಟಾದ ಹಿಂಸಾಚಾರಗಳು ದುರಂತಮಯವಾಗಿದ್ದರೂ, ಮೊದಲೇ ಊಹಿಸಲು ಸಾಧ್ಯವಿತ್ತು. ಪ್ರತಿಭಟನಾಕಾರರು ಸಂಸತ್ ಕಟ್ಟಡದ ಕಡೆಗೆ ನುಗ್ಗಲು ಪ್ರಯತ್ನ ನಡೆಸಿದಾಗ, ಭದ್ರತಾ ಪಡೆಗಳು ಸಜೀವ ಗುಂಡುಗಳು, ಅಶ್ರುವಾಯು, ಮತ್ತು ಜಲ ಫಿರಂಗಿಗಳನ್ನು ಬಳಸಿ ಅವರನ್ನು ಹಿಮ್ಮೆಟ್ಟಿಸಲು ಪ್ರಯತ್ನಿಸಿದರು. ದೇಶದ ಯುವ ಜನರು ಗುಂಡೇಟು ತಿಂದು ರಸ್ತೆಯಲ್ಲೇ ಕುಸಿಯುತ್ತಿರುವ ದೃಶ್ಯ ಪ್ರಧಾನಿ ಓಲಿ ರಾಜೀನಾಮೆ ಮತ್ತು ಸಮಗ್ರ ರಾಜಕೀಯ ಬದಲಾವಣೆಗೆ ಆಗ್ರಹ ಹೆಚ್ಚಾಗುವಂತೆ ಮಾಡಿತು. ಸಾಮಾಜಿಕ ಜಾಲತಾಣಗಳ ಮೇಲಿನ ನಿಷೇಧ ಹಿಂಪಡೆದ ಬಳಿಕವೂ, ಓಲಿ ರಾಜೀನಾಮೆ ನೀಡಿದ ನಂತರವೂ, ಪ್ರತಿಭಟನಾಕಾರರು ಸಂಸತ್ತು ವಿಸರ್ಜನೆಯಾಗಿ, ದೇಶದಲ್ಲಿ ಹೊಸದಾಗಿ ಚುನಾವಣೆ ನಡೆಯಬೇಕೆಂದು ಆಗ್ರಹಿಸುತ್ತಿದ್ದಾರೆ.

ಭಾರತದ ಪಾಲಿಗೂ ನೇಪಾಳದ ಬಿಕ್ಕಟ್ಟು ಒಂದಷ್ಟು ಪಾಠವನ್ನೂ ಕಲಿಸುತ್ತಿದೆ. ನೇಪಾಳದಂತೆಯೇ, ಭಾರತದಲ್ಲೂ ಯುವ ಜನರ ಜೊತೆ ಸಂಪರ್ಕವೇ ಹೊಂದಿರದ, ವಯಸ್ಸಾದ ರಾಜಕೀಯ ನಾಯಕತ್ವವಿದೆ. ಭಾರತದ ಜನಸಂಖ್ಯೆಯ ಬಹುತೇಕ 65% ಜನರು 35ಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಾರೆ. ಆದರೆ, ರಾಜಕೀಯ ಅಧಿಕಾರ ಇಂದಿಗೂ 60, 70, ಮತ್ತು 80ರ ಹರೆಯದ ವೃದ್ಧ ನಾಯಕರ ಬಳಿಯಲ್ಲೇ ಇದೆ. ಕೋಟ್ಯಂತರ ಯುವ ಭಾರತೀಯರು ನಿರುದ್ಯೋಗ ಮತ್ತು ಹೆಚ್ಚುತ್ತಿರುವ ಹಣದುಬ್ಬರದ ನಡುವೆ ಒದ್ದಾಡುತ್ತಿರುವಾಗ, ರಾಜಕಾರಣಿಗಳ ಮಕ್ಕಳು, ಮೊಮ್ಮಕ್ಕಳು ಅದ್ದೂರಿಯಾಗಿ ಜೀವನ ನಡೆಸುವ ನೋಟವೇ ಅಸಮಾಧಾನ, ಆಕ್ರೋಶದ ಕಿಡಿ ಹಚ್ಚಬಲ್ಲದು. ಒಂದು ವೇಳೆ ಆರ್ಥಿಕ ಅವಕಾಶಗಳು ಜನಸಂಖ್ಯಾ ವಾಸ್ತವಗಳಿಗೆ ಸರಿ ಹೊಂದದಿದ್ದರೆ, ಭಾರತವೂ ಯುವ ಜನರ ಆಕ್ರೋಶ ಸ್ಫೋಟಗೊಳ್ಳುವುದನ್ನು ಕಾಣಬೇಕಾಗಿ ಬಂದೀತು.

ಇಂತಹ ಪ್ರತಿಭಟನೆಗಳನ್ನು ಆಯೋಜಿಸಲು ಸಾಮಾಜಿಕ ಜಾಲತಾಣಗಳು ಎಷ್ಟು ಪಾತ್ರ ವಹಿಸುತ್ತವೆ ಎನ್ನುವುದು ಸಹ ಇಂದಿನ ಡಿಜಿಟಲ್ ಯುಗದಲ್ಲಿ ಸರ್ಕಾರಗಳು ಎಷ್ಟು ವೇಗವಾಗಿ ಅಧಿಕಾರ ಕಳೆದುಕೊಳ್ಳಬಹುದು ಎನ್ನುವುದನ್ನು ರೂಪಿಸಬಲ್ಲದು. ಇಂತಹ ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸಿ, ಆ ಮೂಲಕ ವಿರೋಧವನ್ನು ಮೌನಗೊಳಿಸಲು ಪ್ರಯತ್ನ ನಡೆಸಿದರು. ಆದರೆ, ಇದು ಉರಿಯುವ ಬೆಂಕಿಗೆ ಇನ್ನಷ್ಟು ತೈಲ ಸುರಿದಂತಾಯಿತು. ಸರ್ವಾಧಿಕಾರಿ ಕಾರ್ಯತಂತ್ರಗಳು ಹಿಂದಿನ ಕಾಲದಲ್ಲಿ ಕೆಲಸ ಮಾಡುತ್ತಿದ್ದವಾದರೂ, ಇಂದಿನ ತಂತ್ರಜ್ಞಾನ ಬಳಕೆದಾರ ಯುವ ಸಮುದಾಯದ ಮುಂದೆ ಇಂತಹ ತಂತ್ರಗಳು ತಿರುಮಂತ್ರವಾಗುತ್ತವೆ! ☯

# ಡಿಸ್ಕೋ ಶಾಂತಿ ಮತ್ತೆ ಬಂದ್ರು!





ಶ್ರೀಹರಿ - ಶಾಂತಿ

ನಿಮಗೆ ನಟಿ ಶಾಂತ ಕುಮಾರಿ ಗೊತ್ತ.... ಶಾಂತ ಕುಮಾರಿ ಅಂದ್ರೆ ಯಾರಿಗೂ ಗೊತ್ತಾಗ್ಲಿಕ್ಕಿಲ್ಲ ಬಿಡ್ರಿ. ಅದೇ ಡಿಸ್ಕೋ ಶಾಂತಿ ಅಂದ್ರೆ, ಎಲ್ಲರಿಗೂ ಗೊತ್ತು! ಒಂದು ಕಾಲದಲ್ಲಿ ಐಟಂ ಡ್ಯಾನ್ಸ್‌ನಿಂದಲೇ ಪಡ್ಡೆ ಹುಡುಗರ ನಿದ್ದಗೆಡಿಸಿದ್ದವರು ಡಿಸ್ಕೋ ಶಾಂತಿ. ಧ'ವ'ೃರಿ ಧಮ್ಮಮ್ಮ... ನಾ ಡಿಸ್ಕೋ ರುಕ್ಕಮ್ಮ..... ಅವರು ಬಣ್ಣದ ಜಗತ್ತಿಂದ ದೂರ ಸರಿದು 28 ವರ್ಷಗಳೇ ಕಳೆದಿವೆ. ಆದರೆ 28 ವರ್ಷಗಳ ಬಳಿಕ ಮತ್ತೆ ಬಣ್ಣದ ಜಗತ್ತಿಗೆ ಕಾಲಿಡುತ್ತಿದ್ದಾರೆ. ರಾಘವ ಲಾರೆನ್ಸ್ ಅವರ ಸೋದರನ ಚೊಚ್ಚಲ ಸಿನಿಮಾ 'ಬುಲ್ಲೆಟ್'ನಲ್ಲಿ ನಟಿಸುತ್ತಿದ್ದಾರೆ.

80ರ ದಶಕದಲ್ಲಿ ಹೆಚ್ಚು ಸದ್ದು ಮಾಡಿದ್ದ ಐಟಂ ಡ್ಯಾನ್ಸರ್ ಡಿಸ್ಕೋ ಶಾಂತಿ, ದಕ್ಷಿಣ ಭಾರತದ ಬಹುತೇಕ ಎಲ್ಲ ಸ್ಟಾರ್ ನಟರ ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. ಕನ್ನಡ, ತಮಿಳು, ತೆಲುಗು, ಹಿಂದಿ ಹಾಗೂ ಮಲಯಾಳಂ, ಒರಿಯಾ ಸೇರಿ ಸುಮಾರು 900ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಡಿಸ್ಕೋ ಶಾಂತಿ ಬಣ್ಣ ಹಚ್ಚಿದ್ದಾರೆ.

ಆದರೆ, ಅವರು ಹೆಚ್ಚಾಗಿ ಅಭಿನಯಿಸಿದ್ದು ತಮಿಳು ಹಾಗೂ ತೆಲುಗು ಸಿನಿಮಾಗಳಲ್ಲಿ, ಕನ್ನಡದ ಸತ್ಕಾರ, ಆಫ್ರಿಕಾದಲ್ಲಿ ಶೀಲಾ, ಮಿ.ರಾಜಾ, ಹುಲಿ ಹೆಬ್ಬುಲಿ, ಜಯಸಿಂಹ, ಆಸೆ, ಕುರುಕ್ಷೇತ್ರ, ಸಂಗ್ರಾಮ, ಅಂಜದ ಗಂಡು, ಸಾಂಗ್ಲಿಯಾನ, ಸಿಬಿಐ ಶಂಕರ್, ನಮ್ಮೂರ ರಾಜ, ಅವತಾರ ಪುರುಷ, ಪದ್ಮವ್ಯೂಹ, ಒಂಟಿ ಸಲಗ, ನಮ್ಮೂರ ಹಮ್ಮೀರ, ಎಸ್ಪಿ ಭಾರ್ಗವಿ ಸೇರಿದಂತೆ ಹಲವಾರು ಕನ್ನಡ ಸಿನಿಮಾಗಳಲ್ಲಿ ನೃತ್ಯ ಮಾಡಿದ್ದಾರೆ.



ಡಿಸ್ಕೋ ಶಾಂತಿ 1965 ಆಗಸ್ಟ್ 28 ರಂದು ತಮಿಳು ನಾಡಿನ ಚೆನ್ನೈನಲ್ಲಿ ಹುಟ್ಟಿದವರು. ತಮಿಳು ಚಿತ್ರರಂಗದ ಪ್ರಸಿದ್ಧ ನಟ ಸಿ.ಎಲ್. ಆನಂದನ್ ಅವರ ಮಗಳು. ಅವರ ಸಹೋದರಿ ಲಲಿತಕುಮಾರಿ ಅವರು ಕೂಡ ಚಿತ್ರನಟಿ. ನಮ್ಮ ಪ್ರಕಾಶ್ ರೈ ಮೊದಲ ಪತ್ನಿ ಕೂಡ.

ತಂದೆಯ ಮರಣಾ ನಂತರ ಕುಟುಂಬದ ಜವಾಬ್ದಾರಿ ಹೊತ್ತು, ಸಣ್ಣ ವಯಸ್ಸಿನಲ್ಲೇ ಚಿತ್ರರಂಗಕ್ಕೆ ಕಾಲಿಟ್ಟವರು. ನಟಿಯಾಗಿ ಸಿನಿಮಾ ಪಯಣ ಆರಂಭಿಸಿ, ಗ್ಲಾಮರ್ ನಟಿಯಾಗಿ ಹೆಸರು ಮಾಡಿದವರು ಡಿಸ್ಕೋ ಶಾಂತಿ.

1983ರಿಂದ ಒಂದು ದಶಕಗಳ ಕಾಲ ಚಿತ್ರರಂಗವನ್ನು ಆಳಿದ್ದ ನಟಿ, 1996ರಲ್ಲಿ ಸಿನಿಮಾರಂಗದಲ್ಲಿ ಉತ್ತುಂಗದಲ್ಲಿರುವಾಗಲೇ, ತೆಲುಗು ನಟ ಶ್ರೀಹರಿ ಅವರನ್ನು ಪ್ರೀತಿಸಿ ಮದುವೆಯಾದರು. ಮದುವೆ ನಂತರ ಡಿಸ್ಕೋ ಶಾಂತಿ ಸಿನಿಮಾ ಕ್ಷೇತ್ರದಿಂದ ದೂರ ಸರಿದರು. ಈ ದಂಪತಿಗೆ ಮೂವರು ಮಕ್ಕಳು. ಒಬ್ಬಳು ಮಗಳು, ಇಬ್ಬರು ಪುತ್ರರು. ಆದರೆ ಮಗಳು ನಾಲ್ಕು ತಿಂಗಳ ಮಗುವಿದ್ದಾಗಲೇ ತೀರಿಕೊಂಡಳು. ಅವಳ ನೆನಪಿನಲ್ಲಿ ದಂಪತಿ ಅಕ್ಷರಾ ಫೌಂಡೇಶನ್ ಸ್ಥಾಪಿಸಿ, ಆ ಮೂಲಕ ಹಳ್ಳಿಗೆ ಶುದ್ಧ ಕುಡಿಯುವ ನೀರು ಹಾಗೂ ಶಾಲೆಗಳಿಗೆ ಮೂಲಸೌಕರ್ಯ ಒದಗಿಸುವಂತಹ ಸಾಮಾಜಿಕ ಕೆಲಸಗಳನ್ನ ಆರಂಭಿಸಿದರು. ಮೆಡ್ಚಲ್ ಜಿಲ್ಲೆಯ ನಾಲ್ಕು ಹಳ್ಳಿಗಳನ್ನು ಫೌಂಡೇಶನ್ ಮೂಲಕ ಡಿಸ್ಕೋ ಶಾಂತಿ ಅವರ ಕುಟುಂಬ ದತ್ತು ಪಡೆದು ಅಭಿವೃದ್ಧಿ ಪಡಿಸಿತ್ತು.

ಲಿವರ್ ಸಮಸ್ಯೆಯಿಂದ ಬಳಲುತ್ತಿದ್ದ ಪತಿ, ನಟ ಶ್ರೀಹರಿ ಅವರು 2013 ಆರ್...ರಾಜ್‌ಕುಮಾರ್ ಚಿತ್ರದ ಶೂಟಿಂಗ್ ಸಮಯದಲ್ಲಿ ತೀರಿಕೊಂಡಿದ್ದರು. ಸಂದರ್ಶನವೊಂದರಲ್ಲಿ ಅವರೇ ಹೇಳಿರುವಂತೆ, ಪತಿಯ ಮರಣ ನಂತರ ಡಿಸ್ಕೋ ಶಾಂತಿ ಅವರು ಖಿನ್ನತೆಗೆ ಜಾರಿದ್ದರು. ನೋವು ಮರೆಯಲು ಸಾಧ್ಯವಾಗದೆ ಮದ್ಯ ವ್ಯಸನಿಯಾಗಿದ್ದರು. ನಂತರ ಮಕ್ಕಳ ಭವಿಷ್ಯವನ್ನು ಯೋಚಿಸಿ ಕುಡಿಯುವುದನ್ನು ಬಿಟ್ಟಿದ್ದರು...

ಇದೀಗ ರಾಘವ ಲಾರೆನ್ಸ್ ಕೋರಿಕೆ ಮೇರೆಗೆ ಮತ್ತೆ ಬಣ್ಣ ಹಚ್ಚಿದ್ದಾರೆ. ನೋ ಡಾನ್ಸ್, ಓನ್ಲಿ ಆಕ್ಟಿಂಗ್! ಅಮ್ಮನಾಗಿಯೋ ಅತ್ತೆಯಾಗಿಯೋ ಅಥವಾ ಸೋಶಿಯಲ್ ವರ್ಕರ್ ಆಗಿಯೋ ಅಭಿನಯಿಸುತ್ತಾರೆ. ಅಂದುಕೊಂಡರೆ, ಶಾಂತಿ ಈ ಚಿತ್ರದಲ್ಲಿ ಮಾಂತ್ರಿಕಳಾಗಿ ಅಭಿನಯಿಸುತ್ತಿದ್ದಾರೆ! ಅಷ್ಟು ವರ್ಷಕಾಲ ಅರೆ ಬೆತ್ತಲೆ ನೃತ್ಯ



ಮಕ್ಕಳೊಂದಿಗೆ

ಮಾಡಿ ನಮ್ಮ ಚಳಿ ಬಿಡಿಸಿದ್ದ ಡಿಸ್ಕೋ ರುಕ್ಕಮ್ಮ ಈಗ ಮಂತ್ರವಾದಿ ಆಗಿ ಅದೇನು ಚಮತ್ಕಾರ ಮಾಡುತ್ತಾರೋ ಏನೋ, ಕಾದು ನೋಡಬೇಕು! ☯

# ಉಫೇ ಮಾದಪ್ಪ ಉಫೇ ಉಫೇ... ಏಳುಮಲೆ ಒಡೆಯನಿಗೆ ಉಫೇ ಉಫೇ



ಯಾವನ್ರೀ ಈ ಸ್ಕ್ರಿಪ್ಟ್ ಮಾಡ್ದೋನು? ಅವನಿಗೆ ವೀರಪ್ಪನ್ ಸತ್ತದ್ದು ಹೇಗೆ ಅಂತ ಗೊತ್ತಾ?? ಕಣ್ಣು ಆಪರೇಷನ್‌ಗೆ ಅಂತ ಹೋಗೋವಾಗ ಆಂಬುಲೆನ್ಸ್ ಟಾರ್ಗೆಟ್ ಮಾಡಿ ಆ ಕಣ್ಣಿಗೇ ಗುಂಡಿಟ್ಟಿದ್ದಲ್ಲಾ ನೆನಪಿದೆಯ??! ಆ ಆಂಬುಲೆನ್ಸಿಗೆ ಮುಂಚೆ ಇನ್ನೂ ಒಂದು ಆಂಬುಲೆನ್ಸ್ ಹೋಗತ್ತೆ... ಅಲ್ಲಿರ್ತಾನೆ ಈ ಕತೆಯ ಹೀರೋ.... ಒಂದೇ ಒಂದು ಕ್ಷಣ ಆಚೀಚೆ ಆಗಿದ್ರೂ ಉಡೀಸ್... ಏಳುಮಲೆ ನೋಡಿಕೊಂಡು ಟಾಕೀಸ್ ಹೊರಗಡೆ ಬಂದ ಬಹುತೇಕ ಜನ ಈಗಂತ ಉದ್ಘರಿಸುತ್ತಿದ್ದಾರೆ!

ವೀರಪ್ಪನ್ ಕಾಡು, ಅವನಿಗಾಗಿ ಹುಡುಕಾಡೋ ಪೊಲೀಸರು. ಇದರ ನಡುವೆ ಪ್ರೇಮಿಗಳು. ಮಾದೇಶ್ವರ ಬೆಟ್ಟ ಸ್ಟೇಷನ್ ಲಾಗೋ ಲಾಕಪ್ ಡೆತ್... ಉಫ್ ಒಂದಕ್ಕೊಂದನ್ನು ಹೆಣೆದ ಮೋಸ್ಟ್ ಬ್ರಿಲಿಯಂಟ್ ಚಿತ್ರಕತೆ!!! ಮೊದಲೇ ಉಗುರು ಕಚ್ಚೋ ಅಭ್ಯಾಸ ಇರೋ ನನಗೆ ಅರ್ಧ ಉಗುರೆಲ್ಲ ಕಿತ್ತು ರಕ್ತ ಬರೋದೊಂದ್ ಬಾಕಿ... ಈವರೆಗಿನ ಕತೆ ಅಂದ್ರೆ ನಿಧಾನಕ್ಕೆ ಶುರುವಾಗಿ ಮಧ್ಯದಲ್ಲಿ ಬಿಸಿ ಏರಿ ಆಮೇಲವ ಡ್ರಾಮಾ ಟೆನ್ಷನ್ನು ಎಲ್ಲ ಶುರುವಾಗುತ್ತವೆ. ಇಲ್ಲಿ ಹಾಗಲ್ಲ. ಮೊದಲ 15 ನಿಮಿಷ ಬಿಟ್ಟರೆ ಉಳಿದೆಲ್ಲ ನಿಮಿಷ ಹೈ ಟೆನ್ಶನ್.

ಏಳುಮಲೆ ಹೆಸರಿಗೆ ತಕ್ಕಂಗೆ ತಾರಕದಲ್ಲೆ ಶುರು ಕತೆ.... ಮೊದಲಿಂದ ಕೊನೆವರೆಗೂ ಒಂದೇ ಸಮ ಶಿವತಾಂಡವ. ನಿಲ್ಲದ ಶಿವ ಡಮರುಗ. ಅದಕ್ಕೆ ತಕ್ಕಂತಾ ಭರ್ಜರಿ ಬಿಜಿಎಂ.... ತರುಕ್ ಸುಧೀರ್ ಗರಡಿಯಲ್ಲಿ ಪಳಗಿದ ಪುನೀತ್ ರಂಗಸ್ವಾಮಿ ನಿರ್ದೇಶನದ ಸಿನೆಮಾವಿದು. ಇಮ್ಮಾನ್ ಮ್ಯೂಸಿಕ್ ಡೈರೆಕ್ಷನ್ ನೆಕ್ಸ್ಟ್ ಲೆವೆಲ್.

ಇಡೀ ಸಿನೆಮಾ ಚಕಚಕಚಕಚಕಾಂತ ಹೋಗುತ್ತೆ. ಒಂದು ಕ್ಷಣಾನೂ ಅತ್ತಾಗಿತ್ತಾಕ್ ಕದ್ಲಂಗಿಲ್ಲ, ಉಸಿರು ಬಿಗಿಹಿಡಿದು, ಉಗುರು ಕಚ್ತಾ ನೋಡ್ತಾ ಇರಬೇಕು ಕೊನೆವರೆಗೂ. ಏಳುಮಲೆ ರಿಲೀಸ್‌ಗೂ ಮುನ್ನಾ ದಿನ ನಿರ್ಮಾಪಕ ತರುಕ್ ಸುಧೀರ್, ನಾವು ಸೆಲೆಬ್ರಿಟಿ ಷೋ ಮಾಡಲ್ಲ, ಮೊದಲ ದಿನ ದುಡ್ ಕೊಟ್ ನೋಡೋ ಪ್ರೇಕ್ಷಕರೇ ನಮ್ ಸಲೆಬ್ರಿಟಿಗಳು ಅಂದ್ರಲ್ಲ, ಆವತ್ತು ಆ ಮಾತು ಹೃದಯಕ್ಕೆ ತಾಗಿತ್ತು.

ಇನ್ನು 'ಏಳುಮಲೆ' ನಮ್ಮ ಮಾದಪ್ಪನ ನೆಲೆ! ಸರಿ, ಏಳುಮಲೆ ನೋಡೇ ಬಿಡುವಾಂತ ನರ್ತಕಿ ಟಾಕೀಸ್ ಒಕ್ಕಿದ್ದಾಯ್ತು. ಅದ್ಭುತ ಅನುಭವ! ಈವರೆಗಿನ ಪ್ರೀತಿ ಪ್ರೇಮ ಪರಾಕಾಷ್ಟೆ ಕುರಿತ ಶ್ರೇಷ್ಠ ಸಿನಿಮಾಗಳ ಸಾಲಿಗೆ ಹೊಸ ಸೇರ್ಪಡೆ ಏಳುಮಲೆ!

ನಾಯಕ ನಟ ರಾಣಾ ಪಾತ್ರವೇ ತಾನಾಗಿ ಅಭಿನಯಿಸಿದ್ದಾರೆ. ನಾಯಕಿ ಪ್ರಿಯಾಂಕ ಮೊದಲ ಚಿತ್ರದಲ್ಲೇ ತನ್ನ ಮುಗ್ಧತೆ ಮೆರೆದೆ ಸಿಕ್ಸರ್ ಭಾರಿಸಿದ್ದಾಳೆ. ನಾಗಾಭರಣರ ಪೊಲೀಸ್ ಮಹದೇವಪ್ಪ ಪಾತ್ರವಂತೂ ಎಕ್ಸಲೆಂಟ್! ಮಹದೇಶ್ವರ ಬೆಟ್ಟವನ್ನು ವೈಭವೀಕರಿಸದೇ ಕತೆಗೆ ತಕ್ಕ ಆವರಣವಾಗಿ ಬಳಸಿಕೊಂಡಿರುವುದರಿಂದ ಆ ದಟ್ಟ ಕಾಡೇ ಇಲ್ಲೊಂದು ದೊಡ್ಡ ಪಾತ್ರವಾಗಿದೆ.

ಮಾದಪ್ಪನದು ಇಲ್ಲಿ ವಿಧಿಯ ಪಾತ್ರ! ಈ ಚಿತ್ರದ ಹಾಡುಗಳು, ಪ್ರೇಮ ವಿರಹ ಅಂತ ಕತೆಯಾಚೆ ಹೋಗದೇ ಕತೆಯೊಳಗೇ ಬೆರೆತಿವೆ. ಕಡೆಯ ಹಾಡಿನಲ್ಲಿ ಕಂಡಾಯ ಪದಬಳಕೆ ಬಗ್ಗೆ ಕೆಲವರು ಪ್ರಶ್ನಿಸಿದ್ದಾರೆ. ಹೌದು, ಅದು ಪವಾಡ ಪುರುಷ ಸಿದ್ದಪ್ಪಾಜಿ ಹಾಡಿನ ಸಾಲು. ಇಲ್ಲಿ ಮಾದಪ್ಪನಿಗೆ ಉಲ್ಲೇಖವಾಗಿದೆ. ಅದೇನು ದೊಡ್ಡ ಮಿಸ್ಟೇಕ್ ಅಲ್ಲ.

ಈಚೆಗಷ್ಟೆ ಕಮಲ್ ಹಾಸನ್ ಮಾತಿಂದ ತಮಿಳು ವರ್ಸಸ್ ಕನ್ನಡ ಅಂತ ಜಗ್ಗಾಟವಾಯ್ತಲ್ಲ.... ಏಳುಮಲೆ ಸಿನಿಮಾ ಕತೆಯೇ ತಮಿಳು ಪೆಣ್ - ಕನ್ನಡ ಗಂಡ್ ಕತೆ! ಪಾಲಾರವ ಬಾರ್ಡರಿನಲ್ಲಿ ಇಬ್ಬರು ಪ್ರೇಮಿಗಳು ಬೇಡಿ ನಿಂತರೆ ಹಾರಿಸಬಹುದೇ ಭಾಷೆಯ ಗುಂಡ್? ನೆವರ್! ಅದಿರಲಿ, ಏಳುಮಲೆ ಒಳ್ಳೆ ಸಿನಿಮಾ. ಮಿಸ್ ಮಾಡದೇ ನೋಡಿ. ಕೊನೆಯದಾಗಿ, ಅಭಿನಂದನೆಗಳು ಇಡೀ ಚಿತ್ರತಂಡಕ್ಕೆ! ಉಫೇ ಅನ್ನಿ ಮಾದಪ್ಪಂಗೆ!! ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 14.9.2025

# ಸಾಹಸಸಿಂಹ ವಿಷ್ಣುವರ್ಧನ್, ಪದ್ಮಶ್ರೀ ಸರೋಜಾದೇವಿಗೆ ಮರಣೋತ್ತರ 'ಕರ್ನಾಟಕ ರತ್ನ' ಪ್ರಶಸ್ತಿ...

ವಿಷ್ಣು ಅಭಿಮಾನಿಗಳ ದಶಕಗಳ ಬೇಡಿಕೆ ಫಲಿಸಿದ್ದು ರಾಜ್ಯ ಸರ್ಕಾರ ಸಾಹಸಸಿಂಹ ವಿಷ್ಣುವರ್ಧನ್ ಹಾಗೂ ಹಿರಿಯ ನಟಿ ಬಿ. ಸರೋಜಾದೇವಿ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ಘೋಷಿಸಿದೆ. ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡುವ ಬಗ್ಗೆ ಮೊನ್ನಿನ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಇನ್ನು ಪ್ರಶಸ್ತಿಯನ್ನು ಯಾವಾಗ, ಎಲ್ಲಿ ಪ್ರದಾನ ಮಾಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ಧರಿಸಲಿದೆ.

ಮೊನ್ನಿನ ಸಂಪುಟ ಸಭೆಯಲ್ಲಿ ರಾಷ್ಟ್ರಕವಿ ಕುವೆಂಪು ಅವರಿಗೆ 'ಭಾರತ ರತ್ನ' ನೀಡಬೇಕೆಂದು ರಾಜ್ಯ ಸರ್ಕಾರದ ವತಿಯಿಂದ ಕೇಂದ್ರಕ್ಕೆ ಪತ್ರ ಕಳುಹಿಸಲು ನಿರ್ಣಯಿಸಲಾಯಿತು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದ್ದಾರೆ. ಅಂದಹಾಗೆ, ಹಿರಿಯ ನಟ ಭಾರತಿ ವಿಷ್ಣುವರ್ಧನ್, ಅನಿರುದ್ ಹಾಗೂ ಹಿರಿಯ ನಟಿಯರಾದ ಜಯಮಾಲಾ, ಶ್ರುತಿ, ಮಾಳವಿಕಾ ಅವಿನಾಶ್ ಅವರು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ವಿಷ್ಣುವರ್ಧನ್ ಮತ್ತು ಬಿ. ಸರೋಜಾದೇವಿಗೆ ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ನೀಡಬೇಕು ಎಂದು ಮನವಿ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ವಿಷ್ಣುವರ್ಧನ್ ಅವರು 'ವಂಶವೃಕ್ಷ' ಚಿತ್ರದಲ್ಲಿ ಬಾಲನಟನಾಗಿ




ನಟಿಸುವ ಮೂಲಕ ಬಾಲ್ಯದಲ್ಲೇ ಚಿತ್ರರಂಗ ಪ್ರವೇಶಗೈದು, ಮುಂದೆ ಸಿನಿ ದಿಗ್ಗಜ ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ನಾಗರಹಾವು' ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಾಯಕ ನಟನಾಗಿ ಕಾಣಿಸಿಕೊಂಡರು. ಈ ಚಿತ್ರ ಬ್ಲಾಕ್ ಬಸ್ಟರ್ ಚಿತ್ರವಾಗಿದ್ದು ಹೀರೋ ಆಗಿ ಮೊದಲ ಪ್ರಯತ್ನದಲ್ಲೇ ವಿಷ್ಣುವರ್ಧನ್ ದೊಡ್ಡ ಅಭಿಮಾನಿ ಬಳಗವನ್ನು ಸೃಷ್ಟಿಸಿಕೊಂಡರು. ಕನ್ನಡ ತಮಿಳು, ತೆಲುಗು, ಮಲಯಾಳ ಮತ್ತು ಹಿಂದಿ ಭಾಷೆಗಳಲ್ಲಿ ಸುಮಾರು 220 ಸಿನಿಮಾಗಳಲ್ಲಿ ವಿಷ್ಣುವರ್ಧನ್ ನಟಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯವು 2005ರಲ್ಲಿ ವಿಷ್ಣುವರ್ಧನ್ ಅವರಿಗೆ ಗೌರವ ಡಾಕ್ಟರೇಟ್ ಕೊಟ್ಟು ಗೌರವಿಸಿತ್ತು.

ಇನ್ನು, ಹಿರಿಯ ನಟಿ ಬಿ. ಸರೋಜಾದೇವಿ. ಇವರು ಒಂದು ಕಾಲದಲ್ಲಿ ಕನ್ನಡ, ತಮಿಳು ಬೆಳ್ಳಿತೆರೆಯಲ್ಲಿ ಅಮೋಘವಾಗಿ ಬೆಳಗಿದ ಅಭಿನೇತ್ರಿ. ಚತುರ್ಭಾಷಾ ನಟಿಯಾಗಿ ಗುರುತಿಸಿಕೊಂಡರು. ಇವರು ಸುಮಾರು 200 ಚಿತ್ರಗಳಲ್ಲಿ ನಟಿಸಿದ್ದಾರೆ. ಕನ್ನಡದಲ್ಲಿ 'ಅಭಿನಯ ಸರಸ್ವತಿ' ಮತ್ತು ತಮಿಳಿನಲ್ಲಿ 'ಕನ್ನಡತು ಪೈಂಗಿಲಿ' (ಕನ್ನಡದ ಗಿಳಿ) ಎಂಬ ಉಪನಾಮಗಳಿಂದ ಕರೆಯಲಾಗುತ್ತದೆ. ಸರೋಜಾದೇವಿ ಅವರು ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ಭಾರತದ 60ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಭಾರತ ಸರ್ಕಾರ 2008ರ ಜೀವಮಾನ ಸಾಧನೆ ಪ್ರಶಸ್ತಿ ನೀಡಿತ್ತು. 1992ರಲ್ಲಿ 'ಪದ್ಮಭೂಷಣ ಪ್ರಶಸ್ತಿ' ಮತ್ತು 1969 ರಲ್ಲಿ ಪದ್ಮಶ್ರೀಗೆ ಭಾಜನರಾಗಿದ್ದಾರೆ.

# ವಿನಯ್ ನನ್ನ ತಮ್ಮ ಎಂದ ರಮ್ಯಾ...



ಮಾಜಿ ಸಂಸದೆ ಹಾಗೂ ಮೋಹಕ ತಾರೆ ನಟಿ ರಮ್ಯಾ ಅವರು ಅಮೆರಿಕದಲ್ಲಿ ನಡೆಯುವ ನಾವಿಕ ಕಾರ್ಯಕ್ರಮಕ್ಕೆ ಅತಿಥಿಯಾಗಿ ಹೋಗಿದ್ದಾರೆ. ಈ ಬಾರಿಯ 'ನಾವಿಕ' ಸಮಾರಂಭಕ್ಕೆ ರಮ್ಯಾ ಜೊತೆ ನಟ ವಿನಯ್ ರಾಜ್ ಕುಮಾರ್ ಸಹ ಹೋಗಿದ್ದಾರೆ. ವಿಶೇಷ ಅಂದ್ರೆ ಪುನೀತ್ ರಾಜ್‌ಕುಮಾರ್ ಅವರ ಕಿರಿಯ ಪುತ್ರಿ ವಂದಿತಾ ಕೂಡಾ ಇವರ ಜೊತೆಗಿದ್ದಾರೆ.

ಸದ್ಯ ಅಮೆರಿಕದಲ್ಲಿರುವ ರಮ್ಯಾ ಅವರು ಸಮಾರಂಭದ ಬಿಡುವಿನ ವೇಳೆ ಅಮೆರಿಕದ ಬ್ಯೂಟಿಫುಲ್ ಲೊಕೇಶನ್‌ನಲ್ಲಿ ವಿನಯ್ ರಾಜ್‌ಕುಮಾರ್ ಹಾಗೂ ವಂದಿತಾ ಜತೆ ಸುತ್ತಾಟ ನಡೆಸಿದ್ದಾರೆ. ಅಮೆರಿಕದಲ್ಲಿ ಮೂವರೂ ಎಂಜಾಯ್ ಮಾಡುತ್ತಿರುವ ಫೋಟೋಗಳನ್ನ ರಮ್ಯಾ ತಮ್ಮ ಇನ್ ಸ್ಟಾಗ್ರಾಂನಲ್ಲಿ ಶೇರ್ ಮಾಡಿದ್ದು, ಫೋಟೋಗಳ ಜೊತೆಗೆ ಅದಕ್ಕೆ ಕ್ಯಾಪ್ಷನ್ ಹಾಕಿರುವ ರಮ್ಯಾ 'ನಾನು ಹಾಗೂ ಬೆಸ್ಟ್ ಕಂಪನಿ ಎಂದು ವಿನಯ್ ರಾಜ್ ಕುಮಾರ್ ಮತ್ತು ವಂದಿತಾ ಪುನೀತ್ ರಾಜ್‌ಕುಮಾರ್ ಅವರನ್ನು ಟ್ಯಾಗ್ ಮಾಡಿದ್ದಾರೆ. ರಮ್ಯಾ ಅವರ ಈ ಪೋಸ್ಟ್ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದ್ದು, ಕೆಲವರು ರಮ್ಯಾ ಹಾಗೂ ವಿನಯ್ ಅವರ ಫೋಟೋಗಳನ್ನು ಕೆಟ್ಟ ಕೊಳಕ ಕಾಮೆಂಟ್ ಹಾಕೋ ಮೂಲಕ ಟ್ರೋಲ್ ಮಾಡಿದ್ದಾರೆ!

ಹಲವರು ಡೇಟಿಂಗ್‌ನಲ್ಲಿ ಇದ್ದಾರೆ ಎಂದು ಬರೆದುಕೊಂಡಿದ್ದರೆ, ಬರೆಯ ಲಿಕ್ಕು ಆಗದ ಅಸಹ್ಯ ಕಾಮೆಂಟ್ ಹಾಕಿ ಅವಮಾನಿಸಿದ್ದಾರೆ. ಇದೀಗ ಈ ಟ್ರೋಲ್‌ಗಳಿಗೆ ಪ್ರತಿಕ್ರಿಯಿಸಿರುವ ರಮ್ಯಾ, 'ನೀವು ತುಂಬಾ ತಮಾಷೆ ಮಾಡು ತ್ತಿದ್ದೀರಾ... ವಿನಯ್ ರಾಜ್‌ಕುಮಾರ್ ನನಗೆ ತಮ್ಮನ ತರಹ. ನಿಮ್ಮೆಲ್ಲರ ಕಲ್ಪನೆಗೂ ಒಂದು ಮಿತಿ ಇರಲಿ ಎಂದು ತಿರುಗೇಟು ನೀಡಿದ್ದಾರೆ.

# 'ಕಮಲ್ ಶ್ರೀದೇವಿ' ಚಮತ್ಕಾರ ಮಾಡ್ತಾರಾ?

ತನ್ನ ಶೀರ್ಷಿಕೆಯಿಂದಲೇ ಗಮನ ಸೆಳೆದ ಚಿತ್ರ ಕಮಲ್ ಶ್ರೀದೇವಿ. ಇದು ಸಚಿನ್ ಚಲುವರಾಯ ಸ್ವಾಮಿ ಅವರ ಎರಡನೇ ಸಿನಿಮಾ. ರಾಜ್‌ವರ್ಧನ್ ನಿರ್ಮಾಣದ ಈ ಸಿನಿಮಾವನ್ನ ಸುನೀಲ್‌ಕುಮಾರ್ ಎಂಬ ನವ ಪ್ರತಿಭೆ ನಿರ್ದೇಶನ ಮಾಡಿದ್ದಾರೆ. ಸುಂದರ ನಟಿ ಸಂಗೀತಾ ಇದರಲ್ಲಿ ನಾಯಕಿಯಾಗಿದ್ದು ಇವರದ್ದು ವೇಶ್ಯೆ ಪಾತ್ರ ಎಂಬುದು ವಿಶೇಷ! ಈಗೀಗ ಸ್ಯಾಂಡಲ್‌ವುಡ್‌ನಲ್ಲಿ ಮಾಮೂಲಿ ಮಸಾಲೆ ರುಬ್ಬಿ ಸಿನಿಮಾ ಮಾಡುವ ಯಡವಟ್ಟು ಕಮ್ಮಿಯಾಗಿದೆ. ಒಳ್ಳೊಳ್ಳೆ ಕಂಟೆಂಟ್ ಇರೋ ಸಿನಿಮಾಗಳು ಬರ್ತಾ ಇವೆ.





ಏಳುಮಲೆ ಇದಕ್ಕೆ ತಾಜಾ ಉದಾಹರಣೆ. ನಾಳೆ 19ನೇ ತಾರೀಖು ಬಿಡುಗಡೆ ಆಗುತ್ತಿರುವ ಕಮಲ್ ಶ್ರೀದೇವಿ ಕೂಡ ಒಳ್ಳೆ ಕಂಟೆಂಟ್ ಇರುವ ಸಿನಿಮಾ ಅಂತ ನಮ್ಮ ರಾಜ್‌ವರ್ಧನ್ ಈಗಾಗಲೇ




ಹೇಳಿದ್ದಾರೆ. ಮತ್ತು ಈ ಕಾರಣದಿಂದಲೇ ತಾನು ನಿರ್ಮಾಣದ ಜವಾಬ್ದಾರಿ ಹೊತ್ತುಕೊಂಡಿದ್ದಾಗಿಯೂ ತಿಳಿಸಿದ್ದಾರೆ.ಇನ್ನುಳಿದಂತೆ, ರಮೇಶ್ ಇಂದಿರ, ಕಿಶೋರ್, ರಾಘು ಶಿವಮೊಗ್ಗ, ಮಿತ್ರ..... ಮುಂತಾದ ಘಟಾನುಘಟಿಗಳು ನಟಿಸಿದ್ದಾರೆ. ಒಟ್ಟಾರೆ, ಬಹು ನಿರೀಕ್ಷಿತ ಚಿತ್ರ ಕಮಲ್ ಶ್ರೀದೇವಿ ಮುಂದಿನ ಶುಕ್ರವಾರ ರಿಲೀಸ್ ಆಗುತ್ತಿದೆ... ಆಲ್ ದಿ ಬೆಸ್ಟ್.....ಶ್ರೀದೇವಿ ತಂಡಕ್ಕೆ!

# ಮಡೆಗಾರ್ಕೆ ಕಮ್ಮಿ ಮಾಡು ಮಡೆನೂರ್....

ಕಾಮಿಡಿ ಕಿಲಾಡಿ ಮಡೆನೂರ್ ಮನು ಅದೃಷ್ಟ ಇನ್ನೂ ಸ್ವಲ್ಪ ಗಟ್ಟಿಯಿದೆ. ಕನ್ನಡ ಸೇವಕರ ಕೃಪೆಯಿಂದ ಶಿವಣ್ಣನ ಕ್ಷಮೆ ಗಿಟ್ಟಿಸಿ ಮತ್ತೆ ಬಣ್ಣ ಹಚ್ಚಿದ್ದಾನೆ ಮನು. ಈತ ಮಾಡಿದ ಯಡವಟ್ಟನಿಂದ- ದುರಹಂಕಾರದ ಮಾತಿನಿಂದ 'ಕುಲದಲ್ಲಿ ಕೀಳ್ಯಾವುದೋ' ಮಕಾಡೆ ಮಲಗಿ, ಆ ಚಿತ್ರದ ನಿರ್ಮಾಪಕರು ಭರ್ತಿ 4 ಕೋಟಿ ಕಳಕೊಂಡ್ರು! ಮನುಗೆ ಈಗ ಪುನರ್ಜನ್ಮ ಸಿಕ್ಕಿದೆ. ಇನ್ನಾದರೂ ಅಹಂ ಬಿಟ್ಟು ತೆಪ್ಪಗೆ ನಟಿಸಿಕೊಂಡಿದ್ರೆ, ಒಳ್ಳೆ ಭವಿಷ್ಯ ಲಭ್ಯವಾಗಬಹುದು. ಅಂದಹಾಗೆ, ಇದೀಗ ನಟರಾಜ್ ಎಂಬ ಮಹಾನುಭಾವರು ಈ ಮನುವನ್ನು ನಂಬಿ ಹಣ ಹಾಕುತ್ತಿದ್ದಾರೆ. ಇವರ ನಿರ್ಮಾಣದ, ಮನು ಅಭಿನಯದ ಹೊಸ ಚಿತ್ರದ ಹೆಸರು ಮುತ್ತರಸ. ಈ ಶೀರ್ಷಿಕೆಯನ್ನು ರಾಮ್ ನಾರಾಯಣ್ ಕೊಟ್ಟರು ಅನ್ನೋದು ಮನು ಹೇಳಿಕೆ. ಅದಿರಲಿ, ಮನು ಇನ್ನು ಮೇಲಾದರೂ ಮಡೆದಾಟ ನಿಲ್ಲಿಸಿ ನಟನೆಯತ್ತ ಗಮನಹರಿಸಿದರೆ ಒಳ್ಳೇದು.






ಎಲ್ಲಾ ನಿರ್ಮಾಪಕರು ದುಡ್ಡು ಗುಡ್ಡೆ ಹಾಕಿಕೊಂಡು ನಿರ್ಮಾಣಕ್ಕೆ ಬರಲ್ಲ, ಅಲ್ಲಿ ಇಲ್ಲಿ ಸಾಲ ಮಾಡಿ ಬಡ್ಡಿಗೆ ತಂದು ಆಸೆಯಿಂದ ಸಿನಿಮಾ ನಿರ್ಮಿಸುತ್ತಾರೆ. ಅವರು ಬದುಕಿದ್ರೆ, ತಾನೇ ನಟ ನಟಿಯರು.... ಏನಿವೇ, ಮುತ್ತರಸ ಚಿತ್ರಕ್ಕೆ ಶುಭವಾಗಲಿ.

Vol. 41 No. 15 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com